ಅಂಬೇಡ್ಕರ್ ಪರಿನಿರ್ವಾಣ ದಿನದ ನೆನಪಿನಲ್ಲಿ

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಡಿಸೆಂಬರ್, ೨೦೧೮ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೭ ಸಂಚಿಕೆ: ೧೧

ಚಂದಾ ರೂ. ೨೦೦/- (ವ್ಯಕ್ತಿಗಳಿಗೆ) ರೂ. ೩೦೦/- ಸಂಸ್ಥೆಗಳಿಗೆ) ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇನ್ನೂ ಆರು ತಿಂಗಳ ನಂತರ ನಡೆಯಬೇಕಾಗಿರುವ ಲೋಕಸಭಾ ಚುನಾವಣೆಗಳ ಕಾವು ಈಗಾಗಲೇ ದೇಶಾದ್ಯಂತ ಏರಲಾರಂಭಿಸಿದೆ. ಈಗ ನಡೆದಿರುವ ನಾಲ್ಕು ರಾಜ್ಯ-ರಾಜಸ್ಥಾನ, ಮಧ್ಯ ಪ್ರದೇಶ, ಛತ್ತೀಸಗಢ ಮತ್ತು ಮಿಜ಼ೋರಾಂ-ವಿಧಾನಸಭಾ ಚುನಾವಣೆಗಳಿಗೆ ಪೂರಕವಾಗುವಂತೆ ಈ ಕಾವನ್ನು ಏರಿಸಲಾಗುತ್ತಿದೆ. ಬಿಜೆಪಿ ಕಳೆದ ಎರಡೂವರೆ ದಶಕಗಳಿಂದ ಪ್ರತಿ ಚುನಾವಣೆಗೆ ಮುನ್ನ ಎಬ್ಬಿಸುವ ರಾಮಮಂದಿರ ನಿರ್ಮಾಣದ ಕೂಗನ್ನು ಮತ್ತೆ ಈಗ ಮೊಳಗಿಸಿದೆ. ಇನ್ನು. ಕರ್ನಾಟಕದ ಎರಡು ಪಕ್ಷಗಳ ಮೈತ್ರಿ ಸರ್ಕಾರದ ದಿನನಿತ್ಯದ ನಡೆ ನುಡಿಗಳನ್ನು ನೋಡಿದರೆ ಕಾಂಗ್ರೆಸ್ ನೇತೃತ್ವದ ಹನ್ನೆರಡು ಪಕ್ಷಗಳ ಉದ್ದೇಶಿತ 'ಮಹಾಘಟಬಂಧನ' ಹೇಗಿರುವುದೆಂದು ಊಹಿಸಲೂ ಕಷ್ಟವಾಗುತ್ತಿದೆ. ಇಲ್ಲಿನ ಮೈತ್ರಿ ಸರ್ಕಾರದ ನಾಯಕಮಣಿಯು ಎಲ್ಲೆಲ್ಲೂ ಎಗ್ಗಿಲ್ಲದೆ ಹೇಳಿಕೊಳ್ಳುತ್ತಿರುವಂತಹ 'ದೇವರ ಅನುಗ್ರಹ'ದಿಂದ ಮಾತ್ರ ಕೇಂದ್ರದಲ್ಲಿ ಮಹಾಘಟನಬಂಧನ ಸರ್ಕಾರ ರಚನೆಯಾಗಬಹುದೆಂಬ ವ್ಯಂಗ್ಯಕ್ಕೆ ಕಾರಣವಾಗಿದೆ! ಮೋದಿ ಸರ್ಕಾರ ಎಲ್ಲ ನಿರೀಕ್ಷೆಗಳನ್ನೂ ಹುಸಿಗೊಳಿಸಿಯೂ ಮಹಾ ಸಾಧನೆಯ ಆಡಂಬರದ ಮಾತುಗಳನ್ನು ಆಡುತ್ತಿರುವ ಭಂಡತನವನ್ನು ನೋಡಿದಾಗ ಈ ದೇಶಕ್ಕೆ ಇಂತಹ ದೇವರ ಅನುಗ್ರಹ ಮಾತ್ರ ಒಳ್ಳೆಯದನ್ನು ಮಾಡಿತೋ ಎಂಬ ಆಸೆಯೂ ಕೆಲವರಲ್ಲಿ ಹುಟ್ಟಿದಂತಿದೆ!

ಇದಕ್ಕೆ ಕಾರಣ, ಈಗ ಒಂದೊಂದಾಗಿ ಹೊರಬೀಳುತ್ತಿರುವ ಮೋದಿ ಸರ್ಕಾರದ ಹಲವು ಅನುಮಾನಾಸ್ಪದ ನಡೆಗಳು ಮತ್ತು ಆಘಾತಕಾರಿ ಆಡಳಿತ ದೋಷಗಳು. ರಫೇಲ್ ರಾದ್ಧಾಂತ, ಆರ್ಥಿಕ ಕ್ಷೇತ್ರದಲ್ಲಿನ ಹಲವು ಹಿನ್ನಡೆಗಳ ಜೊತೆಗೆ ಈಗ ನಮ್ಮ ಸರ್ವೋಚ್ಚ ನ್ಯಾಯಾಲಯದ ಮುಂದೆ ದಿನವಹಿ ಆಧಾರದ ಮೇಲೆ ಬಿಚ್ಚಿಕೊಳ್ಳುತ್ತಿರುವ ಸಿ.ಬಿ.ಐ.ನೊಳಗಿನ ಜಗಳದ ಪ್ರಕರಣ ಹೊರಹಾಕುತ್ತಿರುವ ಆಡಳಿತದ ರಾಜಕೀಯೀಕರಣ, ಅದು ಹುಟ್ಟು ಹಾಕಿರುವ ಆಡಳಿತಾತ್ಮಕ ಅದಕ್ಷತೆ ಮತ್ತು ಭ್ರಷ್ಟಾಚಾರದ ವಾಸನೆಗಳು  ಜನರನ್ನು ಕಂಗೆಡಿಸಿವೆ. ರಾಮಜನ್ಮಭೂಮಿ ವಿವಾದದ ವಿಚಾರಣೆ ಮತ್ತು ಶಬರಿಮಲೈ ದೇವಸ್ಥಾನ ಪ್ರವೇಶ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಮಂತ್ರಿಗಳು ಮತ್ತು ಬಿಜೆಪಿಯ ಅಧ್ಯಕ್ಷರೂ ಸೇರಿದಂತೆ ಅದರ ಹಲವು ಪದಾಧಿಕಾರಿಗಳು ನೀಡುತ್ತಿರುವ ಹೇಳಿಕೆಗಳು ಸಂವಿಧಾನಾತ್ಮಕ ಆಡಳಿತಕ್ಕೆ ಹೇಳಿದ ಧಿಕ್ಕಾರಗಳಂತಿವೆ. ಸದ್ಯಕ್ಕೆ ಅಷ್ಟೋ ಇಷ್ಟೋ ಉಳಿದಿರುವ ನಮ್ಮ ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನೂ ಪೂರ್ಣ ಕಿತ್ತುಹಾಕುವ ಆಘಾತಕಾರಿ ಪ್ರಯತ್ನವಿದು.

ಸಂಘ ಪರಿವಾರದ ಈ ಅತಿ ವರ್ತನೆಗೆ ಬಹುಶಃ ಕಾರಣವಾಗಿರುವುದು, ಕಳೆದ ಇಪ್ಪತ್ತೈದು ವರ್ಷಗಳಿಂದ ಬಹು ಸುಯೋಜಿತವಾಗಿ ನಿರ್ಮಿಸಿದ್ದ ರಾಜಕೀಯ ವಾತಾವರಣ ಕಳೆದ ಚುನಾವಣೆಯ ಹೊತ್ತಿಗೆ ಅದು ಕಡೆಗೂ ಒಬ್ಬ ತಕ್ಕ ನಾಯಕನ್ನು ಕಂಡುಕೊಂಡ ಯಶಸ್ಸಿನ ಆಚರಣೆಯಲ್ಲಿರುವಾಗಲೇ ಆ ನಾಯಕತ್ವ ಸೋಲಿನ ಭೀತಿಯನ್ನು ಎದುರಿಸುತ್ತಿರುವುದು. ಈ ಸೋಲಿನ ಸಾಧ್ಯತೆಗೆ ಕಾರಣ, ಈ ನಾಯಕತ್ವಕ್ಕೆ ಕೈ-ಬಾಯಿಗಳು ಎಷ್ಟು ದೊಡ್ಡವೋ ಅದರ ಹೃದಯ ಮತ್ತು ಬುದ್ಧಿ ಅಷ್ಟೇ ಸಣ್ಣದಾಗಿರುವುದು. ತನ್ನ ಸದ್ಯದ ಪ್ರಾಂತೀಯ ನಾಯಕತ್ವ ಮತ್ತು ಭವಿಷ್ಯದ ರಾಷ್ಟ್ರೀಯ ನಾಯಕತ್ವಕ್ಕಾಗಿ ಅದು ಯೋಗಿ ಆದಿತ್ಯನಾಥ ಮತ್ತು ಅನಂತಕುಮಾರ ಹೆಗಡೆಯಂಥವರನ್ನು ಆಯ್ದುಕೊಳ್ಳತೊಡಗಿರುವುದು ಇದಕ್ಕೆ ಸಾಕ್ಷಿಯಾಗಿದೆ. ಈ ಆಯ್ಕೆಗಳು ಅದು ನಂಬಿರುವ ಹಿಂದೂ ಧರ್ಮದ ಆವೃತ್ತಿ ಎಂಥಹುದು ಎಂಬುದನ್ನು ಢಾಳಾಗಿ ಸೂಚಿಸುತ್ತಾ ಈ ದೇಶದ ನಾಗರಿಕ ಸಮಾಜ ಇದರ ರಾಜಕಾರಣದ ಬಗ್ಗೆ ಗಂಭೀರ ಮರುಚಿಂತಿಸುವಂತೆ ಮಾಡಿದೆ.

ಸಂಘ ಪರಿವಾರದ ನಾಯಕತ್ವದ ಈ ದೌರ್ಬಲ್ಯಗಳಿಗೆ ಮುಖ್ಯಕಾರಣ, ಅದಕ್ಕೊಂದು ಸುಸಂಬದ್ಧ ಚರಿತ್ರೆ ಇಲ್ಲದಿರುವುದು. ಅದು ಕೆಲ ಮಧ್ಯಕಾಲೀನ ರೂಢಿ-ನಂಬಿಕೆಗಳನ್ನೇ ಸತ್ಯವೆಂದು ಭಾವಿಸಿ ತನ್ನ ತಾತ್ವಿಕತೆಯನ್ನು ಕಟ್ಟಿಕೊಂಡಿದ್ದು, ಅದಕ್ಕೆ ಆಧುನಿಕ ಭಾರತದ ಚರಿತ್ರೆಯಲ್ಲಿ ಒಂದು ಸುಸಂಬದ್ಧತೆಯನ್ನು ದೊರಕಿಸಿಕೊಳ್ಳಲಾಗದೇ ಹೋಗಿದೆ. ಹಾಗಾಗಿಯೇ ವಸಾಹತುಶಾಹಿ ವಿರೋಧಿ ರಾಷ್ಟ್ರೀಯ ಚಳುವಳಿಯಲ್ಲಿ ಭಿನ್ನಮತೀಯವಾಗಿ ಉಳಿದು ಅನುಮಾನಾಸ್ಪದವೆನಿಸಿಕೊಂಡ ಈ ತಾತ್ವಿಕತೆ ಈಗ ಆಧುನಿಕ ಭಾರತ ಕಟ್ಟಿಕೊಂಡ ತಾತ್ವಿಕತೆಯನ್ನು ಪ್ರತಿನಿಧಿಸುವ ನೆಹರೂ ಅವರೊಂದಿಗೆ ಭಿನ್ನಮತ ಹೊಂದಿದ್ದವರೆಂದು ಹೇಳಲಾಗುವ ಸರ್ದಾರ್ ಪಟೇಲ್ ಮತ್ತಿತರ ಕಾಂಗ್ರೆಸ್ ನಾಯಕರನ್ನು ತನ್ನ ನಾಯಕರನ್ನಾಗಿ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದು ಆ ಮೂಲಕ ಈ ಸುಸಂಬದ್ಧತೆಯನ್ನು ದೊರಕಿಸಿಕೊಳ್ಳುವ ಹವಣಿಕೆಯಲ್ಲಿದ್ದಂತಿದೆ.. ಮೋದಿ ಸರ್ಕಾರ ಪಟೇಲರ ಜಗತ್ತಿನ ಅತ್ಯಂತ ಎತ್ತರದ ಪ್ರತಿಮೆಯನ್ನು ಸ್ಥಾಪಿಸಿ ನಿಲ್ಲಿಸುವ ಮೂಲಕ ತನ್ನ ಚರಿತ್ರೆಯಲ್ಲಿನ ತನ್ನ ಅಷ್ಟೇ ಆಳದ ತಪ್ಪನ್ನು ಒಪ್ಪಿಕೊಂಡಿದೆ ಅಷ್ಟೆ. ತೊಂದರೆ ಅಂದರೆ, ಅದು ತಪ್ಪೊಪ್ಪಿಗೆಯಂತಿರದೆ, ಮೋದಿ ಶೈಲಿಯ ಹುಸಿ ಹಾರಾಟದಂತಿದೆ.

ಆದರೆ ಕಾಂಗ್ರೆಸ್ ಏನು ಮಾಡುತ್ತಿದೆ? ಮುದಿಯಾಗಿ ಕುಸಿದು ಹೋಗಿದ್ದರೂ ಅತಿಯಾದ ಆತ್ಮಾಭಿಮಾನದ ಹುದಲಲ್ಲಿ ಸಿಕ್ಕಿಕೊಂಡಂತಿರುವ ಅದು ಮತ್ತೆ ತನ್ನನ್ನು ಪುನರನ್ವೇಷಿಸಿಕೊಂಡು ಏಳಬಲ್ಲ ತಾಕತ್ತಿಗೆ ಅಗತ್ಯವಾದ ಒಂದು ನಿಷ್ಠುರ ಆತ್ಮಾಲೋಕನಕ್ಕೆ ಸಿದ್ಧವಿಲ್ಲದಂತೆ ತೋರುತ್ತಿದೆ. ಮೋದಿ, ನೆಹರೂ ರಾಜಕಾರಣವನ್ನು ಖಂಡಿಸಿದರೆ, 'ನೀವು ಪ್ರಧಾನಿಯಾಗಿರುವುದು ನೆಹ್ರೂ ರಾಜಕಾರಣದಿಂದಾಗಿಯೇ' ಎಂದುತ್ತರಿಸಿ ಅದು ಅವರಿಂದ ಮತ್ತೆ ಕುಟುಂಬ ರಾಜಕಾರಣದ ಟೀಕೆಯನ್ನು ಆಹ್ವಾನಿಸಿಕೊಂಡು ಜನರ ಮುಂದೆ ಮತ್ತಷ್ಟು ಖಂಡನೆಗೆ ಒಳಗಾಗುತ್ತಿದೆ. ಗಾಂಧಿಯನ್ನು ಮರೆತು, ಬರೀ ನೆಹರೂರನ್ನೇ ಹಿಡಿದುಕೊಂಡಿರುವ ಕಾಂಗ್ರೆಸ್, ನೆಹರೂ ರಾಜಕಾರಣಕ್ಕೆ ಒಂದು ಗಂಭೀರ ಸವಾಲೊಡ್ಡಿರುವ ಮೋದಿ ರಾಜಕಾರಣಕ್ಕೆ ಪ್ರತಿಕ್ರಿಯಿಸುವ ಮಟ್ಟಕ್ಕಷ್ಟೆ ತನ್ನ ರಾಜಕಾರಣವನ್ನು ಕುಬ್ಜಗೊಳಿಸಿಕೊಂಡಿರುವುದು ಸಹಜವೇ ಆಗಿದೆ. ರಾಹುಲರ ದೇವಾಲಯಗಳ ಸರಣಿ ಭೇಟಿ, ತೀರ್ಥಯಾತ್ರೆಗಳು, ಜನಿವಾರ ಪ್ರದರ್ಶನ ಇತ್ಯಾದಿ ಚಿಲ್ಲರೆ ರಾಜಕಾರಣದ ಮುಂದುವರಿಕೆಯಾಗಿಯೇ ಮೊನ್ನೆ ಆ ಪಕ್ಷದ ಬ್ರಾಹ್ಮಣ ನಾಯಕರೊಬ್ಬರು 'ಹಿಂದೂ ಧರ್ಮದ ಬಗ್ಗೆ ಮಾತಾಡಲು ಬ್ರಾಹ್ಮಣರಿಗೆ ಮಾತ್ರ ಅಧಿಕಾರವಿರುವುದು' ಎಂದು ಹೇಳಿರುವುದು. ಇದೆಲ್ಲವೂ ನೆಹರೂ ತಮ್ಮ ರಾಜಕಾರಣದ ಅಡಿಗಲ್ಲಾಗಿ ಪ್ರತಿಪಾದಿಸಿದ ಸೆಕ್ಯುಲರಿಸಂನ ತಾಳಿಕೆ-ಬಾಳಿಕೆಗಳ ಟೊಳ್ಳುತನವನ್ನು ಸಾಬೀತು ಮಾಡುವಂತಿದೆ. ಕಾಂಗ್ರೆಸ್ ತನ್ನ ನಿಜ ನಾಯಕ ಗಾಂಧಿಗೆ ಮರಳದಿದ್ದರೆ ಅದಕ್ಕೆ ಉಳಿಗಾಲವಿದ್ದಂತಿಲ್ಲ ಮತ್ತು ರಾಷ್ಟ್ರಕ್ಕೆ ಸಂಘ ಪರಿವಾರದ ರಾಜಕಾರಣದಿಂದ ಮುಕ್ತಿ ಇದ್ದಂತಿಲ್ಲ.

ಈ ದೃಷ್ಟಿಯಿಂದ ನೋಡಿದಾಗ 'ಮಹಾಘಟಬಂಧನ'ದ ಯಶಸ್ಸಿಗೆ ಅಡ್ಡಿಯಾಗಿರುವುದು ರಾಹುಲ ಗಾಂಧಿ ನಾಯಕತ್ವ ಪ್ರತಿನಿಧಿಸುವ ನೆಹರೂ ಕುಟುಂಬ ರಾಜಕಾರಣದ ಮಹತ್ವಾಕಾಂಕ್ಷೆಯೇ ಆಗಿದ್ದಂತಿದೆ. ಆದರೆ ಆ ಮಹತ್ವಾಕಾಂಕ್ಷೆ ಎಷ್ಟು ವೈಯಕ್ತಿಕ ಮಟ್ಟದ್ದೆಂದರೆ ಇದ್ದುದರಲ್ಲಿ ಕಾಂಗ್ರೆಸ್‌ನ ಭದ್ರ ನೆಲೆಯಂತಿರುವ ಕರ್ನಾಟಕದಲ್ಲಿ ತನ್ನ ರಾಜ್ಯ ನಾಯಕತ್ವವನ್ನು ದೈನೇಸಿ ಸ್ಥಿತಿಗೆ ತಳ್ಳಿಬಿಟ್ಟಿದೆ. ಇದ್ದೂ ಇಲ್ಲದಂತೆ ನಡೆಯುತ್ತಿರುವ ಇಲ್ಲಿನ ಮೈತ್ರಿ ಸರ್ಕಾರದಲ್ಲಿ ಇಂದು ಎದ್ದು ಕಾಣುತ್ತಿರುವ ಕಾಂಗ್ರೆಸ್ ಮುಖವೆಂದರೆ ಈಗ ದೇವೇಗೌಡರ ಕುಟುಂಬ ರಾಜಕಾರಣದೊಂದಿಗೆ ರಾಜಿ ಮಾಡಿಕೊಂಡು ಮಹದವಕಾಶಕ್ಕಾಗಿ ಕಾಯುತ್ತಿರುವ ಡಿ.ಕೆ. ಶಿವಕುಮಾರ್ ಎಂದರೆ ಈ ಪಕ್ಷದ ಬಗ್ಗೆ ಹೇಳಲು ಏನುಳಿದಿದೆ?

**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ನೀವು ಸಂಪಾದಕರ ಟಿಪ್ಪಣಿಗಳಲ್ಲಿ (ನವೆಂಬರ್ ಸಂಚಿಕೆ) ಹೇಳಿರುವ '... ಅಂತಹ ಸಾಂಸ್ಕೃತಿಕ ಬೇರುಗಳುಳ್ಳ ಪ್ರಶ್ನೆಗಳ ವಿವೇಚನೆ ಸಂಪೂರ್ಣ ನ್ಯಾಯಸಮ್ಮತವೆನಿಸುವುದು ಅವು ಒಂದು ಸಾಮಾಜಿಕ–ಸಾಂಸ್ಕೃತಿಕ ಆವರಣದ ಜೀವಂತ ಅರಿವಿನೊಂದಿಗೆ ನಡೆದಾಗ ಮಾತ್ರ' ಎಂಬ ಮಾತು, ಒಂದು ಸಮಂಜಸ ನಿಲುವು; ನ್ಯಾಯವನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸುವಲ್ಲಿ ಪರಿಗಣಿಸಬೇಕಾದ ಅವಶ್ಯಕ ಆಯಾಮ ಎನ್ನುವುದು ನನ್ನ ಅಭಿಮತವೂ ಸಹ.

**–ಡಾ. ಹೆಚ್.ಎಸ್. ಈಶ್ವರ,** ಬೆಂಗಳೂರು

'ನಿರುತ್ತರರಾದ ಜಿ.ಎನ್. ದೇವಿ ' ಎಂಬ ಬರಹ ನಮ್ಮ ಬುದ್ಧಿಜೀವಿಗಳ ಇಬ್ಬಂದಿತನ ಮತ್ತು ಬೌದ್ಧಿಕ ಮುಖವಾಡಗಳ ಬದುಕನ್ನು ಸ್ಪಷ್ಟವಾಗಿ ಸೂಚಿಸುವಂತಿದೆ. ಭಾರತದಲ್ಲಿ ಬೌದ್ಧಿಕತೆ ಎಂದರೇನೇ ಹೊರಗೆ ಏನೇ ಮಾತಾಡಿದರೂ ಒಳಗಿಂದ ಅದು ಇಂಗ್ಲಿಷ್ ಮತ್ತು ಐರೋಪ್ಯ ಚಿಂತನೆಯ ಪರವೇ. ಈ ದೃಷ್ಟಿಯಿಂದ ಎಚ್. ಎಸ್. ಶಿವಪ್ರಕಾಶರ ಪುಟ್ಟ ಬರಹ ಕ್ಲಿಷ್ಟವಾಗಿದ್ದರೂ ಸತ್ಯವನ್ನು ಹೇಳುತ್ತದೆ.

**–ಡಾ. ಎಂ.ಸಿ. ಶಶಿಕುಮಾರ,** ನೆಲಮಂಗಲ

ಗಣೇಶ್ ದೇವಿಯವರ ಸಂದರ್ಶನ ಓದಿದಾಗ ಅವರು ಆದಿವಾಸಿ ಭಾಷೆಗಳ ಸಂರಕ್ಷಣೆಗಾಗಿ ಮಾಡಿರುವ ಅಗಾಧ ಕೆಲಸದ ಬಗ್ಗೆ ತಿಳಿದು ತುಂಬ ಮೆಚ್ಚುಗೆಯಾಯಿತು. ಆದರೆ ಅವರು ಮಾತೃಭಾಷಾ ಶಿಕ್ಷಣ ಮಾಧ್ಯಮದ ಬಗ್ಗೆ ಹೊಂದಿರುವ ನಿಲುವು ಮಾತ್ರ ಅನುಮಾನಾಸ್ಪದವೆನಿಸಿತು. ಇದು ಹೆಚ್ಚು ಸ್ಪಷ್ಟವಾಗುವುದು ಅವರು ಈ ಸಂದರ್ಶನದ ಮೊದಲ ಭಾಗದಲ್ಲಿನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಸಂಸ್ಕೃತ ಮತ್ತು ಲ್ಯಾಟಿನ್ ಭಾಷೆಗಳು ಶಿಕ್ಷಣ ಮಾಧ್ಯಮದ ಭಾಷೆಗಳಾಗಿದ್ದರೂ ಅವು ನಶಿಸಿಹೋದವು ಎಂದು ಉತ್ತರಿಸುವಾಗ ಅವರಿಗೆ ಅವು ಎಂತಹ ಮತ್ತು ಯಾವ ಸಮಾಜದ ಶಿಕ್ಷಣದ ಭಾಷೆಗಳಾಗಿದ್ದವು ಮತ್ತು ಅವನ್ನು ಇಂದಿನ ಜನಭಾಷೆಗಳಿಗೆ ಹೋಲಿಸಲಾಗದು ಎಂಬ ಪರಿವೆಯೇ ಇಲ್ಲ.ಇದಕ್ಕೆ ಕಾರಣ ಅವರ 'ಪ್ರಗತಿಪರತೆ' ಜನಪ್ರಿಯವೂ ಆಗುವ ಅವಸರದಲ್ಲಿರುವುದು! ಇಲ್ಲದಿದ್ದರೆ ಅವರು ನಿಮ್ಮ ಪ್ರಶ್ನೆಗಳಿಗೆ ಉತ್ತರಕೊಡಬೇಕಿತ್ತು. ಅಥವಾ ಈಗ ಕೊಟ್ಟಿದ್ದಾರೋ ತಿಳಿಯದು! ಜನ ಬುದ್ಧಿಜೀವಿಗಳ ಬಗ್ಗೆ ಕ್ರಮೇಣ ತಿರಸ್ಕಾರ ಬೆಳೆಸಿಕೊಳ್ಳುತ್ತಿರುವುದಕ್ಕೂ ಇವರ ವರ್ತನೆಗೂ ಈಗ ಸರಿಹೋಗುತ್ತಿದೆ ಬಿಡಿ. ನಾಗೇಶ್ ಹೆಗಡೆಯವರ ಲೇಖನ ನಮ್ಮ ಪೋಷಕರ ಕಣ್ಣು ತೆರೆಸಬೇಕು.

**–ಶಿವಕುಮಾರ್ ಎಸ್. ಆರ್.,** ತುಮಕೂರು

ನವೆಂಬರ್ ಸಂಚಿಕೆಯು ಎಲ್ಲ ಕ್ಷೇತ್ರಗಳಲ್ಲೂ ಕನ್ನಡತನವನ್ನು ನಿರೂಪಿಸುತ್ತಾ ಚೆನ್ನಾಗಿ ಮೂಡಿಬಂದಿದೆ. ಜೊತೆಗೆ ಗಣೇಶ್ ಎನ್. ದೇವಿಯವರ ಸಂದರ್ಶನ ಇದಕ್ಕೆ ಒಳ್ಳೆಯ ಪಾತಳಿಯನ್ನೇ ನಿರ್ಮಿಸಿದೆ. ಆದರೆ ಭಾರತದಲ್ಲಿನ ಭಾಷಿಕ ಅಸಮಾನತೆಯ ಬಗ್ಗೆ ಹೆಚ್ಚು ಚರ್ಚೆಯ ಅಗತ್ಯವಿದೆ.

ಹಿಂದಿ ಮತ್ತು ಇಂಗ್ಲಿಷ್ ಬಲ್ಲವರೇ ಇಂದು ಶಿಕ್ಷಣ ಉದ್ಯೋಗ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಒಂದು ಪ್ರದೇಶ ಮತ್ತು ಒಂದು ವರ್ಗದವರೇ ಮುಂದುವರೆಯುವಂತಾಗಿದ್ದು ಇದು ಸಂವಿಧಾನ ಹೇಳುವ ಸಮಾನತೆಗೆ ವಿರುದ್ಧವಾಗಿದೆ. ಉದಾಹರಣೆಗೆ ಚಾಮರಾಜನಗರರ ಜಿಲ್ಲೆಯ ಮೂಲೆಯ ಒಬ್ಬ ಹುಡುಗಿ ಪಿಯುಸಿ ನಂತರ ಸಿ.ಎ. ಅಥವಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉನ್ನತಿ ಹೊಂದುವ ಅವಕಾಶವೇ ಇಲ್ಲವಾಗಿದೆ. ಆದರೆ ಹಿಂದಿ ಪ್ರದೇಶದವರು ಎಲ್ಲ ಪರೀಕ್ಷೆಗಳನ್ನೂ ಹಿಂದಿಯಲ್ಲೇ ಬರೆದು ಸುಲಭವಾಗಿ ತೇರ್ಗಡೆಯಾಗಿ ಕರ್ನಾಟಕದಂತಹ ಹಿಂದಿಯೇತರ ರಾಜ್ಯಗಳಿಗೆ ಉದ್ಯೋಗ ಪಡೆಯಲು ಬಂದು ಸ್ಥಳೀಯರ ಉದ್ಯೋಗಾವಕಾಶಗಳಿಗೆ ಚ್ಯುತಿ ತಂದಿದ್ದಾರೆ. ಈ ಆಕ್ರಮಣ ಅನ್ಯಾಯವಲ್ಲದೆ ಮತ್ತೇನು? ಎಲ್ಲ ಭಾರತೀಯ ಭಾಷೆಗಳನ್ನೂ ರಾಷ್ಟ್ರದ ಅಧಿಕೃತ ಭಾಷೆಗಳೆಂದು ಘೋಷಿಸಲಾಗಿದ್ದರೂ ವ್ಯಾವಹಾರಿಕವಾಗಿ ಹಿಂದಿ ಮತ್ತು ಇಂಗ್ಲಿಷ್ ಮಾತ್ರ ಅಧಿಕೃತ ಭಾಷೆಯಂತಾಗಿವೆ. ನಮ್ಮ ರಾಜಕಾರಣಿಗಳೋ ತಮ್ಮದೇ ಅವಾಂತರಗಳಲ್ಲಿಯೇ ಮುಳುಗಿದ್ದು ಜನರ ಮೇಲಿನ ಈ ಭಾಷಿಕ ಅನ್ಯಾಯ–ದಬ್ಬಾಳಿಕೆಗಳನ್ನು ಕೇಳುವವರೇ ಇಲ್ಲವಾಗಿದ್ದಾರೆ.

**–ಜನಾರ್ದನ ಸಿ.ಎಸ್,** ಮೈಸೂರು

ಹೆಚ್.ಆರ್ ಸುಜಾತಾ ಅವರ ಲಲಿತ ಪ್ರಬಂಧ 'ಬಾಡೆಸ್ರು ಕನೋ ಅಪ್ಪ' ಅದರ ಅಪ್ಪಟ ಆಲೂರು ಮಣ್ಣಿನ ಭಾಷೆಯ ಜೋಶ್‌ನಿಂದಾಗಿ ನಮ್ಮ ತಲೆದೂಗುವಂತೆ ಮಾಡಿತು.

**–ಶಾರದಾ ತಿಮ್ಮೇಗೌಡ,** ಹುಣಸೂರು

ವಸುಧೇಂದ್ರರ 'ಮೋಹನಸ್ವಾಮಿ' ಕಥೆ ಮತ್ತು ಸಲಿಂಗ ಕಾಮದ ಬಗ್ಗೆ ನೀವು ಬರೆದಿರುವುದು ನಿಜ. ನಿಮ್ಮ ಸತ್ಯ ಮತ್ತು ದಿಟ್ಟ ಮಾತುಗಳಿಗಾಗಿ ವಂದನೆಗಳು.

**–ಡಾ. ವಸುಂಧರಾ ರಾಜಶೇಖರ್,** ಬೆಂಗಳೂರು

ಧರ್ಮ ವಿಚಾರ ಪುಟದಲ್ಲಿ ಜಿಡ್ಡು ಕೃಷ್ಣಮೂರ್ತಿ ಅವರ ವಿಚಾರಗಳ ಬಗ್ಗೆ ಓದಿ ಅವರ ಬಗ್ಗೆ ಹೆಚ್ಚು ತಿಳಿಯುವ ಕುತೂಹಲವುಂಟಾಗಿದೆ.

**–ವೆಂಕಟೇಶ ಮಾಚಕನೂರ,** ಧಾರವಾಡ

ಗಂಗೆ ಉಳಿಸಲು ಪ್ರಾಣ ನೀಗಿದ ಸ್ವಾಮಿ ಸನಾನಂದರ ಬಲಿದಾನ ನೀವು ನಿಮ್ಮ ಬರಹದಲ್ಲಿ ಹಾರೈಸಿದಂತೆ ವ್ಯರ್ಥವಾಗಕೂಡದು. ಅವರ ಸಾವು ಹಿಂದುತ್ವ ರಾಜಕಾರಣದ ದೋಖಾತನವನ್ನು ಬಯಲಿಗೆಳೆದಿದೆ. ಇನ್ನು ಗದುಗಿನ ತೋಂಟದಾರ್ಯ ಸ್ವಾಮೀಜಿಯವರ ಸಾವೂ ಆಘಾತಕಾರಿಯಾದದ್ದು. ಬಸವಣ್ಣವರ ಹೆಸರಿನಲ್ಲಿ ತಮ್ಮದೇ ಪಾಳೆಪಟ್ಟುಗಳನ್ನು ಕಟ್ಟಿಕೊಂಡಿರುವ ಇಂದಿನ ಹಲವು, ಮಠಾಧೀಶರ ಮಧ್ಯೆ ಅವರು ಬಸವ ತತ್ವದ ನಿಜ ಅನುಯಾಯಿಯಾಗಿದ್ದರು. ಈ ಇಬ್ಬರು ಮಹನೀಯರನ್ನು ಕುರಿತ ಪತ್ರಿಕೆಯ ಶ್ರದ್ಧಾಂಜಲಿ ಸಾರ್ಥಕವಾದವುಗಳು.

**–ಜಿ. ಸಿದ್ಧಗಂಗಪ್ಪ,** ದಾವಣಗೆರೆ

ಅಕ್ಟೋಬರ್ ಸಂಚಿಕೆಯಲ್ಲಿನ ಸುನಂದಾ ಕಡಮೆಯವರ ಕಥೆ 'ಮುಗಿಲ ಜಾಡು ಹಿಡಿದು;ಮನೋಜ್ಞವಾಗಿದ್ದು ಗಾಂಧಿ ಸಂಚಿಕೆಯನ್ನು ಪರಿಪೂರ್ಣಗೊಳಿಸಿದೆ

**–ರೇಖಾಂಬಾ ಟಿ.ಎಲ್.,** ಶಿವಮೊಗ್ಗ

ಗಾಂಧಿಯನ್ನೇ ಕೇಂದ್ರವನ್ನಾಗಿಟ್ಟುಕೊಂಡ ಅಕ್ಟೋಬರ್ ಸಂಚಿಕೆ ವೈವಿಧ್ಯಮಯತೆಯಿಂದ ಮೊದಲಿನಿಂದ ಕೊನೆಯವರೆಗೆ ಓದುವಂತಾದರೂ, ಬಹುತೇಕ ಎಲ್ಲ ಪತ್ರಿಕೆಗಳೂ ಇದೇ ವಿಷಯವನ್ನು ತೀಡಿ ತೀಡಿ ಹೇಳುತ್ತಿರುವುದರಿಂದ ಸ್ವಲ್ಪ ರೇಜಿಗೆಯೂ ಉಂಟಾಯಿತು. ಅಕ್ಟೋಬರ್‌ನಲ್ಲಿ ಗಾಂಧಿ, ನವೆಂಬರ್ ನಲ್ಲಿ ಕನ್ನಡ ಈ ರೀತಿಯ ಕ್ಲೀಷೆಗಳನ್ನು ತಮ್ಮಂತಹ ಪತ್ರಿಕೆ ಮಾತ್ರ ದಾಟಬಲ್ಲುದು. ಬೇರೆ ಎಲ್ಲ ತಾತ್ವಿಕ ಚರ್ಚೆಯುಳ್ಳ ಲೇಖನಗಳಿಗಿಂತ 'ಗಾಂಧಿ ಧರ್ಮ' ನನಗಿಷ್ಟವಾಯಿತು. ಯಾವುದೇ ತಾತ್ವಿಕತೆ ನಮ್ಮ ನೈಮಿತ್ತಿಕದಲ್ಲಿ

(೯ನೇ ಪುಟಕ್ಕೆ

### ಜನವರಿ ೧೨ ಹಾಗೂ ೧೩ರಂದು
### ಕುಪ್ಪಳ್ಳಿಯಲ್ಲಿ ಸಮಾಜವಾದಿ ಅಧ್ಯಯನ ಶಿಬಿರ

ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಈ ಮೊದಲು ಕಳೆದ ಅಕ್ಟೋಬರ್ ೨೭ ಹಾಗೂ ೨೮ರಂದು ಕುಪ್ಪಳ್ಳಿಯಲ್ಲಿ ಆಯೋಜಿಸಲು ಉದ್ದೇಶಿಸಿದ್ದ ತನ್ನ ವಾರ್ಷಿಕ ಆಧ್ಯಯನ ಶಿಬಿರವನ್ನು ಶಿವಮೊಗ್ಗ ಲೋಕಸಭಾ ಉಪಚುನಾವಣೆಯ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು. ಅದನ್ನು ಈಗ ೨೦೧೯ರ ಜನವರಿ ೧೨ ಹಾಗೂ ೧೩ರಂದು (ಶನಿವಾರ ಮತ್ತು ಭಾನುವಾರ) ಏರ್ಪಡಿಸಲು ನಿರ್ಧರಿಸಲಾಗಿದೆ. ಶಿಬಿರಾರ್ಥಿಗಳಾಗಿ ಭಾಗವಹಿಸ ಬಯಸುವವರು.ಈಗ <u>ಹೊಸದಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಲು</u> ಕೋರಲಾಗಿದೆ.

ಶಿಬಿರದ ವಿಷಯ 'ರಾಷ್ಟ್ರೀಯತೆಯ ಅರ್ಥ–ಅಪಾರ್ಥಗಳು'.ಎಂಬುದಾಗಿದ್ದು, ಈ ಶಿಬಿರದಲ್ಲಿ ನಾಡಿನ ಹಿರಿಯ ಚಿಂತಕರು ಉಪನ್ಯಾಸಗಳನ್ನು ನೀಡಿ ಚರ್ಚೆಗಳನ್ನು ನಡೆಸಿಕೊಡುವರು.

೧೧ರ ರಾತ್ರಿಯ ಊಟದಿಂದ ಹಿಡಿದು ೧೩ರ ಸಂಜೆಯ ಚಹಾದವರೆಗೆ ಸಾಮೂಹಿಕ ವಸತಿ ಮತ್ತು ಊಟೋಪಹಾರಗಳ ವ್ಯವಸ್ಥೆ ಮಾಡಲಾಗುವುದು. ಶಿಬಿರ ಶುಲ್ಕ ಒಬ್ಬರಿಗೆ : ರೂ. ೩೦೦/– ವಿದ್ಯಾರ್ಥಿಗಳಿಗೆ: ರೂ ೨೦೦/– ವಸತಿ ಸೀಮಿತವಾಗಿರುವುದರಿಂದ ಆಸಕ್ತರು ಕೂಡಲೇ ಹೆಸರು ನೋಂದಾವಣೆ ಮಾಡಿಕೊಳ್ಳಬೇಕು. ಹೆಸರು ನೋಂದಾವಣೆಗಾಗಿ ಸಂಪರ್ಕ ದೂರವಾಣಿ ಸಂಖ್ಯೆಗಳು: ೯೭೩೧೯೨೯೭೩೧ / ೯೪೪೮೦೧೪೯೮೪

ಅಧ್ಯಕ್ಷರು, ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ

ಯುವಲಹರಿ

# ಗಂಡು ಸಮಾಜದಲ್ಲಿನ ಹೆಂಗಸರ ಪತ್ರಿಕೆಗಳನ್ನು ಕುರಿತು...

-ಆರ್ ಕೃತಿ



ನಾನು ಸಣ್ಣವಳಿದ್ದಾಗ ನಮ್ಮ ಮನೆಗೆ 'ವನಿತಾ' ಎನ್ನುವ ಪತ್ರಿಕೆ ಬರ್‍ತಿತ್ತು. ಮಾಸಿಕವೊ, ವಾರದ್ದೊ ನೆನಪಿಲ್ಲ, ಅದು ಗೃಹಿಣಿಯರಿಗಾಗಿ ಬರುವ ಪತ್ರಿಕೆ. ಈಗ ಅಂತಹದ್ದೇ ಪತ್ರಿಕೆ ನಮ್ಮೂರಿನ ಲೈಬ್ರರಿಗೂ ಒಂದು ಬರುತ್ತದೆ. ನಾನು ಬಸ್ ಕಾಯುವಾಗಲೆಲ್ಲ ಅದನ್ನು ನೋಡುತ್ತಿರುತ್ತೇನೆ. ಸುಮಧುರ ಬಾಳಿಗೆ ಸುಂದರ ಪತ್ರಿಕೆ ಅಂತ ಏನೊ ಉಪಶೀರ್ಷಿಕೆ ಇದೆ. ಅದು ಹೆಂಗಸರಿಗೆ ಎಂದಿಲ್ಲದಿದ್ದರೂ ಎಲ್ಲರಿಗೂ ಅದು ಹೆಂಗಸರದ್ದು ಅನ್ನಿಸುತ್ತದೆ. ಇದರಲ್ಲಿ ಇರುವ ಲೇಖನಗಳೆಲ್ಲವೂ ಕುಟುಂಬ, ಆರೋಗ್ಯ, ಅಡಿಗೆ. ಸೌಂದರ್ಯ, ಫ್ಯಾಶನ್ ಮುಂತಾದವುಗಳ ಮೇಲೆ. ಕುಟುಂಬದ ಸ್ವಾಸ್ಥ್ಯವೆಂದರೆ ಹೆಂಗಸರ ಜವಾಬ್ದಾರಿ ತಾನೆ! ಹಳೆಯ 'ಗೃಹಿಣಿ'ಯ ಪತ್ರಿಕೆಗೆ ಈಗ ಸೇರಿಕೊಂಡಿದ್ದೆಂದರೆ 'ಸ್ವ-ಸಹಾಯ' ಹೆಲ್ಪ್' ರೀತಿಯ ಲೇಖನಗಳು, ಉದಾಹರಣೆಗೆ ದಾಂಪತ್ಯವನ್ನು ಸುಲಲಿತವಾಗಿ ನಡೆಸುವುದು, ಖುಷಿಯಾಗಿರುವುದು, ತೃಪ್ತಿಯಾಗಿ ಬದುಕುವುದು ಅಂತಹವುಗಳು. ಧಾರಾವಾಹಿಗಳು ಮತ್ತು ಕಥೆಗಳು. ಈ ಪತ್ರಿಕೆಗಳು ಸ್ಥೂಲವಾಗಿ ಈ ಮೂರು ರೀತಿಯ ಲೋಕದೃಷ್ಟಿಯನ್ನು ಕಟ್ಟಿಕೊಡುತ್ತವೆ.

**ಮೊದಲನೆಯದಾಗಿ** ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಸ್ಥಾನ, ಕರ್ತವ್ಯ, ನಡಾವಳಿಯ ನೀತಿಯನ್ನು ನಿರ್ಧರಿಸುವಂತ, ಒಂದು ರೀತಿಯ ಮಾರ್ಗದರ್ಶನ ಕೊಡುವಂತಾ ಕೆಲಸವನ್ನು ಇವುಗಳು ಮಾಡುತ್ತವೆ. ಸಮಾಜ ಬದಲಾಗುತಿದ್ದ ಹಾಗೆ ಹೆಂಗಸರ ಸ್ಥಾನ, ನೀತಿಸಂಹಿತೆಗಳು ಬದಲಾಗುತ್ತವೆ. ಯಾವುದು ಲೋಕ ಒಪ್ಪುವಂತಹ ಬದಲಾವಣೆಗಳು? ಯಾವುದು ಗಡಿ? ಹೆಣ್ಣು ಸಂಪ್ರದಾಯದೊಳಗೆ ಹೇಗೆ ಎಲ್ಲರನ್ನೂ ಒಪ್ಪಿಸಿ ತನ್ನ ಕೆಲಸವನ್ನು ಸಾಧಿಸಿಕೊಳ್ಳಬಹುದು ಎನ್ನುವುದನ್ನು ಅವು ಹೇಳುತ್ತವೆ. ಉದಾಹರಣೆಗೆ ಒಂದು ಲೇಖನದಲ್ಲಿ ಈಗಿನ ಉಡುಗೆಗಳಾದ ಜೀನ್ಸ್ ಟೀಶರ್ಟ್ ಹಾಕಿಕೊಂಡರೆ ಪರವಾಗಿಲ್ಲ, ಯಾಕೆಂದರೆ ಅವು ಮೈ ಮುಚ್ಚುತ್ತದೆ. ಆದರೆ ತುಂಡುಡುಗೆ, ಬಿಗಿ ಉಡುಗೆಗಳು ಸರಿಯಲ್ಲ ಅನ್ನುವ ಧೋರಣೆಯದ್ದು. ಅಥವಾ ಇನ್ನೊಂದು 'ವಿನಯಪೂರ್ವಕವಾಗಿ ಕಲಿಯುವ', 'ತಾಳ್ಮೆಯಿಂದಿರುವ' ಹೆಣ್ಣು ಇವತ್ತಿನ ಕಾಲದಲ್ಲಿ ಏನು ಬೇಕಾದರೂ ಸಾಧಿಸಬಹುದು ಮತ್ತು ಅವಳಿಗೆ ಸಮಾಜದಲ್ಲಿ ಗೌರವವು ಸಿಗುತ್ತದೆ ಎನ್ನುವಂತಾ ಕತೆಗಳು! ಒಂದು ರೀತಿಯಲ್ಲಿ ಸಂಪ್ರದಾಯದ ಒಳಗೇ ಆಗುವ ಬದಲಾವಣೆಯನ್ನು ಇವು ಬೆಂಬಲಿಸುತ್ತವೆ ಎನ್ನಬಹುದೇನೋ? ಇಲ್ಲೂ ವಿನಯ ಮತ್ತು ತಾಳ್ಮೆ- ಎಲ್ಲರೂ ಅನುಸರಿಸಬೇಕಾದ, ಎಲ್ಲಾ ಸಾಧನೆಗಳ ಹಿಂದಿರುವ ಸಾಮಾನ್ಯ ಮೌಲ್ಯಗಳ ಮುಖವಾಡ ಹೊತ್ತು ಬರುತ್ತವೆ. ಇದು ನಮ್ಮ ಮಧ್ಯಮ ವರ್ಗದ ಕಲ್ಪನೆಯಲ್ಲಿ ಹೆಣ್ಣಿಗೆ ಇರಬೇಕಾದ ಗುಣಗಳು. ಇದನ್ನೇ ಇಂತಹ ಪತ್ರಿಕೆಯು ಪ್ರತಿಫಲಿಸುತ್ತದೆ.

**ಎರಡನೆಯದಾಗಿ**, ನವ ಉದಾರೀಕರಣದ ಈ ಕಾಲದಲ್ಲಿ ಮಧ್ಯಮವರ್ಗ, ಸಂಪ್ರದಾಯ ಮತ್ತು ತಮ್ಮ ಜೀವನಶೈಲಿಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು, ಅದರಿಂದ ಹುಟ್ಟಿದ ಕಂದರವನ್ನು ಹೇಗೆ ಅರ್ಥೈಸಿಕೊಳ್ಳುತ್ತಾರೆ ಎನ್ನುವುದನ್ನು ಈ ಪತ್ರಿಕೆಗಳು ಪ್ರತಿಫಲಿಸುತ್ತವೆ. ಈಗಿನ ಕುಟುಂಬವೆಂದರೆ ಮಧ್ಯಮವರ್ಗದ ಹೆಣ್ಣು ಬರೀ ಗೃಹಿಣಿಯಲ್ಲ. ಕಳೆದ ಏಳೆಂಟು ವರ್ಷಗಳಿಂದ ಹೆಣ್ಣು ಹೊರಗೆ ದುಡಿಯುವುದು ಅನಿವಾರ್ಯವೂ ಸಾಮಾನ್ಯವೂ ಆಗಿರುವುದನ್ನು ಇಂತಹ ಪತ್ರಿಕೆಗಳು ಗ್ರಹಿಸಿದೆ. ಅಂತಹ ಹೆಂಗಸರಿಗೆ ತಲೆದೋರಬಹುದಾದ ತೊಂದರೆಗಳ ಬಗ್ಗೆ ಮಾತಾಡುತ್ತವೆ. ಜೊತೆಗೆ ಕುಟುಂಬದಲ್ಲಿ ಹೇಗೆ ಲೋಕ ಒಪ್ಪಬಹುದಾದ ದಾರಿಯನ್ನು ಹಾಗೆಯೇ ಆಫಿಸಿನಲ್ಲೂ ಗಡಿರೇಖೆಗಳನ್ನು ಇಲ್ಲಿಯ ಲೇಖನಗಳು ನಿರ್ಧರಿಸುತ್ತವೆ. ಮಧ್ಯಮವರ್ಗಕ್ಕೆ ಗೋಳೀಕರಣ ಬೇಕು, ಬಂಡವಾಳ ಸಂಸ್ಕೃತಿ ಬೇಕು. ಭಾವ-ಅಣ್ಣಂದಿರು ವಿದೇಶಕ್ಕೆ ಹೋಗಬೇಕು. ಆದರೆ ಹೆಣ್ಣಿಗೆ ಕಟ್ಟಿಕೊಟ್ಟಿರುವ ಮೌಲ್ಯವ್ಯವಸ್ಥೆ? ಅದು ಬದಲಾಗುವಂತಿಲ್ಲ! ಈಗಿನ ಪತ್ರಿಕಾ ಬರಹಗಳಲ್ಲಿ ದಾಂಪತ್ಯ ಮುರಿದು ಬೀಳುವುದಕ್ಕೆ, ಕುಟುಂಬ ವ್ಯವಸ್ಥೆ ಹಾಳಾಗಿದ್ದಕ್ಕೆ ಒಂದು ಕಾರಣ ಪಾಶ್ಚಿಮಾತ್ಯೀಕರಣ. ವಿಚಿತ್ರವೆಂದರೆ, ಕೊಳ್ಳುಬಾಕ ಸಂಸ್ಕೃತಿಯ ವಿರುದ್ಧ ಮಾತನಾಡುತ್ತಲೇ ಕೊನೆಗೂ ಅದು ಬಂದು ತಲುಪುವುದು ಹೆಂಗಸರ ವರ್ತನೆಗಳ ಗಡಿಯ ವಿಚಾರಕ್ಕೆ. ಬಂಡವಾಳ ವ್ಯವಸ್ಥೆ, ಅದು ಕೊಟ್ಟಂತೆ ಕಾಣುವ ಹೆಣ್ಣಿನ ಸೀಮಿತ ಸ್ವಾತಂತ್ರ್ಯವನ್ನು ಇಂತಹ ಪತ್ರಿಕೆಗಳು ಮಾನವೀಯ ಸಂಬಂಧಗಳ ಪತನ' 'ಸಂಸ್ಕೃತಿ, ಆಧ್ಯಾತ್ಮ ರಕ್ಷಕರಾದ ಸ್ವಾಮಿಜಿ' ಮುಂತಾದ ನುಡಿಗಟ್ಟುಗಳ ದೇಶಿವಾದದೊಂದಿಗೆ ಅನುಸಂಧಾನ ಮಾಡಿಕೊಳ್ಳುವ ಬಗೆ ಸ್ವಾರಸ್ಯಕರವಾಗಿದೆ. ಕೆಲವೊಂದು ಆರೋಗ್ಯ ಸಮಸ್ಯೆಗಳು, ಒಡವೆ, ವಸ್ತ್ರಗಳ ವಿನ್ಯಾಸಗಳು, ಮನೆಯನ್ನು ಅಲಂಕರಿಸುವ ರೀತಿ, ಇವುಗಳ ಸಂಶೋಧನೆಗಳು -ಇವೆಲ್ಲವೂ ಯಾವುದೋ ಜನಪ್ರಿಯ ಇಂಗ್ಲೀಷ್ ಪತ್ರಿಕೆಯಿಂದ ಭಟ್ಟಿ ಇಳಿಸಿದಂತಿರುತ್ತದೆ. ಅದರ ಮುಂದಿನ ಪುಟಗಳಲ್ಲೇ ಹಳೆಯ ಕಾಲದಲ್ಲಿ ಮಾಡುತಿದ್ದ ಬಾಣಂತನ, ಎಣ್ಣೆ ಸ್ನಾನ, ಅದೆಲ್ಲಾ ಹೋಗಿದ್ದು, ಅಮ್ಮನ ಕೈ ಗುಣ, ಅಪ್ಪ ಬೆಳೆಸಿದ ಮಲ್ಲಿಗೆ ಮರ ಇಂತಹ ಲೇಖನಗಳು.

**ಮೂರನೆಯದಾಗಿ**, ಇಂತಹ ಪತ್ರಿಕೆಗಳು ನಾನು ಸಣ್ಣವಳಿದ್ದಾಗ, ಬೇಜಾರಾಗಿ ಕೂತ ಗೃಹಿಣಿಯರಿಗಾಗಿ ಅನ್ನುವ ಮಾತುಗಳು ಕೇಳಿಬರುತ್ತಿದ್ದವು. ಬೇರೆ ಪತ್ರಿಕೆಗಳ ಎದುರು ಅವುಗಳಿಗೆ ಗೌರವವಿರಲಿಲ್ಲ. ಅಡುಗೆ ಮನೆಯ ಪತ್ರಿಕೆ, ಜಗಲಿಯ ಮೇಲಿಟ್ಟು ನಮ್ಮ ಗಂಭೀರ ಓದುಗರ ವರ್ಚಸ್ಸನ್ನು ಹೆಚ್ಚಿಸುವ ಪತ್ರಿಕೆಯಲ್ಲ., ಮಹಿಳೆಗೆ ಆಸೆಗಳು; ಜಾಸ್ತಿ ಅಂತಹ ಆಸೆಗಳನ್ನು ಬಂಡವಾಳ ಮಾಡಿಕೊಂಡ ಮಾಸಿಕಗಳು ಇತ್ಯಾದಿ,

ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯಲ್ಲೇ ಇಂತಹ ಪತ್ರಿಕೆಗಳು ಬರುತ್ತಿದ್ದರೂ ಒಬ್ಬ ಮಹಿಳೆ ತಾನಾಗಿಯೆ ತನಗಾಗಿಯೆ ಒಂದು ಮಾಸಿಕ ಖರೀದಿಸಿ ಓದುವುದಕ್ಕೆ ಸಾಧ್ಯವಾಗಿರುವುದು ಒಳ್ಳೆಯದೆ. ನಮ್ಮೂರಿನಲ್ಲಿ ಕೃಷಿ ಕುಟುಂಬದ ಮಧ್ಯಮ ವರ್ಗದ ಮಹಿಳೆ ಬಿಡುವು ಮಾಡಿಕೊಂಡು ಗ್ರಂಥಾಲಯಕ್ಕೆ ಬಂದು ಇದನ್ನು ಓದುತ್ತಾಳೆ ಅನ್ನುವುದು, ಅವಳಿಗಾಗಿ ಜೀವನದಲ್ಲಿ ಸಮಯ ಕೊಡುತ್ತಾಳೆ ಅನ್ನುವುದು ನನಗೆ ಈಗ ಮುಖ್ಯವಾಗಿ ಕಾಣುತ್ತದೆ. ಉಳಿದೆಲ್ಲ ಪತ್ರಿಕೆಗಳಲ್ಲಿ ಮೀಸಲಾತಿಯ ಹಾಗೆ ಹೆಂಗಸರ ವಿಷಯ ಇರುವಲ್ಲಿ, ಇಲ್ಲಿ ಅವಳೇ ಕೇಂದ್ರ ಬಿಂದು. ಇಲ್ಲಿ ಅವಳಿರುವುದು ಬೇರೆ ಯಾವುದೋ 'ಪ್ರಾಡಕ್ಟ್'ನ ಜಾಹಿರಾತಿಗಲ್ಲ, ಅವಳಿಗಾಗಿಯೆ ಇರುವ ಜಾಹಿರಾತುಗಳು. ಅವಳು ಇಲ್ಲಿ ಪೂರಕ ವಸ್ತು ಅಲ್ಲ.

ಹೊರಗೆ ದುಡಿಯುವ, ಒಂದು ಮಟ್ಟದ ಉದಾರ ವಾತಾವರಣದಲ್ಲಿರುವ ಹೆಣ್ಣು ಈ ಗೃಹಿಣಿಯರ ಪತ್ರಿಕೆಗಳನ್ನೂ ಈಗಲೂ ಓದುವುದು ಕೆಳಗಿನ ಈ ಕಾರಣಗಳಿಗಾಗಿ ಅನ್ನಿಸುತ್ತಿದೆ: ೧ .ಚಾರಿತ್ರಿಕವಾಗಿ ಎಲ್ಲಾ ಸಾಮಾಜಿಕ ವಲಯದಿಂದ ದೂರ ಇದ್ದ ಹೆಣ್ಣಿಗೆ ಅಲ್ಪ ಸ್ವಲ್ಪ ಏನಾದರೂ ಸ್ಥಾನಮಾನ, ಪ್ರೀತಿ, ಮಕ್ಕಳಂತೆ ಬೆನ್ನುತಟ್ಟಿಸಿಕೊಳ್ಳುವ ಸ್ತರದಲ್ಲಾದರು ಸಿಕ್ಕಿದ್ದು ಗೃಹಿಣಿಯ ಪಾತ್ರದಲ್ಲಿ ಮಾತ್ರ. ಆ ಅನುಭವ ಅವಳ ಸ್ವಂತದ್ದು ಮತ್ತು ನಿರ್ದಿಷ್ಟವಾದುದ್ದಾಗಿತ್ತು. ೨ ಅದನ್ನು ಆದರ್ಶವಾಗಿಟ್ಟುಕೊಳ್ಳುವ ಸ್ಥಿತಿಯಿಂದ ಬಿಡಿಸಿಕೊಳ್ಳಲು ಸಾಧ್ಯಮಾಡುವ ಲಿಂಗಭೇದದ ಅರಿವಿನ ಶಿಕ್ಷಣ ನಮ್ಮ ವ್ಯವಸ್ಥೆಯಲ್ಲಿ ಇಲ್ಲದಿರುವುದು.



**(ಸಮಾಜಶಾಸ್ತ್ರದ ಸ್ನಾತಕೋತ್ತರ ಪದವೀಧರೆಯಾದ ಲೇಖಕಿ ಕೃತಿ ಕೃಷಿಯಲ್ಲಿ ತೊಡಗಿದ್ದು, ಯಕ್ಷಗಾನ-ತಾಳಮದ್ದಲೆಗಳಲ್ಲೂ ಸಕ್ರಿಯ ಆಸಕ್ತಿ ಹೊಂದಿದ್ದಾರೆ)**

**ಚಂದಾದಾರರಾಗಬಯಸುವವರಿಗೆ ಸೂಚನೆ**

**'ಹೊಸ ಮನುಷ್ಯ'ಕ್ಕೆ ಚಂದಾದಾರರಾಗಬಯಸುವವರು ಪತ್ರಿಕೆಯ ಮುಖಪುಟದಲ್ಲಿರುವ ಪತ್ರಿಕೆಯ ಸಂಪಾದಕರಿಗೆ, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿರುವ (ifsc code: sbin 0040444) ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ಇನ್ನೂರು ರೂ.ಗಳನ್ನು ವರ್ಗಾವಣೆ ಮಾಡಿ (ನಗದು ಕಟ್ಟುವುದು ಮಾತ್ರ ಬೇಡ) ೯೪೪೮೨೪೫೨೨೮೪ ಈ ಸಂಖ್ಯೆಗೆ ಖಚಿತಪಡಿಸಿ ತಮ್ಮ ವಿಳಾಸವನ್ನು ಕಳಿಸಬೇಕು.-ಸಂ.**

# ರಾಷ್ಟ್ರ ವಿರೋಧಿಯಾದ ರಾಷ್ಟ್ರೀಯತೆ

## ಆರ್.ಎಸ್.ಎಸ್. ನ ನಡೆ ನುಡಿಗಳತ್ತ ಒಂದು ಚಿಕಿತ್ಸಕ ನೋಟ

–ಯೋಗೇಂದ್ರ ಯಾದವ್

"ಈ ಸಂಘಟನೆಯ ನುಡಿ ಮತ್ತು ನಡೆ ಸೂಚಿಸುತ್ತಿರುವ ಅಸ್ವಸ್ಥತೆಗೆ ಒಂದು ಚಿಕಿತ್ಸೆ ಅಗತ್ಯವಾಗಿದೆ. ಈ ಅಸ್ವಸ್ಥತೆಯ ಮೂಲ ಇರುವುದು ಆಧುನಿಕ ಹಿಂದುವೊಬ್ಬನ ಕೀಳರಿಮೆಯಲ್ಲಿ. ಅದೀಗ ಕೆಟ್ಟ ಪಾಶ್ಚಿಮಾತ್ಯೀಕರಣ ಮತ್ತು ವಕ್ರಗೊಂಡ ಧರ್ಮನಿರಪೇಕ್ಷತೆಗಳಿಂದಾಗಿ ಉಲ್ಬಣಗೊಂಡಿದೆ. ಇದಕ್ಕೆ ಚಿಕಿತ್ಸೆ ಎಂದರೆ ಅದು ಭಾರತೀಯ ಸಂಸ್ಕೃತಿಗೆ, ಅದರ ಬಹುಮುಖೀ ಸಂಪ್ರದಾಯಗಳಿಗೆ ತೆರೆದುಕೊಳ್ಳಲು ಮತ್ತು ಸಾಂಸ್ಕೃತಿಕವಾಗಿ ಹೆಚ್ಚು ಆತ್ಮವಿಶ್ವಾಸ ಪಡೆದಿದ್ದ ಭಾರತೀಯರಾದ ಗಾಂಧಿ, ಟ್ಯಾಗೋರರಂಥವರನ್ನು ಹೆಚ್ಚು ಸಮೀಪದಿಂದ ಅರ್ಥಮಾಡಿಕೊಳ್ಳಲು ಹಾಗೂ ಹಿಂದೂ ಧರ್ಮದ ಬಗ್ಗೆಯೇ ಆಳದ ತಿಳುವಳಿಕೆಗೆ ಪ್ರಯತ್ನಿಸುವುದೇ ಆಗಿದೆ.."



ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಇತ್ತೀಚೆಗೆ ದೆಹಲಿಯ ವಿಜ್ಞಾನ ಭವನದಲ್ಲಿ ನಡೆಸಿದ ತೆರೆದ ಸಮಾವೇಶ ತನ್ನ ಪ್ರಮುಖ ಗುರಿಯನ್ನು ತಲುಪುವಲ್ಲಿ ಯಶಸ್ವಿಯಾಗಿರುವಂತೆ ಕಾಣುತ್ತದೆ. ಆ ಗುರಿಯೆಂದರೆ ಒಂದು ನಿರ್ದಿಷ್ಟ ನೆಲೆಯ ಜನವರ್ಗಕ್ಕಾಗಿ ತನ್ನ ಬಿಂಬವನ್ನು ಪರಿಷ್ಕರಿಸಿಕೊಳ್ಳುವುದೇ ಆಗಿತ್ತು. ಇದಕ್ಕಾಗಿ ಅದು ವಿಧೇಯ ಮಾಧ್ಯಮ ಮತ್ತು ನಂಬಲಾಗದ್ದನ್ನು ಪ್ರಶ್ನಿಸುವ ಬದಲು ಸದ್ಯಕ್ಕೆ ಪಕ್ಕಕ್ಕೆ ಸರಿಸ ಬಯಸುವ ಸೋಮಾರಿವ್ಯಾಖ್ಯಾನಕಾರರಿಗೆ ವಂದನೆ ಹೇಳಲೇಬೇಕು. ಈ ಸಮಾವೇಶ, ಆರ್‌ಎಸ್‌ಎಸ್ ತನ್ನ ಬಗ್ಗೆ ಮೂಡಬೇಕೆಂದು ಬಯಸಿದ ಮೃದುವಾದ, ಉದಾರವಾದ ಬಿಂಬವನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು. ಆರ್‌ಎಸ್‌ಎಸ್ ನಿರೀಕ್ಷಿಸಿದ್ದ, ಒಂದರ್ಥದಲ್ಲಿ ಅಪೇಕ್ಷಿಸಿದ್ದ ಪ್ರಶ್ನೆಗಳಿಗಷ್ಟೇ ಟೀಕಾಕಾರರು ತಮ್ಮನ್ನು ಸೀಮಿತಗೊಳಿಸಿಕೊಂಡದ್ದು ವಿಷಾದನೀಯ. ಈ ಪ್ರಶ್ನೆಗಳು: ಸರ್ಕಾರದ ಮೇಲೆ ಆರ್‌ಎಸ್‌ಎಸ್ ಪ್ರಭಾವ ಬೀರುತ್ತಿದೆಯೇ? ಆರ್‌ಎಸ್‌ಎಸ್ ಮುಸ್ಲಿಂ ವಿರೋಧಿಯೇ?

ಆರ್‌ಎಸ್‌ಎಸ್ ರಾಷ್ಟ್ರೀಯತೆಯ ವಿರೋಧಿಯೇ ಎಂಬ ಪ್ರಶ್ನೆಯನ್ನು ಕೇಳಲು ಇದು ಸಕಾಲ. ಪ್ರಶ್ನೆ ಒರಟಾಗಿರಬಹುದು, ತೀಕ್ಷ್ಣವಾಗಿಯೂ ಇರಬಹುದು. ಆದರೆ ನಾವು ಕೇಳಬೇಕಾದ ಪ್ರಶ್ನೆ.

ಮೇಲ್ನೋಟಕ್ಕೆ ತೋರುವಂತೆ, ಇದು ವಿಲಕ್ಷಣ ಪ್ರಶ್ನೆ. ರಾಷ್ಟ್ರೀಯತೆ, ಭಾರತೀಯತೆ ಮತ್ತು ಹಿಂದುತ್ವ– ಇವು ಆರ್‌ಎಸ್‌ಎಸ್‌ನ ಘೋಷಣೆಗಳು. ಆರ್‌ಎಸ್‌ಎಸ್‌ನ ಒಳ–ಹೊರಗನ್ನು ಬಲ್ಲವನು ನಾನು. ನೂರಾರು ಸ್ವಯಂಸೇವಕರನ್ನು ಮತ್ತು ಅನೇಕ ಪ್ರಚಾರಕರನ್ನು ಭೇಟಿಮಾಡಿದ್ದೇನೆ. ಸಂಘದ ಸಾಮಾನ್ಯ ಸ್ವಯಂಸೇವಕನೂ ರಾಷ್ಟ್ರೀಯತೆಯ ಈ ಸ್ವಯಂ–ಚಿತ್ರವನ್ನು ತನ್ನಲ್ಲಿ ಇಟ್ಟುಕೊಂಡಿರುತ್ತಾನೆ. ಕಮ್ಯುನಿಷ್ಟರಂತೆ ಅಥವಾ ಹಳೆಯ ಕಾಲದ ಸಮಾಜವಾದಿಗಳಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಾಧಾರಣ ಕಾರ್ಯಕರ್ತನೂ, ಮಾಮೂಲಿ ರಾಜಕೀಯ ನಾಯಕನಿಗಿಂತ ಹೆಚ್ಚು ಪ್ರಾಮಾಣಿಕವಾಗಿ ಮತ್ತು ಆದರ್ಶಪ್ರಾಯವಾಗಿರಲು ಪ್ರಯತ್ನಿಸುತ್ತಾನೆ. ರಾಷ್ಟ್ರೀಯ ವಿಪತ್ತಿನ ಒಂದೆರಡು ಸಂದರ್ಭಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಸಂಬಂಧಿಸಿದಂತೆ ಆರ್‌ಎಸ್‌ಎಸ್ ಆದರ್ಶಪ್ರಾಯವಾದಂಥ ಕೆಲಸಗಳನ್ನು ಮಾಡಿರುವುದರ ಎಚ್ಚರವೂ ನನಗಿದೆ. ಇದನ್ನು ಉಗ್ರ ರಾಷ್ಟ್ರೀಯತೆ ಎಂದು ಆರ್‌ಎಸ್‌ಎಸ್‌ನ ಟೀಕಾಕಾರರು ದೂಷಿಸುತ್ತಾರೆ. ಈ ರೀತಿಯಾಗಿ ಆರ್‌ಎಸ್‌ಎಸ್‌ನ ರಾಷ್ಟ್ರೀಯತೆಯ ನಿಷ್ಠೆಯನ್ನು ಪ್ರಶ್ನಿಸುವುದು ಬಹುಶಃ ಘೋರವಾಗಿ ಕಾಣಿಸಬಹುದು.

ಆದರೂ ನಾನು ಎತ್ತಿರುವ, ಆರ್‌ಎಸ್‌ಎಸ್ ರಾಷ್ಟ್ರೀಯತೆಯ ವಿರೋಧಿಯೇ ಎಂಬ ಪ್ರಶ್ನೆಯನ್ನು ಅದರೆಲ್ಲ ಗಂಭಿರತೆಯೊಂದಿಗೆ ಸಮಚಿತ್ತದಿಂದ ಚರ್ಚಿಸಬೇಕಾದ ಅಗತ್ಯವಿದೆ. ವಿಶೇಷವಾಗಿ, ಇವತ್ತಿನ ರಾಷ್ಟ್ರೀಯ ಜೀವನದಲ್ಲಿ ಆರ್‌ಎಸ್‌ಎಸ್ ವಹಿಸುತ್ತಿರುವ ಸಕ್ರಿಯ ಪಾತ್ರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಹೆಚ್ಚಿನ ತುರ್ತಿನದಾಗುತ್ತದೆ. ನಮ್ಮ ರಾಷ್ಟ್ರದ ಮೇಲೆ ಮಾವೂವಾದಿ ಬಂಡುಕೋರರು ಮತ್ತು ಇಸ್ಲಾಮೀ ಮೂಲಭೂತವಾದಿ ಗುಂಪುಗಳ ಪರಿಣಾಮದ ಬಗ್ಗೆ ನಾವು ಆತಂಕಕ್ಕೊಳಗಾಗಿದ್ದೇವೆ; ಇದು ಸರಿಯಾದದ್ದೇ. ನಮ್ಮ ರಾಷ್ಟ್ರೀಯತೆಗೆ ಕಾಶ್ಮೀರ ಮತ್ತು ನಾಗಾಲ್ಯಾಂಡಿನ ಪ್ರತ್ಯೇಕತಾವಾದಿಗಳು ಒಡ್ಡಿರುವ ಸವಾಲನ್ನೂ ನಾವು ಚರ್ಚಿಸುತ್ತಿದ್ದೇವೆ; ಚರ್ಚಿಸಬೇಕಾದದ್ದೇನೆಂದರೆ ಭಾರತವೆಂಬ ರಾಷ್ಟ್ರವನ್ನು ನಿರ್ಮಿಸುವ ಕಾರ್ಯದಲ್ಲಿ ಆರ್‌ಎಸ್‌ಎಸ್ ಮತ್ತದರ ಸಹವರ್ತಿ ಸಂಘಟನೆಗಳು ಒಡ್ಡಿರುವ ಸವಾಲುಗಳನ್ನು ನಾವೆಂದೂ ಗಂಭೀರವಾಗಿ ಚರ್ಚಿಸಿಲ್ಲ. ಮುಖ್ಯವಾಗಿ ಚರ್ಚಿಸಬೇಕಾದದ್ದು, ಒಂದು ಸಂಘಟನೆಯಾಗಿ ಆರ್‌ಎಸ್‌ಎಸ್‌ನ ಸಿದ್ಧಾಂತ ಮತ್ತು ನಡವಳಿಕೆಯ ಬಗ್ಗೆ ಹಾಗೆಯೇ ಭಾರತೀಯ ರಾಷ್ಟ್ರದ ಇತಿಹಾಸ, ವರ್ತಮಾನ ಮತ್ತು ಭವಿಷ್ಯದ ಬಗೆಗಿನ ಆರ್‌ಎಸ್‌ಎಸ್‌ಗಿರುವ ಸಂಬಂಧದ ಬಗ್ಗೆ.

### ರಾಷ್ಟ್ರ ಮತ್ತು ಅದರ ಭೂತಕಾಲ

ಭೂತಕಾಲಕ್ಕೆ ಸಂಬಂಧಿಸಿದಂತೆ ಆರ್‌ಎಸ್‌ಎಸ್‌ನ ಕೆಲವು, ವಿವಾದಕ್ಕೆಡೆಯಿಲ್ಲದ ಸಂಗತಿಗಳಿಂದಲೇ ಆರಂಭಿಸೋಣ. ೧೯೨೫ರಿಂದ, ಅಂದರೆ ಆರ್‌ಎಸ್‌ಎಸ್ ಹುಟ್ಟಿನಿಂದಲೇ ಅದು ಯಾವುದೇ ರೀತಿಯಿಂದಲೂ ರಾಷ್ಟ್ರೀಯ ಚಳವಳಿಯಲ್ಲಿ ಕ್ರಿಯಾಶೀಲವಾಗಿರಲಿಲ್ಲ. ವಾಸ್ತವವಾಗಿ, ಅದರ ಸಹವರ್ತಿ ಸಂಸ್ಥೆ ಹಿಂದೂ ಮಹಾಸಭಾ ರಾಷ್ಟ್ರೀಯ ಆಂದೋಲನವನ್ನು ವಿರೋಧಿಸಿತ್ತು. ಆರ್‌ಎಸ್‌ಎಸ್ ಸ್ಥಾಪಕರಲ್ಲಿ ಸ್ಫೂರ್ತಿ ತುಂಬಿದ ಸಿದ್ಧಾಂತವನ್ನು ರೂಪಿಸಿದ ಮತ್ತು ಇವತ್ತಿಗೂ ಆರ್‌ಎಸ್‌ಎಸ್‌ಗೆ ಪೂಜ್ಯ ವ್ಯಕ್ತಿಯಾಗಿರುವ ವಿ.ಡಿ.ಸಾವರ್ಕರ್, ಅಂಡಮಾನ್ ಮತ್ತು ನಿಕೋಬಾರ್‌ನ ಸೆಲ್ಯುಲಾರ್ ಜೈಲಿನಿಂದ ಹೇಗೆ ಬಿಡುಗಡೆಯಾದರು ಎಂಬುದು ಈಗಾಗಲೇ ಸ್ಪಷ್ಟವಾಗಿ ದಾಖಲಾಗಿದೆ. ಈತ ಬಿಡುಗಡೆಯಾದದ್ದು ವೈಸ್‌ರಾಯ್ ಅವರಿಗೆ ಬರೆದುಕೊಂಡ ನಾಲ್ಕು ದಯಾಭಿಕ್ಷೆಯ ಅರ್ಜಿಗಳ ನಂತರ. ಈ ಅರ್ಜಿಗಳಲ್ಲಿ ಆತ ತಾನು ಬ್ರಿಟಿಷ್ ಸಾಮ್ರಾಜ್ಯಕ್ಕೆ ವಿಧೇಯನಾಗಿರುವುದಾಗಿ ಪ್ರತಿಜ್ಞೆ ಮಾಡಿದ್ದ. ಬಿಡುಗಡೆಯ ನಂತರವೂ ಸಾವರ್ಕರ್ ಜೀವಯಾಪನೆ ಮಾಡಿದ್ದು ಬ್ರಿಟಿಷ್ ಸರ್ಕಾರದ ಭತ್ಯೆಯ ಮೇಲೆ; ಆ ಸರ್ಕಾರ ವಿಧಿಸಿದ ಷರತ್ತುಗಳನ್ನು ವಿಧೇಯನಾಗಿ ಪಾಲಿಸುತ್ತಾ. ಹಿಂದೂ ಮಹಾಸಭಾದ ಇನ್ನೊಬ್ಬ ನಾಯಕ ಶ್ಯಾಮ್‌ಪ್ರಸಾದ್ ಮುಖರ್ಜಿ, ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರದ ಜೊತೆ ಸಕ್ರಿಯವಾಗಿ ಸಹಕರಿಸಿದ (ಕು)ಖ್ಯಾತಿ ಗಳಿಸಿದ್ದ ವ್ಯಕ್ತಿ. ಆಗ ಆರ್.ಎಸ್.ಎಸ್. ವಸಾಹತುಶಾಹಿ ವಿರುದ್ಧದ ಅತಿದೊಡ್ಡ ಬಂಡಾಯದ ಹೊರಗುಳಿದು ತಟಸ್ಥವಾಗಿತ್ತು. ಮುಸ್ಲಿಂ ಲೀಗಿಗಿಂತ ಬಹಳ ಮೊದಲೇ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಪ್ರಚಾರ ಮಾಡಿದವರು ಹಿಂದೂ ರಾಷ್ಟ್ರೀಯವಾದಿಗಳು. ಮಹಾತ್ಮ ಗಾಂಧಿಯವರನ್ನು ಕೊಂದ ನಾಥುರಾಂ ಗೋಡ್ಸೆ ಒಂದು ಕಾಲಕ್ಕೆ ಆರ್‌ಎಸ್‌ಎಸ್‌ನ ಸದಸ್ಯನಾಗಿದ್ದ ಮತ್ತು ಕೊಂದ ಸಂದರ್ಭದಲ್ಲಿ ಆರ್‌ಎಸ್‌ಎಸ್‌ನ ವಿಸ್ತೃತ ಜಾಲದ ಭಾಗವಾಗಿಯೇ ಇದ್ದ ಎಂಬುದು ಈಗ ಗುಟ್ಟಿನ ಸಂಗತಿಯೇನೂ ಅಲ್ಲ. ನೇರವಾಗಿ ಹೇಳುವುದಾದರೆ ರಾಷ್ಟ್ರೀಯ ಹೋರಾಟಕ್ಕೆ ಆರ್‌ಎಸ್‌ಎಸ್‌ನ ಕೊಡುಗೆ ನಕಾರಾತ್ಮಕವಲ್ಲವಾದರೂ ಬರಿ ಶೂನ್ಯ ಎಂಬುದಂತೂ ಖಚಿತ. ಆದರೆ ಇವತ್ತು ಆರ್‌ಎಸ್‌ಎಸ್‌ನ್ನು ರಾಷ್ಟ್ರವಿರೋಧಿ

ಎಂದು ಕರೆಯಲು ಇಷ್ಟು ಸಾಕಾಗುವುದಿಲ್ಲ.

ಸ್ವಾತಂತ್ರ್ಯಾನಂತರ ಆರ್‌ಎಸ್‌ಎಸ್‌ನ ಪಾತ್ರವೇನು ಎಂಬುದು ಇಲ್ಲಿ ಹೆಚ್ಚು ಪ್ರಸ್ತುತ. ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಆರ್‌ಎಸ್‌ಎಸ್ ಹೇಗೆ ಕೊಡುಗೆಯನ್ನು ನೀಡಿದೆ? ವಿಷಾದದ ಸಂಗತಿ ಎಂದರೆ ಇಲ್ಲಿಯೂ ಅದರ ಕೊಡುಗೆ ನಕಾರಾತ್ಮಕವಾಗಿಯೇ ಇದೆ. ಸ್ವಾತಂತ್ರ್ಯಾನಂತರವೂ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಭಾರತದ ಸಂವಿಧಾನ ಮುಂತಾದ ಭಾರತ ಗಣರಾಜ್ಯದ ಮುಖ್ಯ ಚಿಹ್ನೆಗಳನ್ನು ಗೌರವಿಸಲು ನಿರಾಕರಿಸಿದ ಕೆಲವು ಸಂಘಟನೆಗಳಲ್ಲಿ ಆರ್‌ಎಸ್‌ಎಸ್ ಕೂಡಾ ಒಂದು. ಭಾರತ ಸಂವಿಧಾನವನ್ನು ಅಳವಡಿಸಿಕೊಂಡ ಏಳು ದಶಕಗಳ ನಂತರದ ದಿನಗಳಲ್ಲಷ್ಟೇ ಆರ್‌ಎಸ್‌ಎಸ್‌ನ ಮುಖ್ಯಸ್ಥ ತನ್ನ ಸಂಘಟನೆಗೆ ಸಂವಿಧಾನದಲ್ಲಿ ನಂಬಿಕೆ ಇದೆ ಎಂಬುದನ್ನು ಸ್ಪಷ್ಟಪಡಿದ್ದು ಎಂಬುದು ಈ ಸಂಘಟನೆಯ ಚರಿತ್ರೆಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಇದರ ಈ ಹಿಂದಿನ ಮುಖ್ಯಸ್ಥರಂತೂ ಅದನ್ನು ನೇರವಾಗಿಯೇ ವಿರೋಧಿಸುತ್ತಿದ್ದರು. ಈಗ ರಾಗ ಬದಲಾಗಿದೆಯಾದರೂ ಸಂವಿಧಾನದ ಮುಖ್ಯ ಆಶಯಗಳಾದ ಸಮಾಜವಾದ, ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ವ್ಯವಸ್ಥೆ ಇರಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೂ ಅದು ಪೂರ್ಣ ಮನಸ್ಸಿನಿಂದ ಅದು ಒಪ್ಪುವುದಿಲ್ಲ.

ರಾಷ್ಟ್ರ ನಿರ್ಮಾಣದ ಕಷ್ಟಕರ ಪಯಣದಲ್ಲಿ ಭಾರತ ಎದುರಿಸಿದ ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ಆರ್‌ಎಸ್‌ಎಸ್ ಸಹಕಾರಿಯಾಗಿ ಎಂದೂ ನಡೆದುಕೊಳ್ಳಲಿಲ್ಲ. ಪ್ರತಿಯಾಗಿ ಸಮಸ್ಯೆಯ ಭಾಗವಾಗಿಯೇ ಅದು ಉಳಿದು ಬಂದಿದೆ. ವಿಭಜನೆಯ ಫಲವಾಗಿ ಎದುರಾದ ತರತರದ ವೈವಿಧ್ಯಗಳನ್ನು ಒಗ್ಗೂಡಿಸುವ ಹಿಂದೆಂದೂ ಇಲ್ಲದಂಥ ಸವಾಲಿನ ಸೂಕ್ಷ್ಮ ಸಂದರ್ಭದಲ್ಲಿ ಆರ್‌ಎಸ್‌ಎಸ್ ಹೊಣೆಗೇಡಿತನದಿಂದ ವರ್ತಿಸಿದೆ. ಅದು ಅಲ್ಪ ಸಂಖ್ಯಾತರಿಗೆ ಕೊಡುವ ಯಾವುದೇ ಮತ್ತು ಎಲ್ಲ ರಿಯಾಯಿತಿಗಳನ್ನು ವಿರೋಧಿಸುತ್ತ, ಆಕ್ರಮಣಕಾರಿ ವಿದೇಶೀ ನೀತಿಯನ್ನು ಸಮರ್ಥಿಸುತ್ತ ಭಾರತದ ರಾಷ್ಟ್ರ ಪ್ರಭುತ್ವವನ್ನು ಹಿಂದೂಕರಣಗೊಳಿಸುವ ಒತ್ತಡವನ್ನು ಹೇರುವ ಗುಂಪಿನ ನಾಯಕನಂತೆ ಕೆಲಸಮಾಡಿತು. ೧೯೯೨ರಲ್ಲಿ ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿದ್ದೇ ತೋರುವಂತೆ ಆರ್‌ಎಸ್‌ಎಸ್ ಸಂವಿಧಾನಾತ್ಮಕ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಬುಡಮೇಲು ಮಾಡುವ ಸನ್ನೆಯಾಗಿಬಿಟ್ಟಿದೆ.. ಸಂವಿಧಾನಾತ್ಮಕ ರಾಷ್ಟ್ರಪ್ರೇಮ, ರಾಷ್ಟ್ರೀಯ ರಾಜಕೀಯ ಬದುಕಿನ ಹೃದಯ ಎನ್ನುವುದಾದದರೆ ಆರ್‌ಎಸ್‌ಎಸ್ ಮತ್ತೆ ಮತ್ತೆ ರಾಷ್ಟ್ರಕ್ಕೆ ವಿರುದ್ಧವಾಗಿಯೇ ನಿಂತಿದೆ ಎಂದೇ ಹೇಳಬೇಕಾಗುತ್ತದೆ.

ಎಲ್ಲದಕ್ಕಿಂತ ಹೆಚ್ಚಾಗಿ, ಆರ್‌ಎಸ್‌ಎಸ್‌ನ ರಾಷ್ಟ್ರೀಯತೆಯ ಸಿದ್ಧಾಂತ ಮತ್ತು ಆಚರಣೆಗಳು ಭಾರತೀಯ ರಾಷ್ಟ್ರೀಯತೆಯೊಂದಿಗೆ ಹೊಂದಿಕೆಯಾಗದ ಯೂರೋಪಿನ ಆಮದು ಸರಕು ಎಂಬುದನ್ನು ತೋರಿಸುತ್ತಿದೆ. ಆರ್‌ಎಸ್‌ಎಸ್ ಮಾನ್ಯ ಮಾಡುವಂತಹ; ರಾಷ್ಟ್ರದ ಸಾಂಸ್ಕೃತಿಕ ಗಡಿಗಳು ಪ್ರಭುತ್ವದ ರಾಜಕೀಯ ಗಡಿಗಳ ಜೊತೆ ಹೊಂದಿಕೆಯಾಗಲೇಬೇಕೆಂದು ಭಾವಿಸುವ ಯೂರೋಪಿನ ರಾಷ್ಟ್ರ ಪ್ರಭುತ್ವದ ಮಾದರಿ ಈಗ ಹಳೆಯದಾಗಿದೆ.. ಯೂರೋಪಿನಲ್ಲಾದರೆ, ಜನಾಂಗ, ಧರ್ಮ, ಭಾಷೆ ಮತ್ತು ಸಂಸ್ಕೃತಿಗಳು ಒಂದೇ ರೀತಿ ಇರುವುದರಿಂದ ಅವು ಒಂದು ರಾಷ್ಟ್ರದ ನಿರ್ದೇಶಕ ಲಕ್ಷಣಗಳಾಗಬಹುದು. ಆದರೆ ಈ ವಿಷಯಗಳಲ್ಲಿ ವೈವಿಧ್ಯಮಯ ವ್ಯತ್ಯಾಸಗಳಿರುವ ಇಲ್ಲಿ ಆ ಸೂತ್ರವನ್ನು ಅನ್ವಯಿಸಹೋದರೆ ಅದು ಸಾವರ್ಕರ್ ರೂಪಿಸಿದ ಘೋಷಣೆಯಂತೆ ಹಿಂದೂ–ಹಿಂದಿ–ಹಿಂದೂಸ್ತಾನ್ ಎಂದಾಗಿಬಿಡುವ ಅಪಾಯವಿದೆ. ಭಾರತದ ನೆಲದಲ್ಲಿ ಅರಳಿದ ರಾಷ್ಟ್ರೀಯತೆ, ಸಾಂಸ್ಕೃತಿಕ ಮತ್ತು ರಾಜಕೀಯ ಗಡಿಗಳನ್ನು ಒಂದು ಮಾಡಲು ರಕ್ತ ಚೆಲ್ಲಲೂ ಸಿದ್ಧವಾದಂಥ ಈ ಯೂರೋಪಿಯನ್ ಮಾದರಿಗೆ ಸವಾಲು ಹಾಕಿತು ಮತ್ತು ಅದನ್ನು ತಿರಸ್ಕರಿಸಿತು. ಈ ಭಾರತೀಯ ರಾಷ್ಟ್ರೀಯತೆ ಸಂಸ್ಕೃತಿ, ಧರ್ಮ ಮತ್ತು ಭಾಷೆಗಳ ಅತಿ ವೈವಿಧ್ಯಮಯ ಸನ್ನಿವೇಶದಲ್ಲಿ ರಾಜಕೀಯ ಐಕ್ಯತೆಯನ್ನು ಹುಟ್ಟುಹಾಕಬಲ್ಲಂಥದ್ದಾಗಿತ್ತು.

### ಅದರ ನಡೆಯ ವಿಪರ್ಯಾಸ

ವೇಗವಾಗಿ ವೈವಿಧ್ಯತೆಯನ್ನು ಪಡೆದುಕೊಳ್ಳುತ್ತಿರುವ ಇಂದಿನ ಪ್ರಪಂಚ ಭಾರತೀಯ ಮಾದರಿಯಿಂದ ಪಾಠ ಕಲಿಯಲು ನೋಡುತ್ತಿದೆ. ಆದರೆ ಆರ್‌ಎಸ್‌ಎಸ್, ಎರವಲು ಪಡೆದ, ಪರಕೀಯ ರಾಷ್ಟ್ರೀಯತೆಯ ಅರಬರೆ ತಿಳುವಳಿಕೆಗೆ ನೇತಾಡಿಕೊಂಡಿದೆ. ಇನ್ನೂ ಕೆಟ್ಟದ್ದೆಂದರೆ, ಬಹುಸಂಖ್ಯಾತರನ್ನು ಪ್ರತ್ಯೇಕಿಸುವ ಆರ್‌ಎಸ್‌ಎಸ್‌ನ ಮಾದರಿ ಖಂಡಿತವಾಗಿಯೂ ಭಾರತೀಯ ರಾಷ್ಟ್ರೀಯತೆಗೆ ಬಹು ದೊಡ್ಡ ತೊಡಕಾಗಿದೆ. ರಾಷ್ಟ್ರೀಯ ಸಮಗ್ರತೆಗೆ ತಾನು ಶ್ರಮಿಸುತ್ತಿರುವುದಾಗಿ ಆರ್‌ಎಸ್‌ಎಸ್ ಹೇಳಿಕೊಳ್ಳುತ್ತಿದೆ. ಆದರೆ ನಮ್ಮ ರಾಷ್ಟ್ರೀಯ ಏಕತೆಗೆ ಸವಾಲಾಗಿರುವ ಕೆಲವು ಸಂಗತಿಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅದಕ್ಕೆ ಸಮಯ ಅಥವಾ ಶಕ್ತಿ ಇಲ್ಲದಿರುವುದು ಎಂತಹ ವಿಪರ್ಯಾಸವಾಗಿದೆ. ಉದಾ: ಪ್ರಾಂತೀಯ ವಿವಾದಗಳು (ಕರ್ನಾಟಕ, ತಮಿಳ್ನಾಡು, ಪಂಜಾಬ್, ಹರ್ಯಾಣಗಳ ಜಲ ವಿವಾದಗಳು), ಅಂತರ ರಾಜ್ಯ ವಿಂಗಡಣಾ ಬಿಕ್ಕಟ್ಟುಗಳು (ತೆಲಂಗಾಣ ಮತ್ತು ವಿದರ್ಭ) ಅಥವಾ ಜನಾಂಗೀಯ ಮತ್ತು ಕುಲಮೂಲದ ಆಯಾಮಗಳ ಬಿಕ್ಕಟ್ಟುಗಳು (ಈಶಾನ್ಯ ಭಾಗದಿಂದ ವಲಸೆ ಬಂದಿರುವವರ ವಿರುದ್ಧ ಬೆಂಗಳೂರಿನಲ್ಲಿ ಮತ್ತು ಹಿಂದೀ ಭಾಷಿಕರ ವಿರುದ್ಧ ಮುಂಬೈನಲ್ಲಿ ನಡೆದ ಹಿಂಸಾ ಕೃತ್ಯಗಳು) ಯಾವುದಾದರೂ ವಿವಾದಕ್ಕೆ ಧಾರ್ಮಿಕ ದೃಷ್ಟಿಕೋನವಿದ್ದಾಗ ಮಾತ್ರ ಆರ್‌ಎಸ್‌ಎಸ್‌ನ ರಾಷ್ಟ್ರೀಯತೆಯ ಆವೃತ್ತಿ ಕ್ರಿಯಾಶೀಲವಾಗುತ್ತದೆ. ಅಂದ ಮಾತ್ರಕ್ಕೆ ಹಿಂದೂ ಸಂಪ್ರದಾಯದ ಬಗ್ಗೆ ಆರ್‌ಎಸ್‌ಎಸ್ ಸಿದ್ಧಾಂತಿಗಳಿಗೆ ಹೆಚ್ಚಿನ ತಿಳುವಳಿಕೆ ಆಸಕ್ತಿ, ಕಾಳಜಿಗಳು ಇವೆಯೆಂದೇನಲ್ಲ. ಆರ್‌ಎಸ್‌ಎಸ್ ಹೇರಬಯಸುವ ಹಿಂದುಧರ್ಮದ ಆವೃತ್ತಿಯು ಕರ್ಮಠ ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿಗಳ ಅಣಕದಂತಿದ್ದು, ಜಗತ್ತಿನ ಎಲ್ಲ ಧರ್ಮಗಳ ಹೃದಯದಲ್ಲಿರುವ ಮಾನವೀಯತೆಯಿರಲಿ ನಮ್ಮದೇ ಹಿಂದೂ ಧರ್ಮದ ಮೂಲ ಭಾವನೆಗೇ ವಿರೋಧಿಯಾಗಿದೆ. ದುರಾದೃಷ್ಟದ ಮಾತೆಂದರೆ, ಹಿಂದೂ–ಮುಸ್ಲಿಮರ ಭಿನ್ನಾಭಿಪ್ರಾಯಗಳನ್ನು, ಒಡಕನ್ನು ಮತ್ತು ದ್ವೇಷವನ್ನು ಪ್ರಚೋದಿಸುವುದರ ಕಡೆಗೇ ಆರ್‌ಎಸ್‌ಎಸ್‌ನ ಮುಖ್ಯ ಗಮನವಿದೆ. ರಾಷ್ಟ್ರದ ಏಕತೆಗೆ ಹಿಂದೂ–ಮುಸ್ಲಿಂ ಹಿಂಸೆಯೇ ಬಹು ದೊಡ್ಡ ಸವಾಲಾಗಿರುವ ಈ ಹೊತ್ತಿನಲ್ಲಿ, ಹಿಂದೂ–ಮುಸ್ಲಿಮರ ನಡುವಿನ ಬಿಕ್ಕಟ್ಟನ್ನು ಇನ್ನೂ ಹೆಚ್ಚಿಸಲು ಶ್ರಮಿಸುತ್ತಿರುವವರನ್ನು ರಾಷ್ಟ್ರ ವಿರೋಧಿಗಳೆಂದೇ ನೋಡಬೇಕಾಗಿದೆ. ದೇಶದ್ರೋಹದ ಅಪರಾಧಿಗಳೆಂದೂ ಇವರನ್ನು ಪರಿಗಣಿಸಬೇಕಾಗಿದೆ.

ರಾಷ್ಟ್ರದ ಸಮಗ್ರತೆಗೆ ಪ್ರತ್ಯೇಕತಾವಾದಿಗಳು ಸವಾಲಾಗಿದ್ದಾರೆ. ಎಡಪಂಥೀಯ ಉಗ್ರವಾದಿಗಳು ಭಾರತದ ರಾಷ್ಟ್ರ ಪ್ರಭುತ್ವವನ್ನೇ ಪ್ರಶ್ನಿಸುತ್ತಿದ್ದಾರೆ. ಆರ್‌ಎಸ್‌ಎಸ್ ಒಡ್ಡಿರುವ ಸವಾಲು ಇನ್ನೂ ಆಳವಾಗಿದೆ: ಭಾರತ ಎಂಬ ತತ್ವದ ಮೂಲಕ್ಕೇ, ಅದರ ಸ್ವಧರ್ಮವಾದ ಭಾರತದ ಗಣರಾಜ್ಯ ತತ್ವಕ್ಕೇ ಅದು ಸವಾಲು ಹಾಕಿದೆ. ಇದು ರಾಷ್ಟ್ರ ವಿರೋಧಿಯಲ್ಲದಿದ್ದರೆ ಮತ್ತೆ ಯಾವುದು ರಾಷ್ಟ್ರ ವಿರೋಧಿ?

ಆರ್‌ಎಸ್ಸೆಸ್ಸನ್ನು ನಿಷೇಧಿಸಬೇಕೆಂದು ನಾನು ಹೇಳುತ್ತಿಲ್ಲ. ಬದಲಿಗೆ ಈ ಸಂಘಟನೆಯ ಸಿದ್ಧಾಂತ ಮತ್ತು ನಡೆ ಪ್ರದರ್ಶಿಸುತ್ತಿರುವ ಅಸ್ವಸ್ಥತೆಗೆ ಒಂದು ಚಿಕಿತ್ಸೆ ಅಗತ್ಯವಾಗಿದೆ. ಈ ಅಸ್ವಸ್ಥತೆಯ ಮೂಲ ಇರುವುದು ಆಧುನಿಕ ಹಿಂದುವೊಬ್ಬನ ಕೀಳರಿಮೆಯಲ್ಲಿ. ಅದೀಗ ಕೆಟ್ಟ ಪಾಶ್ಚಿಮಾತ್ಯೀಕರಣ ಮತ್ತು ವಕ್ರಗೊಂಡ ಧರ್ಮನಿರಪೇಕ್ಷತೆಗಳಿಂದಾಗಿ ಉಲ್ಬಣಗೊಂಡಿದೆ. ಇದಕ್ಕೆ ಚಿಕಿತ್ಸೆ ಎಂದರೆ ಆರ್‌ಎಸ್‌ಎಸ್ ಭಾರತೀಯ ಸಂಸ್ಕೃತಿಗೆ, ಅದರ ಬಹುಮುಖೀ ಸಂಪ್ರದಾಯಗಳಿಗೆ ತೆರೆದುಕೊಳ್ಳಲು ಮತ್ತು ಸಾಂಸ್ಕೃತಿಕವಾಗಿ ಹೆಚ್ಚು ಆತ್ಮವಿಶ್ವಾಸ ಪಡೆದ ಭಾರತೀಯರಾದ ಗಾಂಧಿ, ಟ್ಯಾಗೋರರಂಥವರನ್ನು ಹೆಚ್ಚು ಸಮೀಪದಿಂದ ಅರ್ಥಮಾಡಿಕೊಳ್ಳಲು ಹಾಗೂ ಹಿಂದೂ ಧರ್ಮದ ಬಗ್ಗೆಯೇ ಆಳದ ತಿಳುವಳಿಕೆಗೆ ಪ್ರಯತ್ನಿಸುವುದು. ಆದುದರಿಂದ ಆರ್‌ಎಸ್‌ಎಸ್ ವಿಜ್ಞಾನ ಭವನದಲ್ಲಿ ಜನತಾ ಸಮಾವೇಶವನ್ನು ಮಾಡುವುದಕ್ಕಿಂತ ಅದು ಆತ್ಮಾವಲೋಕನ ಮಾಡಿಕೊಳ್ಳಲು ತೊಡಗುವುದಾದರೆ ಅದರ ಸರಸಂಚಾಲಕರು ತಮ್ಮ ಸಂಘಟನೆಗೆ ಯಾವ ಸಲಹೆಯನ್ನು ಮಹಾತ್ಮ ಗಾಂಧಿ ಕಾಂಗ್ರೆಸ್ಸಿಗೆ ನೀಡಿದರೋ ಆ ಸಲಹೆಯನ್ನು ಆರೆಸ್ಸೆಸ್‌ಗೆ ನೀಡುವುದು ಖಂಡಿತ: ವಿಸರ್ಜನೆಯಾಗಲಿ!



**(ಲೇಖಕ ಯೋಗೇಂದ್ರ ಯಾದವ್ ದೇಶದ ಶ್ರೇಷ್ಠ ಚುನಾವಣಾ ಸಮೀಕ್ಷಕ, ಖ್ಯಾತ ರಾಜಕೀಯ ವಿಶ್ಲೇಷಕ ಮತ್ತು ಈಗ 'ಸ್ವರಾಜ್ ಇಂಡಿಯಾ' ಪಕ್ಷದ ಅಧ್ಯಕ್ಷ)**

(ಕನ್ನಡಕ್ಕೆ: ಜಿ.ಪಿ. ಬಸವರಾಜು/ಡಿಎಸ್ಸೆನ್
ಕೃಪೆ: **ದ ಹಿಂದೂ,** ಸೆಪ್ಟಂಬರ್, ೨೬, ೨೦೧೮)

**ಲೇಖಕರಿಗೆ ಸೂಚನೆ**

**'ಹೊಸ ಮನುಷ್ಯ' ಮುಖ್ಯವಾಗಿ ಆಹ್ವಾನಿತ ಬರಹಗಳ ಪತ್ರಿಕೆ. ಆದುದರಿಂದ ಈ ಪತ್ರಿಕೆಗೆ ಲೇಖನ ಬರೆಯಬಯಸುವವರು ಲೇಖನವನ್ನು ಪ್ರಕಟಣೆಗೆ ಕಳಿಸುವ ಮುನ್ನ ಸಂಪಾದಕರೊಂದಿಗೆ ಸಮಾಲೋಚಿಸಿ ಕಳಿಸುವುದು ಸೂಕ್ತ. ಇನ್ನು ಇಲ್ಲಿನ ಲೇಖನಗಳಿಗೆ ಪ್ರತಿಕ್ರಿಯಿಸಬಯಸುವವರು ತಿಂಗಳ ೨೦ರೊಳಗಾಗಿ ಸಂಕ್ಷಿಪ್ತವಾಗಿ ಕಳಿಸಿದರೆ ಮಾತ್ರ ಅವನ್ನು ಪತ್ರಗಳ ರೂಪದಲ್ಲಿ ಅಳವಡಿಸಿಕೊಳ್ಳಲು ಸಾಧ್ಯ.,–ಸಂ.**

ಡಿಸೆಂಬರ್ ೬ ; ಅಂಬೇಡ್ಕರ್ ಪರಿನಿರ್ವಾಣ ದಿನ

# ಅಂಬೇಡ್ಕರ್ ಮತ್ತು ನವ ಉದಾರವಾದೀ ಆರ್ಥಿಕ ನೀತಿ

–ಆನಂದ ತೇಲ್ತುಂಬ್ಡೆ



“ದಲಿತ ಮಾನಸದಲ್ಲಿ ಅಂಬೇಡ್ಕರ್ ಅವರಿಗೆ ವಿಶಿಷ್ಟ ಸ್ಥಾನವಿದೆ. ದಲಿತರ ಆದರ್ಶ, ತಾತ್ವಿಕತೆ, ಆಶಯಗಳೆಲ್ಲದರ ಪ್ರತಿನಿಧಿ ಅವರು. ಅಂಬೇಡ್ಕರ್ ಅವರಿಗೆ ಹೊಂದಿಕೆಯಾಗದ ಯಾವುದೂ ದಲಿತರಿಗೆ ಸಹ್ಯವಾಗದು. ಅದರೆ ಈ ಭಾವನೆಯನ್ನು ಸ್ಥಾಪಿತ ಹಿತಾಸಕ್ತಿಗಳು ವಿಕೃತಗೊಳಿಸಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ. ಜಾಗತೀಕರಣವು ಸುಮಾರು ಮೂರು ದಶಕಗಳಿಂದ ಭಾರತದಲ್ಲಿ ಅನುಷ್ಠಾನಗೊಳ್ಳುತ್ತಿದೆ, ದಲಿತರು ಅದರ ಪರಿಣಾಮಗಳಿಂದ ನೊಂದಿದ್ದಾರೆ. ಆದರೂ ಅದರ ಬಗ್ಗೆ ದಲಿತರಲ್ಲಿ ಇರಬೇಕಾದ ಅಸಹ್ಯವಿಲ್ಲ ಏಕೆಂದರೆ ಅವರ ದೃಷ್ಟಿಯಲ್ಲಿ ಅಂಬೇಡ್ಕರ್ ಅವರು ಇದ್ದಿದ್ದರೆ ಜಾಗತೀಕರಣವನ್ನು ಅವರು ಬೆಂಬಲಿಸುತ್ತಿದ್ದರು ಎಂಬ ಕಲ್ಪನೆಯನ್ನು ಬಿತ್ತಲಾಗಿದೆ. ಆದರೆ ಒಬ್ಬ ತೀವ್ರವಾದಿಯಾಗಿದ್ದ ಅಂಬೇಡ್ಕರ್ ಸದಾಕಾಲ ಸತ್ಯವನ್ನು, ಸುಸ್ಥಿರತೆಯನ್ನು ಹುಡುಕುತ್ತಿದ್ದರು. ಅವರೊಬ್ಬ ಸಮಾಜವಾದಿಯಾಗಿದ್ದರು. ದಲಿತರಿಗೆ ಇದು ಅರ್ಥವಾದರೆ ಅವರು ಸ್ಥಾಪಿತ ಹಿತಾಸಕ್ತಿಗಳು ಉಂಟುಮಾಡಿರುವ ಪ್ರತಿಗಾಮೀ ಹುದುಲಿನಿಂದ ಅವರನ್ನು ಹೊರತರುತ್ತಿದ್ದರು.”

೧೯೯೧ರ ಜುಲೈನಲ್ಲಿ ನರಸಿಂಹರಾವ್ ಸರ್ಕಾರವು ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ನಿರ್ದೇಶಿತ ನವ ಉದಾರವಾದೀ ಆರ್ಥಿಕ ಪ್ಯಾಕೇಜ್‌ನ್ನು, ಅವು ಬೇರೆ ಪರ್ಯಾಯವಿಲ್ಲದೆ ರೂಪಿಸಿಕೊಂಡ ನಮ್ಮವೇ ಆರ್ಥಿಕ ಸುಧಾರಣೆಗಳು ಎಂಬ ಸುಳ್ಳಿನೊಂದಿಗೆ ಅಳವಡಿಸಿಕೊಂಡಾಗ, ಎಷ್ಟೋ ಜನ ಬುದ್ಧಿಜೀವಿಗಳು ಸರ್ಕಾರದ ಕೃಪೆಗಾಗಿ ಈ ನವ ಅರ್ಥಿಕ ನೀತಿಯನ್ನು ಬೆಂಬಲಿಸಿದರು. ಇನ್ನು ದಲಿತ ಬೌದ್ಧಿಕ ಲೋಕಕ್ಕೆ ಅರ್ಥಶಾಸ್ತ್ರವೆಂದರೇ ಆಗದು! ಇದಕ್ಕೆ ಕಾರಣ, ಅದು ಭೌತಲೋಕಕ್ಕೆ ಸಂಬಂಧಿಸಿದ್ದರಿಂದ ಅದು ಅಂಬೇಡ್ಕರ್ ವಿರೋಧಿಸಿದ ಕಮ್ಯೂನಿಸ್ಟರ ಭೌತವಾದಿ ತರ್ಕದ ಉತ್ಪನ್ನವಾಗಿದೆ ಎಂಬ ಪಟ್ಟಭದ್ರ ಹಿತಾಸಕ್ತಿಗಳ ಅಪಪ್ರಚಾರ. ನಮ್ಮ ಹೋರಾಟವು ಕೇವಲ ರೊಟ್ಟಿಗಾಗಿ ಅಲ್ಲ, ಅದು ಘನತೆಗಾಗಿ ಎಂದು ಘೋಷಿಸಿಕೊಂಡದ್ದರಿಂದ ಆರ್ಥಿಕ ಚಿಂತನೆಯು ದಲಿತ ಚಿಂತನೆಯ ಭಾಗವಾಗಲೇ ಇಲ್ಲ. ಆದರೂ ದಲಿತರಲ್ಲಿಯ ಕೆಲವು ಮಹತ್ವಾಕಾಂಕ್ಷೀ ಶಕ್ತಿಗಳು ಈ ಜನವಿರೋಧಿ ಆರ್ಥಿಕ ನೀತಿಯ ಪರವಾಗಿ ಮಾತನಾಡಿ ಸರ್ಕಾರದ ಮನ್ನಣೆ ಗಳಿಸಿದವು. ನಾನದನ್ನು ಒಂದು ಅವಕಾಶವಾದಿತನವೆಂದು ಮಾತ್ರ ಪರಿಗಣಿಸಿದ್ದೆ. ಅದರೆ ಮುಂದೆ ಈ ವಿಚಾರಗಳು ತೀವ್ರತೆಯನ್ನು ಪಡೆದುಕೊಂಡು ದಲಿತ ವಾಣಿಜ್ಯ ಮಂಡಳಿ ಎಂಬುದೊಂದು ರಚನೆಯಾಗಿ ಅದು ಪ್ರತಿಪಾದಿಸಿದ ದಲಿತ ಬಂಡವಾಳಶಾಹಿ ಎಂಬ ಪರಿಕಲ್ಪನೆಯ ಮೂಲಕ ಹೆಚ್ಚು ಉಗ್ರವಾಗಿ ಮೂಡಿಬರತೊಡಗಿದವು. ಇದಕ್ಕೆ ಕೆಲ ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ಅಧ್ಯಯನ ಸಂಸ್ಥೆಗಳ ಮನ್ನಣೆಯೂ ದೊರೆತು ಅಂಬೇಡ್ಕರರನ್ನು ಒಬ್ಬ ಮುಕ್ತ ಮಾರುಕಟ್ಟೆಯ ಪ್ರತಿಪಾದಕರೆಂಬಂತೆ ಬಿಂಬಿಸುವ ಪ್ರಯತ್ನವೊಂದು ಆರಂಭವಾಯಿತು. ಇದು ಅವರಿಗೆ ಮಾಡುವ ಅವಮಾನವೇ ಸರಿ.

## ‘ಸಮಸ್ಯೆ’ಯ ಅಪ ಓದು

ಅಂಬೇಡ್ಕರ್ ಅವರ ‘ರೂಪಾಯಿಯ ಸಮಸ್ಯೆ’ (The problem of rupee) ಎಂಬ ತಲೆಬರಹದ ಅವರ ಡಿ.ಎಸ್ಸಿ. ಪ್ರಬಂಧದ ತಪ್ಪು ಓದು ಅಥವಾ ದುರುದ್ದೇಶಪೂರಿತ ಓದು ಅಂಬೇಡ್ಕರ್ ಅವರನ್ನು ಒಬ್ಬ ಮುಕ್ತಮಾರುಕಟ್ಟೆಯ ಪ್ರತಿಪಾದಕ ಎಂಬಂತೆ ಬಿಂಬಿಸಲು ಬಳಸಲ್ಪಡುತ್ತಿರುವ ಏಕೈಕ ಆಕರವಾಗಿದೆ. ಈ ಪ್ರಬಂಧದಲ್ಲಿ ಅವರು ಅಂದಿನ ಹಣಕಾಸು ಪದ್ಧತಿಗಳ, ಅಂದರೆ ಚಿನ್ನದ ಮಾನಕ (gold standard) ಮತ್ತು ಚಿನ್ನದ ವಿನಿಮಯ ಪ್ರಮಾಣೀಕರಣಗಳ ವಿಶ್ಲೇಷಣೆ ಮಾಡುತ್ತಾರೆ. ಅಲ್ಲಿ ಅವರು, ಬೆಲೆಗಳ ಸ್ಥಿರತೆಗಾಗಿ, ಚಿನ್ನ ಆಧಾರಿತ ಮೌಲ್ಯಮಾಪನ ಪದ್ಧತಿಯನ್ನು ಪ್ರತಿಪಾದಿಸುತ್ತಾರೆ. ಅಸ್ಥಿರ ಹಣವು ಅನಿಯಂತ್ರಿತ ಬೆಲೆಯೇರಿಕೆಗೆ ಕಾರಣವಾಗಿ ಬಡಜನರ ಮೇಲೆ ಅಸಮಪ್ರಮಾಣದಲ್ಲಿ ಹೊರೆಯಾಗುವುದು ಎಂಬುದು ಅವರ ವಾದದ ತಿರುಳಾಗಿತ್ತಷ್ಟೆ. ಅದರಲ್ಲಿ ಖಾಸಗಿ ಏಜೆಂಟರಿಗೆ ಹೋಲಿಸಿದಲ್ಲಿ ಸರ್ಕಾರಿ ಅಧಿಕಾರಿಗಳ ದುಂದು, ಮೌಲ್ಯನಿರ್ಣಯಕ್ಕಾಗಿ ಸ್ವತಂತ್ರ ಮಾರುಕಟ್ಟೆ ವ್ಯವಸ್ಥೆ ಮುಂತಾದ ಮಾತುಗಳು ಪ್ರಾಸಂಗಿಕವಾಗಿ ಬಂದು ಹೋಗುತ್ತವೆ. ಪ್ರಬಂಧದ ಕೇಂದ್ರ ದೃಷ್ಟಿ ತನ್ನ ಕಾಲದ ಪರಿಸ್ಥಿತಿಯ ವಿಶ್ಲೇಷಣೆ ಮಾತ್ರವಾಗಿರುವುದರಿಂದ ಅದರಲ್ಲಿ ಸಮಾಜವಾದದ ಪರವಾದ ಅಥವಾ ವಿರುದ್ಧವಾದ ತಾತ್ವಿಕ ನಿಲುವುಗಳನ್ನು ಹುಡುಕುವುದು ಸೂಕ್ತವಲ್ಲ.

ಕೊಲಂಬಿಯಾದಲ್ಲಿ ಅಂಬೇಡ್ಕರ್ ಅವರ ಕೆಲವು ಪ್ರಾಧ್ಯಾಪಕರು ಫೇಬಿಯನ್ನ(ಹಂತಾನುಹಂತ ಪರಿವರ್ತನಾವಾದಿ)ರಾಗಿದ್ದರು. ಅಂಬೇಡ್ಕರ್ ಅವರ ಮೇಲೆ ಇಂತಹ ಫೇಬಿಯನ್ನರಲ್ಲಿ ಪ್ರಮುಖರಾಗಿದ್ದ ಜಾನ್ ಡ್ಯೂವೆಯವರ ಪ್ರಭಾವ ಯಾವ ಮಟ್ಟದ್ದಾಗಿತ್ತೆಂದರೆ ೧೯೫೦ನೇ ಇಸವಿಯಲ್ಲೂ ಕೂಡ ಅವರು ತಮ್ಮ ಮೇಲೆ ಅವರ ಪ್ರಭಾವ ಇರುವುದನ್ನು ಸ್ಮರಿಸುತ್ತಾರೆ.

ಫೇಬಿಯನ್ ಸೊಸೈಟಿ ಎಂಬುದು ಒಂದು ಬ್ರಿಟಿಷ್ ಸಮಾಜವಾದಿ ಚಳುವಳಿ. ಜನತಾಂತ್ರಿಕ ಸಮಾಜವಾದದ ನೀತಿಗಳನ್ನು ಪ್ರಚುರಪಡಿಸುವುದು ಇವರ ಧ್ಯೇಯವಾಗಿತ್ತು. ಫೇಬಿಯನ್ನರು ಮೂಲದಲ್ಲಿ ಸಮಾಜವಾದಿಗಳಾಗಿದ್ದರೂ ಅವರು ಮಾರ್ಕ್ಸ್‌ನ ಕ್ರಾಂತಿಕಾರಿ ಸಿದ್ಧಾಂತಗಳಲ್ಲಿ ನಂಬಿಕೆ ಹೊಂದಿರಲಿಲ್ಲ. ಅಂಬೇಡ್ಕರ್ ಅವರು ಅಧ್ಯಯನ ಮಾಡಿದ ‘ರೂಪಾಯಿಯ ಸಮಸ್ಯೆ’ ಎಂಬ ಪ್ರಬಂಧವನ್ನು ಬರೆದ ದಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಫೇಬಿಯನಿಸಂನ ಭದ್ರ ಕೋಟೆಯಾಗಿತ್ತು ಹಾಗಾಗಿ ಅಂಬೇಡ್ಕರ್ ಅವರು ತಮ್ಮ ಸಂಶೋಧನೆಯನ್ನು ಕೈಗೊಂಡ ಬೌದ್ಧಿಕ ಪರಿಸರವು ಕೂಡ ಒಂದು ಸಮಾಜವಾದಿ ಪರಿಸರವಾಗಿತ್ತು. ಅವರು ತಮ್ಮ ‘ಬಹಿಷ್ಕೃತ ಭಾರತ’ದ ಧ್ಯೇಯವಾಕ್ಯವಾಗಿ ಬಳಸಿದ, ಮುಂದಿನ ದಿನಗಳಲ್ಲಿ ತಮ್ಮ ಅನುಯಾಯಿಗಳಿಗೆ ಒಂದು ಮಂತ್ರವೆಂದು ನೀಡಿದ “ವಿದ್ಯಾವಂತನಾಗು, ಜಿಜ್ಞಾಸುವಾಗು, ಸಂಘಟಿತನಾಗು” (Educate, agitate, organize) ಎಂಬ ಘೋಷಣೆಯು ವಾಸ್ತವದಲ್ಲಿ ಒಂದು ಫೇಬಿಯನ್ ಘೋಷಣೆಯೇ. ೧೯೬೦ರು ಹೊತ್ತಿಗೆ ಅಂದರೆ ಅಂಬೇಡ್ಕರ್ ಅವರು ಗತಿಸಿದ ನಾಲ್ಕು ವರ್ಷಗಳ ನಂತರ, ಅಧಿಕೃತವಾಗಿ ಪ್ರಚಾರಕ್ಕೆ ಬಂದ ‘ಹಣಕಾಸುವಾದ’ವನ್ನು(monetarism)ಅವರ ಪ್ರಬಂಧದಲ್ಲಿ ಹುಡುಕುವುದು ಒಂದು ಅಸಂಬದ್ಧ ಪ್ರಯತ್ನ.

## ಪಕ್ಕಾ ಸಮಾಜವಾದಿ

‘ನನ್ನ ಸಾಮಾಜಿಕ ತತ್ವವು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ, ಎಂಬ ಮೂರು ಪದಗಳಲ್ಲಿ ಅಡಕವಾಗಿದೆ. ನನ್ನ ತಾತ್ವಿಕತೆಯು ಧರ್ಮದಲ್ಲಿ ತನ್ನ ಮೂಲಬೇರನ್ನು ಹೊಂದಿದೆಯೇ ಹೊರತು ರಾಜ್ಯ ಶಾಸ್ತ್ರದಲ್ಲಲ್ಲ. ಅವನ್ನು ನನ್ನ ಗುರುವಾದ ಬುದ್ಧನ ಉಪದೇಶಗಳಿಂದ ಪಡೆದಿದ್ದೇನೆ ಎಂದು ಸ್ವತಃ ಅಂಬೇಡ್ಕರ್ ಅವರೇ ಹೇಳಿಕೊಂಡಿರುವುದು ಅವರ ಬಗ್ಗೆ ತುಸುವಾದರೂ ಪರಿಚಯವಿರುವ ಯಾರಿಗಾದರೂ ತಿಳಿದಿರುವ ಸತ್ಯ.

ವಾಸ್ತವದಲ್ಲಿ ಅಂಬೇಡ್ಕರ್ ಅವರ ಧ್ಯೇಯ ವಾಕ್ಯದಲ್ಲಿರುವ ಮೂರು ಪದಗಳು ಮನುಷ್ಯನ ವಿಧಿಯ ಬಗೆಗಿನ ಅವರ ಕಾಣ್ಕೆಯ ತಾತ್ಪರ್ಯ ಮತ್ತು ಮತ್ತು ಬೌದ್ಧ ಧರ್ಮಕ್ಕೆ ಅವರ ಮತಾಂತರದ ಹಿಂದಿನ ಸ್ಫೂರ್ತಿ ಎನ್ನಬಹುದು. ಆದರೆ ಈ ಪದಗಳು ಫ್ರೆಂಚ್ ಕ್ರಾಂತಿಯ ಘೋಷಣೆಯಾಗಿದ್ದುದು ಮತ್ತು ಅವು ಬೌದ್ಧ ಧರ್ಮದ ಯಾವ ಆಕರಗಳಲ್ಲೂ ಕಾಣುವುದಿಲ್ಲ ಎಂಬುದು ಜಗತ್ತಿಗೇ ತಿಳಿದಿರುವ ಸಂಗತಿ. ಫ್ರೆಂಚ್ ಕ್ರಾಂತಿಯಲ್ಲಿ ಈ ಹೇಳಿಕೆ ಒಂದು ಬೂರ್ಷ್ವಾ

ಘೋಷಣೆ ಮಾತ್ರವಾಗಿ ಉಳಿದಿದ್ದರೆ ಬೌದ್ಧ ಧರ್ಮದ ತಿರುಳಿನಲ್ಲಿ, ಅದರ ಅಂತಿಮ ಕನಸಾಗಿ ವ್ಯಕ್ತವಾಗಿದೆ ಎಂಬುದೇ ಅಂಬೇಡ್ಕರ್ ಅವರ ಈ ಹೇಳಿಕೆಯ ಅರ್ಥ. ಮಾನವ ಸಮುದಾಯವು ಅವನ್ನು ಪೂರ್ಣವಾಗಿ ಅಭಿವ್ಯಕ್ತಿಸುವಂತಾಗಬೇಕೆಂಬುದು ಅಂಬೇಡ್ಕರ್ ಕನಸು. ಮಾರ್ಕ್ಸ್ ಆದರೂ ಮನುಷ್ಯನ ಅಂತಿಮ ನೆಲೆಯನ್ನು ಕಮ್ಯೂನಿಸಂ ಎಂಬ, ಅಂದರೆ ಪ್ರತಿಯೊಬ್ಬ ಮನುಷ್ಯನೂ ತನಗೆ ಬೇಕಾದಷ್ಟನ್ನು ಮಾತ್ರ ಪಡೆದು ತನಗೆ ಸಾಧ್ಯವಿದ್ದಷ್ಟೂ ಸಮುದಾಯಕ್ಕೆ ನೀಡುವ ಮಹಾ ಕನಸಿನ (ಯುಟೋಪಿಯನ್) ಕಲ್ಪನೆಯಲ್ಲೇ ಕಂಡುಕೊಂಡನು.

ಇಬ್ಬರ ಈ ಕಾಣ್ಕೆಗಳು ತಾಳೆಯಾಗುವುದಿಲ್ಲವೇ? ಮಾರ್ಕ್ಸ್‌ವಾದವು ನಮಗೆ ತಿಳಿಸುವಂತೆ ಸಮಾಜವಾದವು ಕಮ್ಯೂನಿಸಂನ ಹಿಂದಿನ ಹಂತ. ಹಾಗಾಗಿ ಅಂಬೇಡ್ಕರ್ ಅವರ ತಾತ್ವಿಕ ನಿಲುವು ಸಮಾಜವಾದವನ್ನು ಮೀರಿ ನಿಲ್ಲುವಂತಹದು ಎಂದು ಗುರುತಿಸಬೇಕಾಗುವುದು.

ಅಂಬೇಡ್ಕರ್ ಅವರಿಗೆ ಕಮ್ಯೂನಿಸಂ ಮತ್ತು ಕಮ್ಯೂನಿಸ್ಟರ ಜೊತೆಗೆ ಇದ್ದ ಭಿನ್ನಾಭಿಪ್ರಾಯದ ಲಾಭ ಪಡೆಯಬಯಸುವ ಎಲ್ಲರೂ ಅವರನ್ನು ಮಾರ್ಕ್ಸ್ ವಿರೋಧಿ, ಮಾರ್ಕ್ಸನ ಎಲ್ಲ ನಿಲುವುಗಳ ವಿರೋಧಿ ಎಂಬಂತೆ ಚಿತ್ರಿಸುತ್ತಾರೆ. ಹಾಗೆ ಮಾಡುವ ಮೂಲಕ ಅಂಬೇಡ್ಕರ್ ಅವರನ್ನು ಅವರ ಶತ್ರುಪಾಳೆಯಕ್ಕೆ ದೂಡುವುದಕ್ಕೂ ಹೇಸುವುದಿಲ್ಲ. ಅಂಬೇಡ್ಕರ್ ಅವರನ್ನು ಬಂಡವಾಳಶಾಹಿ ಪರ, ಜಾಗತೀಕರಣದ ಪರ, ಮುಕ್ತಮಾರುಕಟ್ಟೆಯ ಪರ ಎಂದು ಹೇಳುವುದು ಈ ಬಗೆಯ ದುಷ್ಕೃತ್ಯವೇ. ಮೇಲೆ ವಿವರಿಸಿದ ಹಾಗೆ ಪ್ರಭಾವಿಸಲ್ಪಡಲು ಅವಕಾಶವಿರುವ ಒಂದು ಅವಧಿಯಲ್ಲಿ ಅಂಬೇಡ್ಕರ್ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಮತ್ತು 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನಲ್ಲಿ ತಮ್ಮ ಪ್ರಾಧ್ಯಾಪಕ ವೃಂದದ ಪ್ರಭಾವಕ್ಕೆ ಒಳಗಾಗಿದ್ದರು. ಅವರು ಸಮಾಜವಾದವನ್ನು ಬಯಸಿದರೂ, ಕ್ರಾಂತಿಯ ಬಗೆಗೆ ಮಾರ್ಕ್ಸನ ನಿಲುವಿನ ಬಗೆಗೆ ತಮ್ಮದೇ ಆದ ಭಿನ್ನ ನಿಲುವನ್ನು ಹೊಂದಿದ್ದರು. ಅದನ್ನು ಅವರು ತಮ್ಮ ವಿಧಾನಗಳ ಶ್ರೇಷ್ಠತೆಯನ್ನು ನಿರೂಪಿಸಲಷ್ಟೇ ಬಳಸಿದರು. ಹಾಗಾಗಿ ಅವರೊಬ್ಬ ಸಮಾಜವಾದಿ ಎಂಬುದರ ಬಗ್ಗೆ ಸಂಶಯಕ್ಕೆ ಯಾವುದೇ ಎಡೆಯಂತೂ ಇಲ್ಲ. ಕೇವಲ ತಾತ್ವಿಕ ನಿಲುವಿನ ದೃಷ್ಟಿಯಿಂದ ಮಾತ್ರವಲ್ಲದೆ, ಆಚರಣೆಯ ವಿಚಾರದಲ್ಲೂ ಅವರು ತಮ್ಮ ಜೀವನ ಪರ್ಯಂತ ಸಮಾಜವಾದಿ ಉದ್ದೇಶಗಳನ್ನೇ ಹೊಂದಿದ್ದರು. ಅವರ ಪ್ರಥಮ ರಾಜಕೀಯ ಪಕ್ಷವಾದ, ಸ್ವತಂತ್ರ ಕಾರ್ಮಿಕ ಪಕ್ಷವನ್ನು (ಇಂಡಿಪೆಂಡೆಟ್ ಲೇಬರ್ ಪಾರ್ಟಿ: ಐ.ಎಲ್.ಪಿ.)) ಫೇಬಿಯನ್ ರಾಜಕೀಯ ಗುಂಪಾದ ಇಂಗ್ಲೆಂಡ್‌ನ ಲೇಬರ್ ಪಕ್ಷದ ಮಾದರಿಯಲ್ಲೇ ರೂಪುಗೊಳಿಸಲಾಗಿತ್ತು. ಅದಕ್ಕೂ ಮೊದಲೇ ಅವರು ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿಯನ್ನು ಅಸ್ಪೃಶ್ಯರ ಎರಡು ಶತ್ರುಗಳೆಂದು ಗುರುತಿಸಿದ್ದರು. ಐ.ಎಲ್.ಪಿ.ಯು ಸಮಾಜವಾದದಿಂದ ಸ್ಫೂರ್ತಿಗೊಂಡು ಕೆಂಪು ಬಾವುಟವನ್ನು ಹೊಂದಿದ್ದ ಒಂದು ಕಾರ್ಮಿಕ ಪಕ್ಷ ಎಂಬುದು ನಿರಾಕರಿಸಲಾಗದ ಸತ್ಯವಂತೂ ಹೌದು. ವರ್ಗ ಮತ್ತು ಜಾತಿಗಳು ಹೇಗೆ ಮಿಳಿತವಾಗಿ ಒಂದು ಹೋರಾಟವನ್ನು ರೂಪಿಸಬಹುದು ಎಂಬುದನ್ನು ಬೀದಿಗಳಲ್ಲಿ ತೋರಿಸಿಕೊಟ್ಟಿದ್ದು ಐ.ಎಲ್.ಪಿ.

ತನ್ನ ಯಶಸ್ಸಿನ ಹೊರತಾಗಿಯೂ, ಆ ಕಾಲದ ರಾಜಕಾರಣವು ಮತೀಯ ತಿರುವುಗಳನ್ನು ಪಡೆದುಕೊಳ್ಳುತ್ತಿದ್ದುದರಿಂದ ಐ.ಎಲ್.ಪಿ.ಯ ಬಹಿರಂಗ ಎಡಪಂಥೀಯ ರಾಜಕಾರಣವನ್ನು ಅಂಬೇಡ್ಕರ್ ತ್ಯಜಿಸಬೇಕಾಯಿತು. ೧೯೪೨ರ ಫೆಬ್ರವರಿಯಲ್ಲಿ ಪ್ರಕಟವಾದ ಕ್ರಿಪ್ಸ್ ಮಿಷನ್ ವರದಿಯು ಇತರೆ ಅಲ್ಪ ಸಂಖ್ಯಾತರ ಬಹುಪಾಲು ಬೇಡಿಕೆಗಳನ್ನು ಒಪ್ಪಿಕೊಂಡರೂ, ಅಸ್ಪೃಶ್ಯರ ಬೇಡಿಕೆಗಳನ್ನು ಮಾತ್ರ ನಿರ್ಲಕ್ಷಿಸಿದ್ದುದರಿಂದ ಅಂಬೇಡ್ಕರ್ ಕ್ಷಿಪ್ರ ಕಾರ್ಯಾಚರಣೆಯೊಂದಕ್ಕೆ ಸಿದ್ಧವಾಗಬೇಕಾಯಿತು. ತಮ್ಮ ಕಾರ್ಯತಂತ್ರವನ್ನು ಬದಲಿಸಿ, ಐ.ಎಲ್.ಪಿ.ಯನ್ನು ಬರಕಾಸ್ತು ಮಾಡುವುದು ಮತ್ತು ಮೇಲ್ನೋಟಕ್ಕೆ ಜಾತಿ ಆಧಾರಿತವೆಂದು ಕಾಣುವ ಪರಿಶಿಷ್ಟ ಜಾತಿಗಳ ಒಕ್ಕೂಟ(ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ : ಎಸ್.ಸಿ..ಎಫ್.)ವನ್ನು ೧೯೪೨ರ ಜೂನ್‌ನಲ್ಲಿ ಸ್ಥಾಪಿಸುವುದು ಅವರಿಗೆ ಅನಿವಾರ್ಯವಾಯಿತು. ಅದೇ ಕಾಲಕ್ಕೆ ವೈಸ್‌ರಾಯ್ ಅವರ ಕಾರ್ಯಕಾರಿ ಮಂಡಳಿಗೆ ಅವರ ಸೇರ್ಪಡೆಯೂ ನಡೆಯಿತು. ಮತೀಯ ಭಾವನೆ ತುಂಬಿದ ಅಂದಿನ ಸಮಾಜದಲ್ಲಿ ಅಸ್ಪೃಶ್ಯರ ವಿಮೋಚನೆಗೆ ಅವರು ಪ್ರಯತ್ನಿಸಿದರು. ಸಂವಿಧಾನ ಸಮಿತಿಗೆ ಎಸ್.ಸಿ.ಎಫ್. ಪರವಾಗಿ ಒಂದು ವಿಜ್ಞಾಪನಪತ್ರವನ್ನು ಅವರು ಸಿದ್ಧಪಡಿಸಿದರು. ನಂತರದಲ್ಲಿ 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಎಂಬ ತಮ್ಮದೆ ವ್ಯಾಖ್ಯಾನದಲ್ಲಿ ಪ್ರಕಟವಾದ ಈ ದಾಖಲೆಯು ವಸಾಹತೋತ್ತರ ಭಾರತದಲ್ಲಿ 'ಪ್ರಭುತ್ವ ಸಮಾಜವಾಜ'(State Socialism)ವನ್ನು ಪ್ರತಿಪಾದಿಸಿತು.

## ಸಂವಿಧಾನ-ಸಮಾಜವಾದ-ಅಂಬೇಡ್ಕರ್

ಅಂಬೇಡ್ಕರ್ ಅವರನ್ನು ಒಬ್ಬ ಮುಕ್ತಮಾರುಕಟ್ಟೆ ಅರ್ಥಶಾಸ್ತ್ರಜ್ಞ ಎಂದು ಕರೆದು ಅವರ ಹೆಸರು ಕೆಡಿಸಿದ 'ವಿದ್ವಾಂಸ'ರು ಅವರು ಹೇಗೆ ಸಮಾಜವಾದಕ್ಕೆ ವಿರೋಧವಾಗಿದ್ದರು ಎಂಬ ತಮ್ಮ ವಾದಕ್ಕೆ ಆಧಾರವಾಗಿ ಅವರು ಸಂವಿಧಾನದಲ್ಲಿ ಸಮಾಜವಾದ ಎಂಬ ಪದವನ್ನು ಬಳಸುವುದಕ್ಕೆ ವಿರೋಧವಾಗಿದ್ದರು ಎಂದು ಪ್ರತಿಪಾದಿಸುತ್ತಾರೆ. ಇವರು ಸಂವಿಧಾನವೆಂಬುದು ಅಂಬೇಡ್ಕರ್ ಅವರು ಬರೆದ ಪುಸ್ತಕವಲ್ಲ; ಅದು ಸಂವಿಧಾನ ಸಮಿತಿಯ ಸರ್ವಸಮ್ಮತಿಯ ಒಂದು ದಾಖಲೆ ಎಂಬುದನ್ನು ಅರಿಯಬೇಕಾಗಿತ್ತು. ಆ ಸಮ್ಮತಿಯನ್ನು ಉಂಟುಮಾಡುವುದು ಅವರ ಜವಾಬ್ದಾರಿಯಾಗಿತ್ತು. ಸಂವಿಧಾನ ಸಮಿತಿಯಲ್ಲಿನ ಅವರ ಎಲ್ಲಾ ವಾದಗಳನ್ನೂ ಈ ಚೌಕಟ್ಟಿನೊಳಗೇ ಪರಿಗಣಿಸಬೇಕು. ಸಮಾಜವಾದ ಎಂಬ ಪದವನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡುವ ವಿಚಾರದಲ್ಲಿ ಅವರ ನೇರವಾದ ಹೇಳಿಕೆಯೊಂದಿದೆ; ಅದು ಈ ಬಗೆಯ ಸಂಶಯಗಳನ್ನೆಲ್ಲಾ ತೊಡೆಯುವಂತಹದು:

'ರಾಜ್ಯದ ನೀತಿಯು ಏನಾಗಿರಬೇಕು. ಸಮಾಜವನ್ನು ಯಾವ ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ರೂಪಿಸಬೇಕು ಎಂಬ ವಿಚಾರಗಳು ಕಾಲ ಮತ್ತು ಪರಿಸ್ಥಿತಿಗನುಗುಣವಾಗಿ ಜನರಿಂದಲೇ ನಿರ್ಧರಿಸಲ್ಪಡಬೇಕು. ಅದನ್ನು ಸಂವಿಧಾನದಲ್ಲಿ ಬರೆದಿಡಲಾಗದು. ಏಕೆಂದರೆ ಅದು ಪ್ರಜಾಪ್ರಭುತ್ವವನ್ನೇ ಸಂಪೂರ್ಣವಾಗಿ ನಾಶಮಾಡಿದಂತೆ. ರಾಜ್ಯದ ಸಾಮಾಜಿಕ ವ್ಯವಸ್ಥೆ ಒಂದು ನಿರ್ದಿಷ್ಟ ರೂಪದಲ್ಲಿರಬೇಕು ಎಂಬುದನ್ನು ನೀವು ಸಂವಿಧಾನದಲ್ಲೇ ನಮೂದಿಸಿದರೆ ಆಗ ನನ್ನ ಅಭಿಪ್ರಾಯದಲ್ಲಿ, ತಾವು ಬದುಕಬಯಸುವ ಸಾಮಾಜಿಕ ವ್ಯವಸ್ಥೆ ಹೇಗಿರಬೇಕು ಎಂಬುದನ್ನು ನಿರ್ಧರಿಸುವ ಜನರ ಸ್ವಾತಂತ್ರ್ಯವನ್ನೇ ನೀವು ಕಿತ್ತುಕೊಂಡಂತೆ. ಇಂದು ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಗಿಂತ ಸಮಾಜವಾದಿ ಸಾಮಾಜಿಕ ವ್ಯವಸ್ಥೆಯೇ ಉತ್ತಮ ಎಂದು ಜನ ನಿರ್ಧರಿಸುವುದು ಖಂಡಿತ ಸಾಧ್ಯ. ಅದರೆ ಇಂದಿನ ಅಥವಾ ನಾಳಿನ ಸಮಾಜವಾದಿ ವ್ಯವಸ್ಥೆಗಿಂತಲೂ ಉತ್ತಮವಾದ ಬೇರೊಂದು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದೂ ಸಹ ಯೋಚಿಸಬಲ್ಲ ಜನರಿಗೆ ಖಂಡಿತಾ ಸಾಧ್ಯ. ಆದ್ದರಿಂದ ತಾವು ಯಾವ ರೀತಿಯ ವ್ಯವಸ್ಥೆಯಲ್ಲಿ ಬದುಕಬೇಕೆಂಬ ನಿರ್ಧಾರವನ್ನು ಜನರಿಗೇ ಬಿಡದೆ ಅವರು ಒಂದು ನಿರ್ದಿಷ್ಟ ರೀತಿಯ ವ್ಯವಸ್ಥೆಯಲ್ಲಿ ಬದುಕಬೇಕೆಂದು ಸಂವಿಧಾನವು ಏಕೆ ನಿರ್ಬಂಧಿಸಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. [*ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು. ಸಂ ೧೩ ಪುಟ೩೭೬*]

ಅಂಬೇಡ್ಕರ್ ಅವರ ಕೊನೆಯ ಕೆಲವೇ ಕೆಲವು ಸಾರ್ವಜನಿಕ ಭಾಷಣಗಳಲ್ಲೊಂದಾದ ಕಠ್ಮಂಡು ಭಾಷಣದಲ್ಲಿ ಅಂಬೇಡ್ಕರ್ ಅವರು ಮಾರ್ಕ್ಸ್‌ವಾದವನ್ನು ಬೌದ್ಧ ಧರ್ಮದೊಂದಿಗೆ ಹೋಲಿಸುತ್ತಾರೆ. ಬುದ್ಧನ ವಿಧಿಗಳು ಮಾರ್ಕ್ಸ್‌ನದ್ದಕ್ಕಿಂತ ಉತ್ತಮ; ಏಕೆಂದರೆ ಅಲ್ಲಿ ಪ್ರಜಾಪ್ರಭುತ್ವವಿದೆ, ಅಹಿಂಸೆ ಇದೆ ಎನ್ನುವರಾದರೂ ಅಂತಿಮವಾಗಿ ಈ ಎರಡರ ಗುರಿಯೂ ಒಂದೇ ಆಗಿರುವುದರಿಂದ ಮಾರ್ಕ್ಸ್‌ವಾದ ಎರಡನೇ ಅತ್ಯುತ್ತಮ ಮಾರ್ಗವೆಂದು ಮಾನ್ಯ ಮಾಡುತ್ತಾರೆ. ಏಷ್ಟಾದರೂ, ಅವರ ಪ್ರಕಾರ ದಮನ ಮತ್ತು ಶೋಷಣೆಯಿಲ್ಲದ ಸಮಾಜ ಸಾಧ್ಯವಾಗುವುದು ಒಂದು ಸಮಾಜವಾದಿ ಸಮಾಜದಲ್ಲಿ ಮಾತ್ರ.

ಹಾಗೆ ನೋಡಿದರೆ ಮಾರ್ಕ್ಸ್ ಮತ್ತು ಅಂಬೇಡ್ಕರ್ ಇಬ್ಬರೂ ಸಮಾಜವಾದದ ಆಚೆಗೂ ಹೋಗಿ ಒಂದು ಪರಿಪೂರ್ಣ ಸಮಾಜವನ್ನು ಹುಡುಕಿದರು. ಕೇವಲ ಮಾನವನ ದುರಾಸೆಯಿಂದ ಪ್ರೇರೇಪಿಸಲ್ಪಟ್ಟ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಸಾಧ್ಯವೇ ಇಲ್ಲ. ಬಂಡವಾಳಶಾಹಿಯಾಗಲಿ ಅಥವಾ ಮುಕ್ತ ಮಾರುಕಟ್ಟೆಯನ್ನು ಪ್ರತಿಪಾದಿಸುವ ಅದರ ನವ ಉದಾರವಾದವಾಗಲಿ ತೋರಿಕೆಗಾದರೂ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದಿಲ್ಲ. ಪ್ರತಿಯಾಗಿ ಸಾಮಾಜಿಕ ಶ್ರೇಣೀಕರಣ ರೂಪದ ಅಸಮಾನತೆಯು ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಕೆಲಸ ಮಾಡುತ್ತದೆ ಎನ್ನುವ ಮೂಲಕ ಅದು ಅನ್ಯಾಯವನ್ನು ಸಮರ್ಥಿಸುತ್ತದೆ. ಅಂಬೇಡ್ಕರ್ ಇಂತಹ ಬಂಡವಾಳಶಾಹಿ ಅಥವಾ ನವ ಉದಾರವಾದವನ್ನು ಬೆಂಬಲಿಸಿದರು ಎಂದು ಹೇಳುವುದಕ್ಕಿಂತ ಹೆಚ್ಚಿನ ಭಂಡವಾದ ಬೇರೊಂದಿರಲಾರದು. ಜಾತ್ಯಾಧಾರಿತ ಊಳಿಗಮಾನ್ಯತೆಗಿಂತ ಬಂಡವಾಳಶಾಹಿಯು ಉತ್ತಮ; ಏಕೆಂದರೆ ಅದು ಮಾರ್ಕ್ಸ್ ಕೂಡ ಶ್ರಮಿಕರನ್ನು ಜೀತದಿಂದ ಬಿಡುಗಡೆ ಮಾಡಿ ಭಾರತದಲ್ಲಿ ಬಂಡವಾಳಶಾಹಿಯ ಆಗಮನವು ಜಾತಿಪದ್ಧತಿಯನ್ನು ನಾಶಪಡಿಸುವುದು ಎಂದು ಭವಿಷ್ಯ ನುಡಿಯುವಂತೆ ಪ್ರೇರೇಪಿಸಿದ ಮಾತಿಗೂ ಆಧಾರವಿಲ್ಲ. ಏಕೆಂದರೆ ಅಂಬೇಡ್ಕರ್, ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿಗಳು ಸಹವರ್ತಿಗಳು ಮಾತ್ರವಲ್ಲ, ಅವು ಪರಸ್ಪರ

ಪೂರಕವಾದ ಸಹಜೀವಿಗಳು ಎಂಬುದನ್ನು ಅರಿತಿದ್ದರು. ತಾವೊಬ್ಬ ಸಮಾಜವಾದಿ ಎಂಬುದನ್ನು ಅಂಬೇಡ್ಕರ್ ಹಲವು ಸಲ ಸ್ಪಷ್ಟವಾಗಿ ಹೇಳಿದ್ದಾರೆ.

### ಜಾಗತೀಕರಣ ಮತ್ತು ಅಂಬೇಡ್ಕರ್

ಮೊದಲನೆಯದಾಗಿ ಜಾಗತಿಕ ಬಂಡವಾಳಶಾಹಿಯ ತೀವ್ರರೂಪವಾದ ಜಾಗತೀಕರಣಕ್ಕೂ, ಅಂಬೇಡ್ಕರ್ ಅವರಿಗೂ ಸಂಬಂಧ ಕಲ್ಪಿಸಿ ಮಾತನಾಡುವುದು ಕೇವಲ ಊಹಾತ್ಮಕ. ಜಾಗತೀಕರಣಕ್ಕೆ ತಮ್ಮ ಬೆಂಬಲವನ್ನು ತಾರ್ಕಿಕವಾಗಿ ಸಮರ್ಥಿಸಿಕೊಳ್ಳಲಾರದ ಜನ ಅಂಬೇಡ್ಕರ್ ಅವರು ಬದುಕಿದ್ದರೆ ಅವರು ಜಾಗತೀಕರಣವನ್ನು ಬೆಂಬಲಿಸುತ್ತಿದ್ದರು ಎನ್ನುತ್ತಾ ಅವರ ಹೆಸರನ್ನು ತಮ್ಮ ಈ ಅಸಾಮರ್ಥ್ಯವನ್ನು ಮರೆಮಾಚಿಕೊಳ್ಳಲು ಬಳಸಿಕೊಳ್ಳುತ್ತಿದ್ದಾರೆ. ಜಾಗತೀಕರಣ ಎಂದರೆ ಏನು ಎಂಬುದನ್ನು ಅರ್ಥ ಮಾಡಿಕೊಂಡರೆ, ಜಾಗತೀಕರಣಕ್ಕೆ ಸಂಬಂಧಿಸಿದಂತೆ ಅಂಬೇಡ್ಕರ್ ಅವರ ನಿಲುವು ಏನಾಗಿರುತ್ತಿತ್ತು ಎಂಬುದನ್ನು ನಾವು ನಿರ್ಧರಿಸಬಹುದು.

ಜಾಗತೀಕರಣವೆಂಬುದು ಕಮ್ಯೂನಿಸ್ಟರಿಂದ ಮತ್ತು ಆರ್ಥಿಕ ಸಂಕಷ್ಟದ ಸಂದರ್ಭಗಳಲ್ಲಿ ಜನರ ಪರವಾಗಿ ಪ್ರಭುತ್ವ ಮಧ್ಯಪ್ರವೇಶಿಸಬೇಕೆಂದು ಪ್ರತಿಪಾದಿಸುವ ಸೌಮ್ಯ ಸಮಾಜವಾದಿಗಳಿಂದಾಗಿ ಶತಮಾನಗಳ ಕಾಲ ಅಂಚಿಗೆ ತಳ್ಳಲ್ಪಟ್ಟಿದ್ದಕ್ಕೆ ಪ್ರತಿಕಾರಾತ್ಮಕವಾಗಿ ಪುನರುತ್ಥಾನಗೊಂಡಿರುವ ಉದಾರವಾದದ ತೀವ್ರತರ ಆವೃತ್ತಿ. ಅದು ಮೂಲಭೂತವಾಗಿ ಅತಿಯಾದ ವ್ಯಕ್ತಿವಾದವನ್ನು ಅವಲಂಬಿಸಿದೆ. ಸ್ಪರ್ಧೆಯೇ ಅಭಿವೃದ್ಧಿಯ ಚಾಲಕ ಶಕ್ತಿ, ಮುಕ್ತಮಾರುಕಟ್ಟೆಯೇ ಇದರ ಮಾದರಿ. ಪ್ರತಿಯೊಬ್ಬ ವ್ಯಕ್ತಿಯನ್ನೂ ಉಳಿದ ಜಗತ್ತಿನೊಂದಿಗೆ ಸ್ಪರ್ಧೆಗೆ ದೂಡಿ, ಅಸಮಾನತೆ, ಶೋಷಣೆ ಮತ್ತು ಸಾಮಾಜಿಕ ಅನ್ಯಾಯಗಳಿಗೆ ಡಾರ್ವಿನ್‌ವಾದಿ ಸಮಜಾಯಿಷಿಯನ್ನು – ಸಮರ್ಥರು ಉಳಿಯುತ್ತಾರೆ–ಅದು ನೀಡುತ್ತದೆ. ಆರ್ಥಿಕ ನೀತಿಯು ಒಂದು ಪ್ಯಾಕೇಜ್ ಆಗಿ ರೂಪಾಂತರವಾದಾಗ ಅದು ಬಡವರ ಮತ್ತು ದಮನಿತರ ಬಗ್ಗೆ ಯಾವುದೇ ಕಾಳಜಿ ಇಲ್ಲದೆ ಖಾಸಗೀಕರಣ, ನಿಯಂತ್ರಣವಿಲ್ಲದ ಉದಾರೀಕರಣ ಎಂದು ಕರೆಸಿಕೊಳ್ಳುತ್ತದೆ. ಜಾಗತಿಕ ಬಂಡವಾಳದ ಈ ಕಾರ್ಯತಂತ್ರವು ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳಿಂದ ಸಾಧ್ಯವಾಗಿಸಲ್ಪಟ್ಟದ್ದು, ಸೋವಿಯತ್ ರಷ್ಯಾದ ಅಳಿವಿನಿಂದ ಇದು ತನ್ನ ಬಲವನ್ನು ಹೆಚ್ಚಿಸಿಕೊಂಡಿತು. ರಾಜ್ಯವು ಈ ದೋಚುವ ಪ್ರಕ್ರಿಯೆಗೆ ಸಹಾಯಕವಾಗಿ ಜಾಗತಿಕ ಬಂಡವಾಳದ ಕ್ರೋಡೀಕರಣಕ್ಕೆ ಕಾರಣವಾಗುತ್ತಿದೆ. ಶಿಕ್ಷಣ, ಅರೋಗ್ಯ ಮುಂತಾದ ಸಾಮಾಜಿಕ ಸೇವೆಗಳನ್ನು ಒದಗಿಸುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ.

### ಜಾಗತೀಕರಣ ಮತ್ತು ದಲಿತರು

ಇದು ಜಾಗತೀಕರಣದ ಲಕ್ಷಣ ಎಂದಾದರೆ, ಮಾನವ ಭವಿಷ್ಯವನ್ನು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳಂತಹ ಆದರ್ಶಗಳಲ್ಲಿ ಕಾಣಬಯಸಿದ ಅಂಬೇಡ್ಕರ್ ಇಂತಹ ಜಾಗತೀಕರಣವನ್ನು ಬೆಂಬಲಿಸುವುದು ಸಾಧ್ಯವಿತ್ತೆ? ಒಂದು ದೇಶವು ಅನುಸರಿಸುವ ಮುಕ್ತ ಮಾರುಕಟ್ಟೆ ನೀತಿಯ ಪ್ರಮಾಣಕ್ಕನುಸಾರವಾಗಿ ಜನರ ನಡುವೆ ಆರ್ಥಿಕ ಅಸಮಾನತೆ ಹಿಂದೆಂದೂ ಕಾಣದ ಮಟ್ಟದಲ್ಲಿ ಹೆಚ್ಚಿದೆ. ಉದ್ಯೋಗ, ಪ್ರಜಾಪ್ರಭುತ್ವಾತ್ಮಕ ಅವಕಾಶ, ಪರಿಸರ ಇತ್ಯಾದಿಗಳು ನಷ್ಟವಾಗುತ್ತಿವೆ ಎಂಬುದು ಕಣ್ಣಿಗೆ ಕಂಡರೂ, ಅಸ್ಮಿತೆಯ ಗೀಳಿಗೆ ಸಿಲುಕಿರುವ ದಲಿತರು ಇದನ್ನು ಕಾಣಲಾರರು, ಜಾತಿಯೆಂಬ ವಿಶಿಷ್ಟ ಸಮಸ್ಯೆಯ ಬಲಿಪಶುಗಳು ತಾವು, ಎಂದುಕೊಳ್ಳುವ ಅವರು ಇದಕ್ಕೆ ವಿರುದ್ಧವಾದ ಸಾಕ್ಷ್ಯಗಳನ್ನು ಗಮನಿಸಲಾರರು. ದಲಿತರು ತಮ್ಮ ಧೋರಣೆಯಲ್ಲಿ ಇಷ್ಟೊಂದು ಪಂಗಡವಾದಿಗಳಾಗಿರುವುದು ವಿಷಾದನೀಯ.

ನೀವು ಹೆಚ್ಚು ದುರ್ಬಲರಾಗಿದ್ದಷ್ಟೂ ಬಾಧೆ ಹೆಚ್ಚುತ್ತಾ ಹೋಗುವುದು ಜಾಗತೀಕರಣದ ಗುಣವಾಗಿದೆ. ದಲಿತರು ಇದರಿಂದ ಹೆಚ್ಚು ಬಾಧಿಸಲ್ಪಟ್ಟಿರುವುದು ಅರಿವಿಗೆ ಬಂದಿದ್ದರೂ, ಅದು ಅವರಿಗೆ ಒಂದು ಮೇಲ್ಮೈ ಅನುಭವವಾಗಿ ಮಾತ್ರ ಕಂಡಿರುವಂತಿದೆ. ಆದ್ದರಿಂದ ನಾನು ವ್ಯಕ್ತಿಗತ, ಸಮಾಜೋ–ಆರ್ಥಿಕ, ಸಮಾಜೋ–ರಾಜಕೀಯ, ಸಮಾಜೋ–ಸಾಂಸ್ಕೃತಿಕ ವಲಯಗಳಲ್ಲಿನ ಸಬಲೀಕರಣಗಳ ಸೂಚ್ಯಂಕಗಳ ನೆಲೆಯಲ್ಲಿ ಇದನ್ನು ಪರಿಶೀಲಿಸಬಯಸುತ್ತೇನೆ. ಸಾರ್ವಜನಿಕ ವ್ಯವಸ್ಥೆಯಾಗಿದ್ದ ಶಿಕ್ಷಣ, ಆರೋಗ್ಯಗಳಂತಹ ಕ್ಷೇತ್ರಗಳಿಂದ ಪ್ರಭುತ್ವವು ಹಿಂದೆ ಸರಿದು ಅವನ್ನು ಖಾಸಗಿಯವರ ಕೈಗೊಪ್ಪಿಸುವುದರಿಂದ ದಲಿತರ ಸಶಕ್ತೀಕರಣಕ್ಕೆ ಬಹುಮುಖ್ಯವಾದ ಶಿಕ್ಷಣವು ಶಿಕ್ಷಣ ಸಂಸ್ಥೆಗಳ ಗುಣಮಟ್ಟದ ಶ್ರೇಣೀಕರಣವು ಹಿಂದಿನ ಜಾತಿಶ್ರೇಣೀಕರಣಕ್ಕೆ ಸಂವಾದಿಯಾಗಿ ಅವರಿಗೆ ದುರ್ಲಭವಾಗುತ್ತಿದೆ. ಆರೋಗ್ಯಸೇವೆಗಳಂತೂ ಸಾರ್ವಜನಿಕ ಕ್ಷೇತ್ರದಿಂದ ಈಗಾಗಲೇ ಮಾಯವಾಗಿ ಹೋಗಿದೆ. ಸಮಾಜೋ–ಆರ್ಥಿಕ ಸಬಲೀಕರಣಕ್ಕೆ ಮುಖ್ಯವಾದ ಭೂಸುಧಾರಣೆಯ ವಿಚಾರಗಳು ಸಾರ್ವಜನಿಕ ಚರ್ಚೆಯ ಕ್ಷೇತ್ರದಿಂದ ಮಾಯವಾಗಿ ಕಾರ್ಪೊರೇಟ್ ಭೂಕಬಳಿಕೆಗೆ ದಾರಿಮಾಡಿಕೊಟ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿ ದಲಿತರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಮೀಸಲಾತಿಯ ಕಾರಣದಿಂದ ದಲಿತರಿಗೆ ದೊರೆಯುತ್ತಿದ್ದ ಸಾರ್ವಜನಿಕ ಕ್ಷೇತ್ರದ ಉದ್ಯೋಗಗಳು ಕಣ್ಮರೆಯಾಗುತ್ತಾ. ಮೀಸಲಾತಿಯೇ ನಿಷ್ಫಲವಾಗುವ ಕಾಲ ದೂರವಿಲ್ಲದಾಗಿದೆ. ಪ್ರಜಾಪ್ರಭುತ್ವೀಕರಣದ ವಿಚಾರವಾದರೂ ಅಷ್ಟೆ, ಅದು ಚುನಾವಣೆಗಳ ರೂಪದಲ್ಲಿ ಕೇವಲ ಸಾಂಕೇತಿಕ ಮಟ್ಟದಲ್ಲಿ ಉಳಿದಿದೆ. ಜನರಿಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶಗಳು ಕ್ಷೀಣಿಸುತ್ತಿವೆ. ವ್ಯವಸ್ಥೆಯ ವಿರುದ್ಧದ ಸಣ್ಣ ಭಿನ್ನಾಭಿಪ್ರಾಯಗಳಿಗೂ ನಕ್ಸಲ್, ಮಾವೋವಾದಗಳ ಹಣೆಪಟ್ಟಿ ಕಟ್ಟಿ ದಲಿತ ಯುವಕರನ್ನು ಹಣಿಯಲಾಗುತ್ತಿದೆ.

ಹಳೆಯ ಪ್ರವೃತ್ತಿಗಳನ್ನು ದಾಟುವ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯಾದ ಆಧುನಿಕತೆಯ ಮೇಲೆ ಜಾಗತೀಕರಣದ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ.ಜಾಗತೀಕರಣವನ್ನು ವಿಶ್ವಾತ್ಮಕ ಸಾಂಸ್ಕ್ರತಿಕತೆ ಎಂದು ಗುರುತಿಸುವ ಪ್ರಬಲ ವಾದವೀಗ ಕೇಳಿಬರುತ್ತಿದೆ. ಆದರೆ ಇದು ನಿಜವಲ್ಲ. ನಿಜವಾಗಿ ಈಗ ನಡೆದಿರುವುದು ಹೈಬ್ರಿಡೀಕರಣ, ಗ್ಲೋಕಲೀಕರಣ ಜಾಗತೀಕರಣ+ಸ್ಥಳೀಕರಣ). ಅಂದರೆ ಜಾಗತೀಕರಣವು ಸ್ಥಳೀಯ ಪ್ರತಿಷ್ಠಿತವರ್ಗವು ಮಾನ್ಯಮಾಡುವ ಸಂಗತಿಗಳನ್ನು ಪ್ರಮುಖ ಜಾಗತಿಕ ಸಾಂಸ್ಕೃತಿಕ ಸಂಪನ್ಮೂಲಗಳ ಜೊತೆ ಅನುಸಂಧಾನ ಮಾಡಿಬಿಡುವುದೇ ಆಗಿದೆ. ಹಾಗಾಗಿ ಜಾತಿಗಳನ್ನೂ ಒಳಗೊಂಡಂತೆ ಎಲ್ಲ ಹಿಂದೂ ಸಂಪ್ರದಾಯ ಆಚರಣೆಗಳು– ೧೯೮೦ರವರೆಗೂ ಯಾವ ಆಚರಣೆಗಳ ಬಗ್ಗೆ ಅಳುಕಿನಿಂದ ಮಾತನಾಡಲಾಗುತ್ತಿತ್ತೊ ಅವೆಲ್ಲವೂ– ಈಗ ಪ್ರತೀಕಾರದೊಂದಿಗೆ ಮತ್ತೆ ತಲೆಎತ್ತಿವೆ. ಆಧುನಿಕ ನವಉದಾರವಾದೀ ತಲೆಮಾರುಗಳು ಅವುಗಳ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತವೆ. ಜಾತಿ ದೌರ್ಜನ್ಯಗಳನ್ನು ಜಾತೀಯತೆಯ ಸೂಚನೆಯೆಂದು ಪರಿಗಣಿಸುವುದಾದರೆ ಜಾಗತೀಕರಣದೊಂದಿಗೆ ಜಾತೀಯತೆಯೂ ಖಂಡಿತ ಹೆಚ್ಚುತ್ತಿದೆ.

ಜಾಗತೀಕರಣವು ರಾಚನಿಕವಾಗಿ ಅಲ್ಲಿ ಇಲ್ಲಿ ಒಬ್ಬಿಬ್ಬರಿಗೆ ಅನುಕೂಲ ಮಾಡಿ ಸ್ಪರ್ಧಾತ್ಮಕ ಶಕ್ತಿ, ಯೋಗ್ಯತೆಯಿದ್ದವರೆಲ್ಲರೂ ಮುಂದೆ ಬರಬಹುದೆಂಬ ಭ್ರಮೆಯನ್ನು ಸೃಷ್ಟಿ ಮಾಡುವ ರೀತಿಯಲ್ಲಿ ರೂಪುಗೊಂಡಿರುತ್ತದೆ. ದಲಿತ ಬಂಡವಾಳಶಾಹಿಯ ಪ್ರತಿಪಾದಕರಿಗೆ ಇದರ ಅರಿವಿಲ್ಲ.

### ಉಪಸಂಹಾರ

ದಲಿತಮಾನಸದಲ್ಲಿ ಅಂಬೇಡ್ಕರ್ ಅವರಿಗೆ ವಿಶಿಷ್ಟ ಸ್ಥಾನವಿದೆ. ದಲಿತರ ಆದರ್ಶ, ತಾತ್ವಿಕತೆ, ಆಶಯಗಳೆಲ್ಲದರ ಪ್ರತಿನಿಧಿ ಅವರು. ಅಂಬೇಡ್ಕರ್ ಅವರಿಗೆ ಹೊಂದಿಕೆಯಾಗದ ಯಾವುದೂ ದಲಿತರಿಗೆ ಸಹ್ಯವಾಗದು. ಅದರೆ ಈ ಭಾವನೆಯನ್ನು ಸ್ಥಾಪಿತ ಹಿತಾಸಕ್ತಿಗಳು ವಿಕೃತಗೊಳಿಸಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ. ಜಾಗತೀಕರಣವು ಸುಮಾರು ಮೂರು ದಶಕಗಳಿಂದ ಭಾರತದಲ್ಲಿ ಅನುಷ್ಠಾನಗೊಳ್ಳುತ್ತಿದೆ, ದಲಿತರು ಅದರ ಪರಿಣಾಮಗಳಿಂದ ನೊಂದಿದ್ದಾರೆ. ಆದರೂ ಅದರ ಬಗ್ಗೆ ದಲಿತರಲ್ಲಿ ಇರಬೇಕಾದ ಅಸಹ್ಯವಿಲ್ಲ. ಏಕೆಂದರೆ ಅವರ ದೃಷ್ಟಿಯಲ್ಲಿ ಅಂಬೇಡ್ಕರ್ ಅವರು ಇದ್ದಿದ್ದರೆ ಜಾಗತೀಕರಣವನ್ನು ಅವರು ಬೆಂಬಲಿಸುತ್ತಿದ್ದರು ಎಂಬ ಕಲ್ಪನೆಯನ್ನು ಬಿತ್ತಲಾಗಿದೆ. ಆದರೆ ಒಬ್ಬ ತೀವ್ರವಾದಿಯಾಗಿದ್ದ ಅಂಬೇಡ್ಕರ್ ಸದಾಕಾಲ ಸತ್ಯವನ್ನು, ಸುಸ್ಥಿರತೆಯನ್ನು ಹುಡುಕುತ್ತಿದ್ದರು ಅವರೊಬ್ಬ ಸಮಾಜವಾದಿಯಾಗಿದ್ದರು. ದಲಿತರಿಗೆ ಇದು ಅರ್ಥವಾದರೆ ಅವರು ಸ್ಥಾಪಿತ ಹಿತಾಸಕ್ತಿಗಳು ಉಂಟುಮಾಡಿರುವ ಪ್ರತಿಗಾಮೀ ಹುದುಲಿನಿಂದ ಅವರನ್ನು ಹೊರತರುತ್ತಿದ್ದರು

ಜಾಗತೀಕರಣವೆಂಬುದು ಜಾಗತಿಕ ಬಂಡವಾಳಕ್ಕೆ ಸಾಮ್ರಾಜ್ಯಶಾಹಿಗಳಿಂದ ಪ್ರದಾನವಾಗಿರುವ ಸೌಮ್ಯೋಕ್ತಿ ಮಾತ್ರ. ಸಾರದಲ್ಲಿ ಅದು ಬಂಡವಾಳವಾದ ಮಾತ್ರ. ಅದರೆ ಅದು ಅತಿರೇಕದ ಬಂಡವಾಳವಾದ, ಮಿತಿಯಿಲ್ಲದ ಲಾಭದ ಹಿಂದೆ ಬಿದ್ದು ತನ್ನ ಸುಸ್ಥಿರತೆಯನ್ನೇ ಕಡೆಗಣಿಸುವ ಅತಿರೇಕ. ಬಂಡವಾಳಶಾಹಿಗಾದರೂ ದುಡಿಮೆಗಾರನಿಂದ 'ಹೆಚ್ಚುವರಿ ಮೌಲ್ಯ'ವನ್ನು ಸುಲಿಯುವ ವಿಷಯದಲ್ಲಿ ಒಂದು ಮಿತಿಯಿತ್ತು. ಏಕೆಂದರೆ ಅವನ ಸಂತತಿ ಹೆಚ್ಚು ಬೆಳೆದು ತನ್ನ ಉತ್ಪನ್ನಗಳನ್ನು ಕೊಳ್ಳುವ ಶಕ್ತಿಯನ್ನು ಅವನಲ್ಲಿ ಉಳಿಸಬೇಕಿತ್ತು. ಆದರೆ ಈ ಜಾಗತೀಕರಣವು ತಂತ್ರಜ್ಞಾನದ ಮತ್ತಿನಲ್ಲಿ, ಮಾನವ ಶ್ರಮವನ್ನು ಬೇಡದ ವಸ್ತುವಸ್ತುವನ್ನಾಗಿಸ ಹೊರಟಿದ್ದು ಶ್ರಮಿಕ ವರ್ಗದ ಅಳಿದುಳಿದಿದ್ದ ಎಲ್ಲವನ್ನೂ ಕಿತ್ತುಕೊಳ್ಳಲಾರಂಭಿಸಿದೆ. ಏಕೆಂದರೆ ಶ್ರಮಿಕರು ಮಾರುಕಟ್ಟೆಯಿಂದ ಬಹಿಷ್ಕೃತರಾಗಿದ್ದಾರೆ. ಅವರು ಭೂಮಿಯ ಮೇಲಿರುವ ಪ್ರಾಕೃತಿಕ ಸಂಪತ್ತನ್ನು ಕಬಳಿಸುತ್ತಿರುವ ಪರೋಪಜೀವಿ ಸಮುದಾಯವಾಗಿದ್ದು ಅದನ್ನು ಬಹುಬೇಗ ನಿವಾರಿಸಿಕೊಳ್ಳಬೇಕಿದೆ

# ಗಾಂಧಿ–ಅಂಬೇಡ್ಕರ್ ಸಂವಾದದಲ್ಲಿನ ತೊಡಕು : ಒಂದು ಒಳನೋಟ

–ತ್ರಿದಿಪ್ ಸುಹೃದ್



**ಆಧುನಿಕ ಭಾರತದ ಅತ್ಯಂತ ಮಹತ್ವದ ಮತ್ತು ಸಂಕೀರ್ಣ ಸಂವಾದಗಳಲ್ಲೊಂದಾದ ಅಂಬೇಡ್ಕರ್–ಗಾಂಧಿ ಸಂವಾದವನ್ನು ಇವೊತ್ತಿನ ಸಂದರ್ಭಕ್ಕನುಗುಣವಾಗಿ ಒಂದು ಇತ್ಯರ್ಥಕ್ಕೆ ತಂದು ಮುಂದೆ ಸಾಗಲು ಮಾಡಲಾಗುತ್ತಿರುವ ಎಲ್ಲ ಪ್ರಯತ್ನಗಳೂ ರಾಜಿ ಕಬೂಲಿಯಂತೆ ಕಂಡು ಸಾರ್ವಜನಿಕ ಜೀವನದಲ್ಲಿ ಕಹಿಯನ್ನು ಹೆಚ್ಚಿಸುತ್ತಿದೆಯೇ ಹೊರತು ಅದರ ಸಮಸ್ಯೆಯ ಮೂಲವನ್ನು ಯಾರೂ ಮುಟ್ಟಲು ತಯಾರಾದಂತಿಲ್ಲ. ಈ ಹಿನ್ನೆಲೆಯಲ್ಲಿ ಗಾಂಧಿ ಸಾಹಿತ್ಯದ ಬಗ್ಗೆ ಆಳವಾದ ಮತ್ತು ಗಂಭೀರ ಅಧ್ಯಯನ ಮಾಡಿದವರೆಂದು ಇತ್ತೀಚೆಗೆ ಹೆಸರಾಗಿರುವ ತ್ರಿದಿಪ್, ಸುಹೃದ್ ಅವರನ್ನು 'ಹೊಸ ಮನುಷ್ಯ' ಈ ಬಗ್ಗೆ ಬೆಳಕು ಚೆಲ್ಲಲು ಕೇಳಿತು. ಈ ಸಂಬಂಧಧ ಅವರ ಒಂದು ಟಿಪ್ಪಣಿಯ ಕನ್ನಡಾನುವಾದ ಇಲ್ಲಿದೆ. ಓದುಗರ ಪ್ರತಿಕ್ರಿಯೆಯನ್ನು ಸ್ವಾಗತಿಸುತ್ತೇವೆ..–ಸಂ.**

**ಗಾಂ**ಧೀಜಿಯ ಪರ ಅಥವಾ ವಿರೋಧವಾಗಿ ಆಲೋಚಿಸುವ ಮೊದಲು ನಾವು ಅಗತ್ಯವಾಗಿ ಬೆಳೆಸಿಕೊಂಡಿರಬೇಕಾದ್ದು ನೈತಿಕತೆಯನ್ನು ಆಧರಿಸಿದ ಲೋಕದ ಬಗೆಗಿನ ಆಸೆಯನ್ನು. ಈ ನೈತಿಕತೆಯ ಅಗತ್ಯವನ್ನು ಬೇರೆಲ್ಲರಿಗಿಂತಲೂ ಹೆಚ್ಚು ಸಮರ್ಥವಾಗಿ ಪ್ರತಿಪಾದಿಸಿದ ಮತ್ತು ಸಾಕಾರಗೊಳಿಸಿ ಬಾಳಿದ ವ್ಯಕ್ತಿಯೆಂದರೆ ಬಾಳಾಸಾಹೇಬ್ ಅಂಬೇಡ್ಕರ್. ಗಾಂಧಿ ಅಥವಾ ಅಂಬೇಡ್ಕರ್‌ಗೆ ಕಟ್ಟಕಡೆಯ ಮನುಷ್ಯನಿಗೆ ಮಾನವೀಯತೆಯನ್ನು ನಿರಾಕರಿಸಿದ ವ್ಯವಸ್ಥೆಯ ಚೌಕಟ್ಟಿನೊಳಗಡೆಯ ಗತವಾಗಲೀ ಅಥವಾ' ಭವಿಷ್ಯದ ಬದುಕಾಗಲಿ ಬೇಕಾಗಿರಲಿಲ್ಲ.ಸಮಾನತೆ ಎನ್ನುವುದು ಮೂಲಭೂತವಾಗಿ ಒಂದು ನೈತಿಕ ಪರಿಕಲ್ಪನೆ. ಗಾಂಧೀ ಪ್ರತಿಪಾದಿಸಿದ ನೈತಿಕತೆಯ ಪರಿಕಲ್ಪನೆ ಅಂಬೇಡ್ಕರ್‌ಗೆ ಒಪ್ಪಿತವಾಗಿರಲಿಲ್ಲ. ಹಾಗೆಯೇ ಅಂಬೇಡ್ಕರ್ ಪ್ರತಿಪಾದಿಸಿದ ನೈತಿಕತೆಯ ಮಾದರಿ ಗಾಂಧಿಯವರಿಗೆ ಗ್ರಹಿಸಲಾಗಿರಲಿಲ್ಲ. .ಆದರೂ ಅವರಿಬ್ಬರೂ ಒಂದು ನೈತಿಕತೆಯ ನೆಲೆಗಟ್ಟಿನ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ಯಾವ ನೈತಿಕತೆಯ ನೆಲೆಗಟ್ಟಿನ ಮೇಲೆ "ಜಾತಿ ವಿನಾಶ" ವಿಚಾರವು ನಿಂತಿರುವ ನೈತಿಕ ನೆಲಗಟ್ಟು ಮೊದಲಿಗೆ ಯಾರನ್ನು ಉದ್ದೇಶಿಸಿ ಅದು ರಚಿಸಲ್ಪಟ್ಟಿತ್ತೋ ಆ 'ಹಿಂದೂ ಸವರ್ಣೀಯ ಸಮಾಜ'ದ ಗಮನದ ಅಂಗಳದ ಆಚೆಯೆ ಉಳಿದಿದೆ. ಹಾಗೆ ಅದು ಉಳಿದಿರುವುದಕ್ಕೆ ಕಾರಣ ಅದು ಜಾತಿ ವ್ಯವಸ್ಥೆಯನ್ನು ಖಂಡಿಸುತ್ತದೆ ಮತ್ತು ಅಲ್ಲಗಳೆಯುತ್ತದೆ ಎಂಬುದಲ್ಲ. ಬದಲಾಗಿ ಅದು ಹಿಂದೆಂದೂ ಕಾಣದಂತಹ ಮತ್ತು ಒಂದು ಹೊಸದೇ ಆದ ಸಮಾನತೆಯ ಪರಿಕಲ್ಪನೆಯನ್ನು ಮಂಡಿಸುತ್ತಿದೆ ಎಂಬ ಕಾರಣಕ್ಕೆ.

ಅಂಬೇಡ್ಕರ್ ಮಂಡಿಸುತ್ತಿರುವುದು ಒಂದು ಹೊಸ ರೀತಿಯ ನೈತಿಕತೆಯನ್ನು. ಅದು "ಅಪಮಾನದ ಸಮಾನತೆ"ಯ (equality of humilition) ಕಲ್ಪನೆಯನ್ನು ಆಧರಿಸಿದ್ದು. ಇದನ್ನು ಒಮ್ಮೆಲೇ ತಿರಸ್ಕರಿಸುವುದಕ್ಕಿಂತ ಇದೊಂದು ಸಾಧ್ಯತೆಯನ್ನು ಪರಿಗಣಿಸಿ ನೋಡಿ. ಅಂಬೇಡ್ಕರ ಅವರಿಗೆ ಸಾಧ್ಯವಾಗುತ್ತಿದ್ದ ಸಮಾನತೆ ಎಂದರೆ ಅದು ನಾವೆಲ್ಲರೂ –ಪುರುಷರು, ಮಹಿಳೆಯರು, ಸವರ್ಣೀಯರು, ದಲಿತರು– ಸಮಾನವಾಗಿ 'ಅಪಮಾನ'ವನ್ನು ಅನುಭವಿಸುವುದು. 'ಅಪಮಾನ'ವು ಕಾಲ ಮತ್ತು ದೇಶದ ಪರಿಮಿತಿಯಲ್ಲಿ ಸಂಭವಿಸುವ ಅನುಭವವಾಗಿದೆ ಮತ್ತು ಅದು ಅತ್ಯಂತ ವ್ಯಕ್ತಿನಿಷ್ಠ ಮಾನವ ಅನುಭವವಾಗಿದೆ. 'ಅಪಮಾನ'ವನ್ನು ಒಂದು ಶ್ರೇಣೀಕೃತ ಸಂಬಂಧದಲ್ಲಿ ಮಾತ್ರ ಎಸಗಲು ಸಾಧ್ಯ. ಅಂಬೇಡ್ಕರ್ ಅವರ ಪ್ರಯತ್ನ ಅಪಮಾನದ ಸಮಾನತೆಯನ್ನು ಸಾಧಿಸುವ ಒಂದು ನೈತಿಕ ವ್ಯವಸ್ಥೆ ನಿರ್ಮಾಣ ಮಾಡುವುದಾಗಿತ್ತು.

ಆದರೆ ಅಂಬೇಡ್ಕರ್ ಅವರ ವಾದದಲ್ಲಿನ ಮತ್ತು ಜಾತಿ ವ್ಯವಸ್ಥೆಯ ಅಮಾನುಷತ್ವ'ದಲ್ಲಿನ ಅಪಮಾನವನ್ನು ಅನುಭವಿಸುವುದಕ್ಕೂ ಮತ್ತು ಅದನ್ನು ಗೈಯ್ಯಲಾಗುತ್ತಿರುವ ಬಗ್ಗೆ 'ನಾಚಿಕೆ' ಪಟ್ಟುಕೊಳ್ಳುವುದಕ್ಕೂ(sense of shame) ಮೂಲಭೂತ ನೈತಿಕ ಅಂತರ ಇದೆ ಎಂದು ಅರ್ಥ ಮಾಡಿಕೊಳ್ಳಲು ಗಾಂಧೀಜಿ ವಿಫಲರಾಗಿದ್ದರು. ಒಬ್ಬರಿಗೆ ಅಪಮಾನವಾಗುತ್ತಿರುವುದರ ಬಗ್ಗೆ ಮತ್ತೊಬ್ಬ ವ್ಯಕ್ತಿ ತೀವ್ರ ಮತ್ತು ಆಳದ ನಾಚಿಕೆಯನ್ನು ಅನುಭವಿಸಿದರೂ ಅದು ಎಷ್ಟೇ ಗಾಢವಾಗಿದ್ದರೂ ನೇರ 'ಅಪಮಾನ'ಕ್ಕೆ ಒಳಗಾದವನ ಅನುಭವಕ್ಕೆ ನೈತಿಕವಾಗಿ ಸಮಾನವಾಗಲಾರದು.

ಅಂತೆಯೇ ಅಪಮಾನಿತರ ದುಃಖದಲ್ಲಿ ಭಾಗಿಯಾಗಿ ಅವರಿಗಾದ ವೇದನೆಯ ಬಗ್ಗೆ ತೀವ್ರ 'ನಾಚಿಕೆ'ಯನ್ನು ಅನುಭವಿಸಿದ 'ಭಾವಕ್ಕೆ ಅಷ್ಟೇ ತೀವ್ರ 'ಅಪಮಾನ'ವನ್ನು ಅನುಭವಿಸಿದ ಭಾವವು ನೈತಿಕವಾಗಿ ಸಮಾನವಾಗಲಾರದು. ಗಾಂಧೀ 'ಆತ್ಮ–ಸಂಕಲ್ಪ'ವನ್ನು ಬೇರೆಲ್ಲರಿಗಿಂತಲೂ ಹೆಚ್ಚು ಅರ್ಥಮಾಡಿಕೊಂಡಿದ್ದರಾದರೂ ಅವರಿಗೆ 'ಅಪಮಾನವೆಂಬುದು ಸ್ವಯಂ ಸಂ–ಕಲ್ಪಿಸಿಕೊಳ್ಳುವ ವಿಷಯವಲ್ಲ; ಹಾಗಾಗಿ ತಾನು ಅದನ್ನು ಸ್ವಯಂ ಅನುಭವಿಸುವುದಕ್ಕೆ ಆಗದ ಮತ್ತು ಇನ್ನೊಬ್ಬರ ಮೇಲೆ ಎಸಗಬಹುದಾದದ್ದು ಮಾತ್ರ ಎಂಬುದು ತಿಳಿಯದೇ ಹೋಯಿತು. ಅಪಮಾನದ ಐತಿಹಾಸಿಕ ಮತ್ತು ನಿರ್ದಿಷ್ಟ ಅನುಭವವನ್ನು ಜೊತೆಯಾಗಿ ಅನುಭವಿಸಿದ ಒಂದು ನೈತಿಕ ಸಮುದಾಯ ಗಾಂಧೀಜಿಯ ಗ್ರಹಿಕೆಯಿಂದ ಹೊರಗೇ ಉಳಿಯಿತು.

ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಇಂತಹ ನೈತಿಕ ಸಂವಾದ ನಡೆಸಲು ವಿಫಲವಾದರೂ ನೈತಿಕತೆಯ ನಮೂನೆಗಳ ರಚನೆಗಳ ಒತ್ತಾಯಗಳಿಗಂತೂ ಒಳಗಾಗಿದ್ದರು. ಅಗತ್ಯತೆಯನ್ನು ಮನಗಂಡಿದ್ದರು .ಇಬ್ಬರಲ್ಲಿ ಯಾರದೇ ಪರವಾಗಿ ಆಲೋಚಿಸಲು ಬೇಕಿರುವುದು ಚಾರಿತ್ರ್ಯಕ್ಕೆ, ಪ್ರೀತಿಪೂರ್ವಕತೆಗೆ–ಕೇವಲ ನ್ಯಾಯ ಅಥವಾ ಸ್ವಾಯತ್ತತೆ ಅಥವಾ ಸಮಾನತೆಗೆ ಅಲ್ಲ. ಹೀಗೆ ಪ್ರೀತಿ ಮತ್ತು ಪಾಲನೆಯ ಭಾವದಿಂದ ಆಲೋಚಿಸುವುದೇ ಅಂಬೇಡ್ಕರ್‌ರೊಂದಿಗೆ ಹೆಜ್ಜೆ ಹಾಕಿದಂತೆ, ಗಾಂಧಿಯೊಂದಿಗೆ ಕೂಡ.



**(ಇತ್ತೀಚಿನವರೆಗೂ ಅಹಮದಾಬಾದ್‌ನ ಸಬರ್ಮತಿ ಆಶ್ರಮದ ನಿರ್ದೇಶಕರಾಗಿದ್ದ ತ್ರಿದಿಪ್ ಸುಹೃದ್ ಈಗ ಅದೇ ಊರಿನ ಪರಿಸರ ಆಯೋಜನೆ ಮತ್ತು ತಂತ್ರಜ್ಞಾನ ಕೇಂದ್ರದ ಪ್ರಾಕ್ತನ ವಿಭಾಗದ ನಿರ್ದೇಶಕ ಮತ್ತು ಪ್ರಾಧ್ಯಾಪಕ ಆಗಿದ್ದಾರೆ)**

**(ಕನ್ನಡಕ್ಕೆ : ಬಿ.ವಿ. ಸುರೇಂದ್ರ)**

---

.ಇಂತಹ ಒಂದು ಪಂಥ ಅಥವಾ ವ್ಯವಸ್ಥೆ ಖಂಡಿತಾ ಬಾಬಾಸಾಹೇಬ್ ಅಂಬೇಡ್ಕರ್ ಅವರಲ್ಲಿ ಅಸಹ್ಯವನ್ನುಂಟು ಮಾಡುತ್ತಿತ್ತು ಎಂಬುದನ್ನು ಅರಿಯಲು ಬಹಳ ದೊಡ್ಡ ಬೌದ್ಧಿಕತೆಯ ಅಗತ್ಯವೇನೂ ಇಲ್ಲ.



**(ಈಗ ಗೋವಾದಲ್ಲಿ ನೆಲೆಸಿರುವ ಲೇಖಕ ಆನಂದ ತೇಲ್ತುಂಬ್ಡೆ ಮ್ಯಾನೇಜ್‌ಮೆಂಟ್ ಕ್ಷೇತ್ರದ ಪರಿಣತರಾಗಿದ್ದು ಓರ್ವ ಸಾರ್ವಜನಿಕ ಬುದ್ಧಿಜೀವಿಯಾಗಿ ರಾಜಕೀಯ ವಿಶ್ಲೇಷಣೆಗಳನ್ನೂ ಬರೆಯುತ್ತಾರೆ. ಅವರು ಅಂಬೇಡ್ಕರ್ ಮೊಮ್ಮಗ ಪ್ರಕಾಶ್ ಅಂಬೇಡ್ಕರ್‌ರ ಅಳಿಯನೂ ಹೌದು.).**

(ಕನ್ನಡಕ್ಕೆ : ಎಂ. ರಾಜು

ಕೃಪೆ: **ಜನತಾ**, ಸೆಪ್ಟಂ.೩೦–ಅಕ್ಟೋ. ೭, ೨೦೧೮)

೨ನೇ ಪುಟದಿಂದ)

ಬರುವಂತಾದಾಗ ಬರುವ ಹೊಳಪು ಆ ತಾತ್ವಿಕತೆಯನ್ನು ಮತ್ತಷ್ಟು ಎತ್ತರಕ್ಕೆ ಏರುವಂತೆ ಮಾಡುತ್ತದೆ.

. ಇವೊತ್ತಿಗೆ ಗಾಂಧಿ ಏಕೆ, ಎಷ್ಟು ಬೇಕು? ಎನ್ನುವ ಶೀರ್ಷಿಕೆಯಡಿ ಒಂದಾದರೂ ಲೇಖನ ಗಾಂಧಿ 'ನಮಗಿಷ್ಟಕ್ಕೇ ಪ್ರಸ್ತುತ' ಎಂದು ಹೇಳುವ ಲೇಖನ ಇದ್ದೀತು ಎಂಬ ಆಸೆ ಇತ್ತು. ಒಂದು ಲೇಖನದಲ್ಲಂತೂ ಇಂತಹ ಪ್ರಶ್ನೆ ಕೇಳುವುದೇ ಇಬ್ಬಂದಿತನ ಎಂದು ಹೇಳಲಾಗಿದೆ. ಗಾಂಧಿಯವರೂ ಸಹ ಅವರನ್ನು ಪ್ರಶ್ನಿಸದೆ ಇಡಿಯಾಗಿ ಒಪ್ಪಿಕೊಳ್ಳಲು ಬಯಸುತ್ತಿರಲಿಲ್ಲವೇನೋ.

ಇಡೀ ಸಂಚಿಕೆಯಲ್ಲಿ ನನ್ನ ಗಮನ ಸೆಳೆದ ಲೇಖನವೆಂದರೆ, ಸಮತಾ ಯುವರಾಜ್ ಅವರ ಸರ್ಕಾರಿ ಶಾಲೆಯಲ್ಲಿ 'ಲ್ಯಾಬ್' ನ್ನು ಸ್ಥಾಪಿಸಿ ಅದರ ಮೂಲಕ ವಿಜ್ಞಾನವನ್ನು ಹೇಳಿಕೊಡುವುದರ ಸ್ವಾನುಭವದ ಲೇಖನ. ಕೊನೆಗೂ ಇಂಥ ಸಣ್ಣ ಸಣ್ಣ ಪ್ರಯತ್ನಗಳೇ ಹೆಚ್ಚು ಕಡೆಯಲ್ಲಿ ನಡೆದಾಗ ಅರ್ಥಪೂರ್ಣವಾಗುತ್ತದೆ.

**–ಶಶಿಧರ ಡೋಂಗ್ರೆ,** ಮೈಸೂರು



# ಮಲೆಗಳಲ್ಲಿ ಮದುಮಗಳುವಿಗೆ ಐವತ್ತರ ಹರಯದ ಸಂಭ್ರಮ :

## ಒಂದು ಆಶಯನುಡಿ ತೋರಣ

–ಡಿ.ಎಸ್. ನಾಗಭೂಷಣ

ಎಲ್ಲರಿಗೂ ನಮಸ್ಕಾರ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿ ಭಾಗಿಯಾಗಲು ನಾವೆಲ್ಲ ಇಲ್ಲಿ ಸೇರಿದ್ದೇವೆ. ಒಂದು ಕಾದಂಬರಿಗೆ ಅಥವಾ ಯಾವುದೇ ಕೃತಿಗೆ ಹತ್ತು, ಇಪ್ಪತ್ತೈದು, ಐವತ್ತು, ಅರವತ್ತು ಅಥವಾ ನೂರು ವರ್ಷಗಳಾಗುವುದು ವಿಶೇಷ ಸಂಗತಿ ಏನಲ್ಲ. ಏಕೆಂದರೆ ಕಾಲ ನಿರಂತರವಾಗಿ ಹರಿಯುತ್ತಿರುತ್ತದೆ. ಕನ್ನಡದಲ್ಲೇ ಈಗಾಗಲೆ ನಾಲ್ಕಾರು ಕಾದಂಬರಿಗಳ ಐವತ್ತು–ಅರವತ್ತು ವರ್ಷಗಳ ಹುಟ್ಟುಹಬ್ಬಗಳನ್ನು ಅವುಗಳಿಗೇ ವಿಶಿಷ್ಟವಾದ ಕಾರಣಗಳಿಗಾಗಿ ಆಚರಿಸಲಾಗಿದೆ. ಆದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಈ ಹುಟ್ಟುಹಬ್ಬದ ಸಂಭ್ರಮಕ್ಕೆ ಒಂದು ವಿಶೇಷ ಕಾರಣವಿದೆ. ಈ ವಿಷಯಕ್ಕೆ ಆಮೇಲೆ ಬರೋಣ.

ಈ ಕಾದಂಬರಿಯನ್ನು ವರ್ಷಕ್ಕೆರಡು ಬಾರಿಯಾದರೂ ಇಡಿಯಾಗಿ ಓದುವ ನನಗೆ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ಈ ಕಾದಂಬರಿಯ ಐವತ್ತನೇ ಹುಟ್ಟುಹಬ್ಬವನ್ನು ಆಚರಿಸುವುದು ಉಚಿತವೆನ್ನಿಸಿತು. ಏಕೆಂದರೆ ನಿಮಗೆ ಗೊತ್ತಿರಬಹುದಾದಂತೆ ಲೋಹಿಯಾ ವಿಚಾರಗಳಿಗೂ ಕುವೆಂಪು ವಿಚಾರಗಳಿಗೂ ಹಲವು ಸಂಗತಿಗಳ ವಿಷಯದಲ್ಲಿ ಬಹು ಸಾಮ್ಯತೆ ಇದೆ. ಗಾಂಧಿವಾದಿಗಳಾದ ಇಬ್ಬರೂ ಸಮಾನತೆ ಎಂಬ ಮೌಲ್ಯದ ಆರಾಧಕರು ಮತ್ತು ಈ ಮೌಲ್ಯವನ್ನು ಸಾಧಿಸಲು ಅಗತ್ಯವಾದ ಸಾಧನಗಳ ವಿಷಯದಲ್ಲೂ ಸಮಾನ ಮನಸ್ಕರು ಎಂದು ಹೇಳಬಹುದು. ಅದು ಅಹಿಂಸೆ ಇರಬಹುದು, ಸರಳ ಸಭ್ಯ ಜೀವನ ಮಟ್ಟ ಇರಬಹುದು, ಜಾತಿ ವಿನಾಶ ಇರಬಹುದು, ಸಾಮಾಜಿಕ ನ್ಯಾಯ ಇರಬಹುದು, ಧರ್ಮ ಕುರಿತ ವಿವೇಚನಾಶೀಲ ನಿಲುವೇ ಇರಬಹುದು ಮತ್ತು ಬಹುಮುಖ್ಯವಾಗಿ ಪರಂಪರೆ ಮತ್ತು ಆಧುನಿಕತೆಗಳ ಸಮನ್ವಯ ದೃಷ್ಟಿಯೇ ಇರಬಹುದು. ಹಾಗಾಗಿಯೇ ಈ ಇಬ್ಬರೂ ಒಮ್ಮೆ ಮೈಸೂರಿನಲ್ಲಿ ಭೇಟಿಯಾಗಿದ್ದು ಸಹಜವೇ. ಈ ಭೇಟಿಯಲ್ಲಿ ಲೋಹಿಯಾ ಕುವೆಂಪು ಅವರನ್ನು ರಾಜಕಾರಣಕ್ಕೆ ಆಹ್ವಾನಿಸುತ್ತಾರೆ. ಆದರೆ ಕುವೆಂಪು ತಮ್ಮ ಸ್ವಭಾವ ಸಹಜ ಹಿಂಜರಿಕೆಯಿಂದ ನೀಡಿದ ಉತ್ತರ ಗಮನಾರ್ಹವಾಗಿದೆ. ಅವರು ಹೇಳಿದ್ದು, 'ನೀವು ಯಾವುದನ್ನು ರಾಜಕಾರಣದ ಮೂಲಕ ಮಾಡಬಯಸಿದ್ದೀರೋ ಅದನ್ನು ನಾನು ಸಾಹಿತ್ಯದ ಮೂಲಕ ಮಾಡುತ್ತಿರುವೆ. ಲೋಹಿಯಾ ಅದನ್ನು ಒಪ್ಪಿಕೊಂಡರು. ಏಕೆಂದರೆ ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಜಾಗತಿಕ ಸಮಾಜವಾದದ ಮೂಲಗುಣವಾದ ಭೌತವಾದಿ ಲೋಕದೃಷ್ಟಿಯನ್ನು ನಿರಾಕರಿಸಿತ್ತು. ಸಂಸ್ಕೃತಿಯೂ ರಾಜಕಾರಣದ ಮೂಲಸ್ಫೂರ್ತಿಗಳಲ್ಲಿ ಒಂದು ಎಂದು ನಂಬಿತ್ತು.

ಅದೇನೇ ಇರಲಿ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಐವತ್ತನೇ ಹುಟ್ಟು ಹಬ್ಬದ ವಿಚಾರವನ್ನು ನಮ್ಮ ಮನೆಗೊಮ್ಮೆ ಬಂದಿದ್ದ ಕುವೆಂಪು ವಿಚಾರವೇದಿಕೆಯ ಎಂ.ಸಿ. ನರೇಂದ್ರ ಅವರೊಂದಿಗೆ ಹಂಚಿಕೊಂಡಾಗ ಅವರು ಅದನ್ನು ದೊಡ್ಡ ಪ್ರಮಾಣದಲ್ಲೇ, ಭವ್ಯವಾಗಿಯೇ ಮಾಡುವ ಆಸೆ ವ್ಯಕ್ತಪಡಿಸಿದರು. ನಾನು ಇದನ್ನು ಶಿವಮೊಗ್ಗದಲ್ಲಿ ಮಾಡಬೇಕೆಂದಿದ್ದಾಗ ಅವರು ಮೊದಲು ಬೆಂಗಳೂರು, ನಂತರ ಮೈಸೂರಿಗೆ ಅದನ್ನು ಒಯ್ದರು. ನಂತರ ಮೈಸೂರು ವಿಶ್ವವಿದ್ಯಾನಿಲಯವನ್ನೂ ತಮ್ಮೊಂದಿಗೆ ಸೇರಿಸಿಕೊಂಡರು. ಈ ಹಬ್ಬ ಮೈಸೂರಿನಲ್ಲಿ ಅದೂ ನಿರ್ದಿಷ್ಟವಾಗಿ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಯುತ್ತಿರುವುದು ಸಮಂಜಸವೇ ಆಗಿದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ಕುವೆಂಪು ಹುಟ್ಟಿದ್ದು ಮಲೆನಾಡಿನ ಕುಪ್ಪಳ್ಳಿಯಲ್ಲಾದರೂ ತಮ್ಮ ವ್ಯಕ್ತಿತ್ವವನ್ನು ಪ್ರಬುದ್ಧಗೊಳಿಸಿಕೊಂಡದ್ದು ಮೈಸೂರಿನ ಅಂದಿನ ವಾತಾವರಣದಲ್ಲೇ. ಮತ್ತೆ ಅವರು ಸಾವಿನವರೆಗೂ ಬದುಕಿದ್ದು ಇಲ್ಲಿಯೇ. ಈ ಅರ್ಥದಲ್ಲಿ ಮೈಸೂರು ಅವರ ಕರ್ಮಭೂಮಿ. ಕನ್ನಡ ಸಾಹಿತ್ಯಲೋಕದ ದೃಷ್ಟಿಯಲ್ಲಿ ಕುವೆಂಪು ಅಂದರೆ ಮೈಸೂರು, ಮೈಸೂರು ಅಂದರೆ ಕುವೆಂಪು ಎಂದೇ ಆಗಿಬಿಟ್ಟಿದೆ. ಇನ್ನು ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಮೊದಲು ಅಧ್ಯಾಪಕರಾಗಿ, ನಂತರ ಅದರ ಕುಲಪತಿಯಾಗಿ ಅದನ್ನು ಅನನ್ಯವಾಗಿ ಬೆಳೆಸಿದ ಕಥೆ ಎಲ್ಲರಿಗೂ ಗೊತ್ತು. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಅವರು ಈ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಸಂಸ್ಕೃತಿಯ ಕಿರೀಟವನ್ನು ತೊಡಿಸಿದರು ಎಂದು ಹೇಳಬೇಕು.



ಚಿತ್ರ: ಗುಜ್ಜಾರಪ್ಪ

ಈಗ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ವಿಷಯಕ್ಕೇ ಬರುವುದಾದರೆ, ನಾನು ನನ್ನ ಮಾತುಗಳ ಮೊದಲಲ್ಲಿ ಈ ಕಾದಂಬರಿಯ ವಿಶಿಷ್ಟ–ವಿಶೇಷತೆಯ ಪ್ರಸ್ತಾಪ ಮಾಡಿದೆ. ಹೌದು ಈ ಕಾದಂಬರಿ ಕನ್ನಡದಲ್ಲಿ ಮಾತ್ರವಲ್ಲ, ಜಾಗತಿಕ ಕಾದಂಬರಿಗಳ ನನ್ನ ಸೀಮಿತ ಜ್ಞಾನವನ್ನೂ ದುರ್ಲಕ್ಷಿಸಿ ಹೇಳುವುದಾದದರೆ, ವಿಶ್ವದ ಕಾದಂಬರಿಗಳ ಪೈಕಿಯೇ ವಿಶಿಷ್ಟ ಸ್ಥಾನದಲ್ಲಿ ನಿಲ್ಲುವಂತಹದ್ದು. ಮೊದಲಿಗೆ ಇದು ಕಾದಂಬರಿ ಎಂದರೇನು? ಎಂಬ ಬಗೆಗಿದ್ದ ನಮ್ಮ ಪರಿಕಲ್ಪನೆಯನ್ನೇ ಮೂಲಭೂತವಾಗಿ ಬದಲಾಯಿಸಿತು. ಎರಡನೆಯದಾಗಿ ಅದು ಆವರೆಗೆ ಕಾದಂಬರಿಗಳನ್ನು ಕಟ್ಟುತ್ತಿದ್ದ ವಾಸ್ತವತಾವಾದದ ನೆಲೆಗಳನ್ನೇ ಮಿಕ್ಕಿ ಮೀರಿ ಹೋಯಿತು. ನಂತರದಲ್ಲಿ ಜಾಗತಿಕ ನೆಲೆಯಲ್ಲಿ ವಾಸ್ತವತಾವಾದದಲ್ಲಿ ಹಲವು ಪ್ರಯೋಗಗಳು ನಡೆದುವಾದರೂ 'ಮಲೆಗಳಲ್ಲಿ 'ಮದುಮಗಳು'ವಿನಲ್ಲಿ ಕಾಣುವ ಪ್ರಯೋಗ ವಿಶ್ವವಿಶಿಷ್ಟವಾದದ್ದು. ಚರಿತ್ರೆ–ವರ್ತಮಾನ–ಭವಿಷ್ಯಗಳು ಅಭಿನ್ನವಾಗಿ ಸಹಜ ಸಂಗಮವೆಂಬಂತೆ ಏಕೀಭವಿಸಿ, ಅಖಂಡ ಕಾಲವೆಂಬ ತೊಟ್ಟಿಲಲ್ಲಿ ಒಂದು ಹೊಸ ವಾಸ್ತವವನ್ನು ನಿರ್ಮಿಸುವ ಸೋಜಿಗವನ್ನೂ ಕಾದಂಬರಿಯಲ್ಲಿ ಕಾಣಬಹುದು. ಅದು ವಾಸ್ತವತಾವಾದದ ಈ ಯಾವ-ಸಮಾಜವಾದಿ ವಾಸ್ತವತಾವಾದದಿಂದ ಹಿಡಿದು ಮಾಂತ್ರಿಕ ವಾಸ್ತವವತಾವಾದವರೆಗಿನ–ಪ್ರಯೋಗಗಳ ತೆಕ್ಕೆಗೆ ಸೇರದ್ದು. ಅಪ್ಪಟ ಭಾರತೀಯವಾದದ್ದು; ಕನ್ನಡದ್ದೇ ಆದದ್ದು, ಇದಕ್ಕೆ ನೆಪವಾಗಿ ಒದಗಿ ಬಂದಿರುವುದು ಕನ್ನಡ ಭಾಷೆ ಮತ್ತು ಸಂಸ್ಕೃತಿ ಕೋಶಗಳು. ಹಾಗೆಂದೇ ನಾನು ಹಿಂದೊಮ್ಮೆ ಈ ಕಾದಂಬರಿಯನ್ನು ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯ ಎಂದು ಬಣ್ಣಿಸಿದ್ದೆ. ಕನ್ನಡಿಗರ ಕುಲಚರಿತ್ರೆಯೆಂದೂ ಕರೆದಿದ್ದೆ. ನಾನು ಇದನ್ನು ಇಲ್ಲಿ ವಿಸ್ತರಿಸಲು ಹೋಗದೆ, ಮುಂದಿನ ಪ್ರಬಂಧಕಾರರು ಚರ್ಚಿಸಲು ಬಿಡುತ್ತೇನೆ.

ಕಾದಂಬರಿಯನ್ನು ಬಂಡವಾಳಶಾಹಿ ಯುಗದ ಮಹಾಕಾವ್ಯ ಎಂದು ಕರೆಯಲಾಗುತ್ತದೆ. ಅಂದರೆ ಮಹಾಕಾವ್ಯದ ಸೃಷ್ಟಿಗೆ ಅಗತ್ಯವಾದ ಕಾಲ ಪರಿಸ್ಥಿತಿ ಮುಗಿದು, ಅದು ಕಾದಂಬರಿಯ ರೂಪದಲ್ಲಿ ಹೊರಹೊಮ್ಮುವ ಕಾಲಪರಿಸ್ಥಿಯಲ್ಲಿ ನಾವಿದ್ದೇವೆ ಎಂಬುದು ಇದರ ಅರ್ಥ.. ಆದರೆ ಬಂಡವಾಳಶಾಹಿ ಎಂದರೆ

ಅದು ಹುಟ್ಟಿದ ಯೂರೋಪ್‌ನಲ್ಲಿ ಒಂದು ಅರ್ಥ ಪಡೆದಿದ್ದರೆ, ಅದಕ್ಕೆ ಬಲಿಯಾದ ಭಾರತದಂತಹ ಏಷಿಯಾ ದೇಶಗಳಲ್ಲಿ ಅದು ಇನ್ನೊಂದು ಅರ್ಥ ಪಡೆಯವುದು; ಪಡೆದಿದೆ ಕೂಡ. ಹೀಗಾಗಿ ನಮ್ಮ ಕಾದಂಬರಿಗಳನ್ನು, ವಿಶೇಷವಾಗಿ 'ಮಲೆಗಳಲ್ಲಿ ಮದುಮಗಳು'ವಿನಂತಹ ಕಾದಂಬರಿಯನ್ನು ಬಂಡವಾಳಶಾಹಿ ಎಂಬ ಆರ್ಥಿಕ-ರಾಜಕೀಯ ವಿದ್ಯಮಾನವೊಂದರ ಪರಿಪ್ರೇಕ್ಷ್ಯದಲ್ಲಿ ನೋಡಲಾಗದೆಂದೇ ನನ್ನ ಅಭಿಪ್ರಾಯ. ಬದಲಾಗಿ, ಬಂಡವಾಳಶಾಹಿಯ ಜೊತೆಗೇ ಹುಟ್ಟಿದ ಪಶ್ಚಿಮದ ಆಧುನಿಕತೆಯೊಂದಿಗೆ ಭಾರತದಂತಹ ದೇಶದ ಒಂದು ಸಮಾಜ ಮುಖಾಮುಖಿಯಾದ ರೀತಿ-ನೀತಿಗಳ ನೆಲೆಯಲ್ಲಿ ನೋಡಿದಾಗ ಮಾತ್ರ ಮೂಲತಃ ಒಂದು ಸಾಂಸ್ಕೃತಿಕ ಪಠ್ಯವೂ ಆಗಿರುವ ಒಂದು ಕಾದಂಬರಿಯ ಚಾರಿತ್ರಿಕ ಮಹತ್ವವನ್ನೂ, ವರ್ತಮಾನದ ಪ್ರಸ್ತುತತೆಯನ್ನೂ ಅರ್ಥ ಮಾಡಿಕೊಳ್ಳಬಹುದೆಂದು ನಾನಾದರೂ ಭಾವಿಸಿದ್ದೇನೆ.

ಹಾಗೆ ನೋಡಿದರೆ ಕುವೆಂಪು ಅವರ ಮೊದಲ ಕಾದಂಬರಿ 'ಕಾನೂರು ಹೆಗ್ಗಡತಿ'ಯಲ್ಲೇ ಆಧುನಿಕತೆಯೊಡನೆಯ ಮುಖಾಮುಖಿಯನ್ನು ನೋಡಬಹುದು. ಆ ಕಾದಂಬರಿಯ ನಾಯಕ ಹೂವಯ್ಯನ ಪಾತ್ರ ನಿರ್ಮಿತಿಯ ವಿನ್ಯಾಸಗಳಲ್ಲಿ ಇದನ್ನು ಕಾಣಬಹುದು. ಆದರೆ ಇದು ನೇರವಾಗಿ. ಹೆಚ್ಚು ಢಾಳಾಗಿ ಮತ್ತು ಒಂದು ಪಾತ್ರದ ಮಿತಿಗಳಲ್ಲಿ ಸಂಭವಿಸುವ ಮುಖಾಮುಖಿ. ಹಾಗಾಗಿಯೇ ಈ ಕಾದಂಬರಿ ಇದ್ದಕ್ಕಿದ್ದಂತೆ ಮುಗಿದಂತಾಗಿ, ಅದು ಸೃಷ್ಟಿಸುವ ದುರಂತವೂ ಒಂದು ಸಾಂಸ್ಕೃತಿಕ ಆಯಾಮವನ್ನು ಪಡೆಯದೆ, ದಿಕ್ಕೆಟ್ಟಂತೆ ನಮ್ಮ ಪರಂಪರೆಯ ಮೊದಲ ಆಧುನಿಕತಾವಾದಿಯಾದ ಬುದ್ಧನಿಗೆ ಬಹುಸರಳವಾಗಿ ಶರಣಾಗುತ್ತದೆ. ನಾನು ಈ ಮಾತನ್ನು ಈ ಕಾದಂಬರಿಗೆ ಇರುವ ಅದರದ್ದೇ ಆದ ಸಾಹಿತ್ಯಿಕ ಸಿರಿ ಸಮೃದ್ಧಿಯನ್ನು ದುರ್ಲಕ್ಷಿಸದೇ ಗೌರವದೊಂದಿಗೆ ಗಮನಿಸಿಯೇ ಹೇಳುತ್ತಿರುವೆ. ಆದರೆ 'ಮಲೆಗಳಲ್ಲಿ ಮದುಮಗಳು' ನಾನು ಮೊದಲೇ ಹೇಳಿದಂತೆ ತನ್ನ ಬಹು ಆಯಾಮಗಳ ಕಥನ ಕ್ರಮದಿಂದಾಗಿ ಆಧುನಿಕತೆಯನ್ನು ಮುಖಾಮುಖಿಯಾಗುವ ರೀತಿ-ನೀತಿಗಳು ಕನ್ನಡಕ್ಕೇ ಅನನ್ಯವೆನ್ನಿಸುವವು.. ಈ ಕೃತಿ ತನ್ನ ವೈವಿಧ್ಯಮಯ ಪ್ರಕೃತಿ ಮತ್ತು ಮನುಷ್ಯ ಹಾಗೂ ಪ್ರಾಣಿ ಲೋಕವನ್ನು ತನ್ನ ಪೂರ್ಣ ದೃಷ್ಟಿಯಲ್ಲಿ ಹಿಡಿದು ನಮ್ಮ ಮುಂದೆ ನಿಲ್ಲಿಸುವ ದೃಶ್ಯಾವಳಿ ಮತ್ತು ಪಾತ್ರಗಳು ನಮ್ಮ ಪ್ರಜ್ಞೆಯ ಹಲವು ಅಜ್ಞಾತ ಸ್ತರಗಳನ್ನು ತಾಗಿ ಪರಂಪರೆ ಮತ್ತು ಆಧುನಿಕತೆಗಳ ಒಂದು ವಿವೇಚನಾಪೂರ್ಣ ಸಮನ್ವಯದ ಮೂಲಕ ಹುಟ್ಟಿಸುವ ಸರ್ವೋದಯದ ಅರಿವು ಅನುಭಾವಿಕವಾದದ್ದು. ಇಲ್ಲಿಯ ವಿವೇಕಾನಂದರು ದೂರದ ಅಮೆರಿಕೆಯ ಸಹಸ್ರ ದ್ವೀಪೋದ್ಯಾನದಲ್ಲಿ ಕಾಣುವ ಕಾಣ್ಕೆಯಂತೆ, ಹೂವಳ್ಳಿಯ ಕಾಡಿನಲ್ಲಿ ಕಾಣಿಸಿಕೊಳ್ಳುವ ಗಡ್ಡದಯ್ಯನ ದರ್ಶನದಂತೆ ಕಲಕತ್ತೆಯ ಭವತಾರಿಣಿಯೇ ಹೂವಳ್ಳಿಯ ಮಾರಮ್ಮನಾಗುವ ಬೆರಗಿನಂತೆ.

ಈ ಕಾದಂಬರಿಯನ್ನು ಕುವೆಂಪು 'ಕಾನೂರು ಹೆಗ್ಗಡತಿ'ಯನ್ನು ಬರೆದ ಹಲವು ವರ್ಷಗಳ ನಂತರ ಬರೆದರಾದರೂ, ಇದು ಹೇಳುವ ಕಥೆ ಅದು ಹೇಳುವ ಕಥೆಗಿಂತ ಬಹು ಹಿಂದಿನ ಕಾಲಕ್ಕೆ ಸೇರಿದ್ದು. ಆಧುನಿಕತೆ ಇನ್ನೂ ನಮ್ಮ ಮಲೆನಾಡಿನ ಗ್ರಾಮ ಸಮಾಜಕ್ಕೆ ಮೊದಲ ಹೆಜ್ಜೆಗಳನ್ನು ಇಡುತ್ತಿದ್ದ ಕಾಲವದು. ಹಾಗಾಗಿ ಆಧುನಿಕತೆಯೊಡನೆಯ ಇಲ್ಲಿನ ಮುಖಾಮುಖಿ ಬೇರುಮಟ್ಟದ್ದು ಮತ್ತು ಬಹು ಮೂಲಭೂತವಾದದ್ದು. ಜೊತೆಗೆ ನಾಯಕನಿಲ್ಲದ ಈ ಕಾದಂಬರಿಯ ಈ ಮುಖಾಮುಖಿ ಬಹುಮುಖಿಯಾದದ್ದು. ಸಮಾಜದ ಹಲವು ಸ್ತರಗಳು ಈ ಮುಖಾಮುಖಿಯಲ್ಲಿ ಭಾಗವಹಿಸಿ ಪ್ರತಿಸ್ಪಂದಿಸಿದ ರೀತಿ ನೀತಿಗಳು ಒಂದು ಅತ್ಯದ್ಭುತ ಜೀವಂತಿಕೆಯ ವರ್ಣಮಯ ಲೋಕವನ್ನು ಸೃಷ್ಟಿಸಿ ಈ ಮುಖಾಮುಖಿಯ ಶೋಧನೆಯನ್ನು ಹೆಚ್ಚು ಸೂಕ್ಷ್ಮ ಮತ್ತು ಸಂಕೀರ್ಣಗೊಳಿಸುವಂತಹವು. ಈ ದೃಷ್ಟಿಯಿಂದ ಈ ಕಾದಂಬರಿಯ ದೇವಯ್ಯ ಮತ್ತು ಮುಕುಂದಯ್ಯ ಆಧುನಿಕತೆಯನ್ನು ಎದುರಾಗುವ ಪರಿ ನಿರ್ಣಾಯಕವಾಗಿ ಬೇರೆ ಬೇರೆಯಾದದ್ದು ಮತ್ತು ಈ ಕಾದಂಬರಿ ಧ್ವನಿಸುವುದು ಮುಕುಂದಯ್ಯನ ಪರಿಯ ಸಾಧುತ್ವವನ್ನು ಎಂಬುದು ಇಲ್ಲಿ ಮುಖ್ಯ.

ಈ ಮುಕುಂದಯ್ಯನ ಪರಿ ಇಂದು ಹೆಚ್ಚು ಗಮನಾರ್ಹವೆನಿಸುವುದೂ ಹೌದು. ಇಂದಿನ ರೂಕ್ಷ ಹಿಂದುತ್ವವಾದಿ ರಾಜಕಾರಣಕ್ಕೆ ಸಂವಾದಿಯಾಗಿ ನಿಲ್ಲುವ ಈ ಪರಿ ಹಿಂದು ಧರ್ಮ ಆಧುನಿಕವಾಗಬೇಕಾದ ಪರಿಯನ್ನೂ ಹೇಳುತ್ತಾ ಹಿಂದುತ್ವವಾದಿಗಳ ಹಿಂದೂ ಧರ್ಮ ನಿರೂಪಣೆಯನ್ನು ಪ್ರಶ್ನಿಸುತ್ತದೆ. ಜೊತೆಗೆ ದೇವಯ್ಯನ ಶೈಲಿಯ ಆಧುನಿಕತೆಯ ಕುರುಡು ಆರಾಧನೆಯಿಂದಾಗಿ ನಮ್ಮ ಆಧುನಿಕತಾವಾದಿಗಳಿಂದ ಬಹು ತಪ್ಪು ತಿಳುವಳಿಕೆಗೆ ಒಳಗಾಗಿರುವ ವಿವೇಕಾನಂದರ ಧರ್ಮಜಾಗೃತಿ ಅಥವಾ ಎಚ್ಚರದ ಮಾದರಿಯನ್ನು ಮರುಶೋಧನೆಗೆ ಒಳಪಡಿಸಿ ಅದನ್ನು ಇಂದಿನ ಸಂದರ್ಭಕ್ಕೆ ಉಚಿತವಾದ ರೀತಿಯಲ್ಲಿ ಮುನ್ನೆಲೆಗೆ ತರಲು ಪ್ರೇರೇಪಿಸುವಂತಿದೆ.

ಗುತ್ತಿ-ತಿಮ್ಮಿ ಮತ್ತು ಮುಕುಂದಯ್ಯ-ಚಿನ್ನಮ್ಮರ ಪ್ರೇಮ ಪ್ರತಿನಿಧಿಸುವ ಗಂಡು ಹೆಣ್ಣುಗಳ ನಡುವಣ ಸಹಜ ಪ್ರೇಮಕ್ಕೆ ಅಡ್ಡಿಯಾಗುವ ಕಲ್ಲೂರು ಮಂಜಭಟ್ಟರು ಮತ್ತು ಅವರ ಜಾಲ ಪ್ರತಿನಿಧಿಸುವ ಊಳಿಗಮಾನ್ಯಶಾಹಿ ಮತ್ತು ಪುರೋಹಿತಶಾಹಿಯೆಂಬ ಅಸಹಜ ಸಾಮಾಜಿಕ ಶಕ್ತಿಗಳ ವಿರುದ್ಧ ಸಹಜ ಸಾಮಾಜಿಕ ಸಂಬಂಧಗಳ ಒತ್ತಡಗಳಿಂದಾಗಿ ಬಂಡೇಳುವ ವಿವಿಧ ಸಾಮಾಜಿಕ ವರ್ಗಗಳು ಈ ಬಂಡಾಯದ ಅವಿಭಾಜ್ಯ ಭಾಗವಾಗಿ ತಮ್ಮೊಳಗೊಂದು ಅಧ್ಯಾತ್ಮಿಕ ಸಂಚಾರದ ಮಿಂಚೊಂದನ್ನು ಅನುಭವಿಸುತ್ತಾ ಸರ್ವೋದಯದೆಡೆಗೆ-'ಮುಕ್ತಿ'ಯೆಡೆಗೆ ಮುಖ ಮಾಡಿ ನಿಲ್ಲುವ ಅಪೂರ್ವ ವಿದ್ಯಮಾನವೊಂದನ್ನು ಈ ಕಾದಂಬರಿಯಲ್ಲಿ ನಾವು ನೋಡಬಹುದು. ಇಲ್ಲಿ ಅಧ್ಯಾತ್ಮಿಕ ಮಿಂಚಿನ ಸಂಚಾರವೆಂದರೆ ಮತ್ತೇನಲ್ಲ. ಅದು ತಮ್ಮೊಳಗೆ ಅಂತರ್ಗತವಾಗಿರುವ ವಿಶ್ವಶಕ್ತಿಯ ಅರಿವು. ಈ ಬಂಡಾಯ ಸರ್ವರಿಗೂ ಪ್ರವೇಶವಿರುವ ಒಂದು ಶಾಲೆಯ ಸ್ಥಾಪನೆಯ ಸೂಚನೆಯ ಮೂಲಕ ವಿದ್ಯೆಯ ಸಾರ್ವತ್ರೀಕರಣದ ಹಾದಿ ಸುಗಮಗೊಳಿಸುವಂತೆ ಈ ಕಥೆ ವಿನ್ಯಾಸಗೊಂಡಿದೆ. ಈ ಮೂಲಕ ಕಾದಂಬರಿಯು ಗಂಡು-ಹೆಣ್ಣಿನ ಸಹಜ ಪ್ರೇಮ ಮತ್ತು ವಿದ್ಯೆಯ ಸಾರ್ವತ್ರೀಕರಣಗಳೇ ಸಮಾಜದ ಜಡ ಸಂಬಂಧಗಳನ್ನು ಚಲನಶೀಲಗೊಳಿಸುವ ನಿಮಿತ್ತ ಶಕ್ತಿಗಳನ್ನ ನಿರ್ಮಿಸಬಲ್ಲವು ಎಂದು ಹೇಳುತ್ತಾ ಸಹಜ ಪ್ರೇಮ ಮತ್ತು ಸಾರ್ವತ್ರಿಕ ವಿದ್ಯೆಗಳನ್ನು ಆಧುನಿಕತೆಯ ಮೂಲ ಮೌಲ್ಯಗಳಾಗಿ ಸ್ವಾಗತಿಸುತ್ತದೆ ಎನ್ನಬಹುದು.

ಈ ಕಾದಂಬರಿಯ ನಿಜಸತ್ವವನ್ನು ಗುರುತಿಸುವ ಕೈ ಸನ್ನೆಯಂತಹ ಒಂದು ಮಾತನ್ನು ಇಲ್ಲಿ ನಿಮ್ಮ ಗಮನಕ್ಕೆ ತರಬೇಕು. ಅದು ಕುವೆಂಪು ಅವರ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಚರಿತ್ರೆಯ ವಿಶಾಲ ಭಿತ್ತಿಯಲ್ಲಿ ಅರಿಯಲು ಕೆಲವು ಸೂಚನೆಗಳನ್ನು ನೀಡಿದ ತೇಜಸ್ವಿಯವರ ಮಾತು. ಸಾಹಿತ್ಯ ರಚನೆಯ ಪರಿಪೂರ್ಣ ಪ್ರತೀಕವೆಂದು ಹೇಳಲಾಗುವ (ಶ್ರೀರಾಮಾಯಣ ದರ್ಶನಂ' ಎಂಬ) ಒಂದು ಮಹಾಕಾವ್ಯವನ್ನು ರಚಿಸಿದ ನಂತರವೂ ಕುವೆಂಪು ಅವರಿಗೆ ಈ ಕಾದಂಬರಿಯನ್ನು ಬರೆಯುವ ಕಾರಣಗಳೇನಿದ್ದವು? ಎಂಬ ಪ್ರಶ್ನೆ ಹಾಕುವ ಮೂಲಕ ಅವರು, ಕುವೆಂಪು ಅವರ ನಿಜಸತ್ವ ಅವರ ಮಹಾಕಾವ್ಯದಲ್ಲಿ ಅಭಿವ್ಯಕ್ತಗೊಳ್ಳಲಾಗದೆ 'ಮಲೆಗಳಲ್ಲಿ ಮದುಮಗಳು; ಕಾದಂಬರಿ ರಚನೆಗಾಗಿ ಅದು ಕಾಯುತ್ತಿತ್ತು ಎಂದು ಅವರು ಸೂಚಿಸುತ್ತಾರೆ. ಅಂದರೆ ಕುವೆಂಪು ಅವರ ಹೊಕ್ಕುಳ ರಚನೆ ಈ ಕಾದಂಬರಿಯೇ ಹೊರತು ಅವರ ಮಹಾಕಾವ್ಯವಲ್ಲ. ಕುವೆಂಪು ಅವರ ನಿಜವಾದ ಮಹಾಕಾವ್ಯವೆಂದರೆ ಈ ಕಾದಂಬರಿಯೇ ಎಂಬ ಈ ಕಾದಂಬರಿ ಕುರಿತು ಬಂದಿರುವವಿಮರ್ಶೆಯ ಮಾತನ್ನು ನಾವು ಈ ಹಿನ್ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕೆನಿಸುತ್ತದೆ.

ಹಾಗೆ ನೋಡಿದರೆ, ತೇಜಸ್ವಿಯವರ ಈ ಮಾತುಗಳು ಕುವೆಂಪು ಪ್ರತಿಭೆಯನ್ನು ಅರ್ಥ ಮಾಡಿಕೊಳ್ಳಲು ನಿಜವಾದ ಕೀಲಿ ಕೈ ಒದಗಿಸಿತೆಂದೇ ಹೇಳಬೇಕು. ಏಕೆಂದರೆ, ಈ ಕಾದಂಬರಿ ಪ್ರಕಟವಾದಾಗ ಕನ್ನಡ ಸಾಹಿತ್ಯವನ್ನು ಆಗ ಆಳುತ್ತಿದ್ದ ನವ್ಯದ ಅಧಿಪತಿಗಳಿಂದ ಅಂತಹ ಸ್ವಾಗತವೇನೂ ದೊರೆಯಲಿಲ್ಲ. ಅದಿನ್ನೂ 'ಸಂಸ್ಕಾರ'ದ ಮಂಪರಿನಲ್ಲಿಯೇ ಇತ್ತು. ಅವರು ಅದರ ಸಮೃದ್ಧ ಸಂಸ್ಕೃತಿ ವರ್ಣನೆಯನ್ನು ವಿವರಗಳ ಸೊಕ್ಕು ಎಂದು ಕರೆದರು. ಮೈಯೆಲ್ಲ ಜೀವ ತುಂಬಿಕೊಂಡಿದ್ದ ಈ ಕೃತಿಗೆ ಕೇಂದ್ರ ಪ್ರಜ್ಞೆ ಇಲ್ಲದೆ ಸೊರಗಿದೆ ಎಂದು ಟೀಕಿಸಲಾಯಿತು. ಆದರೆ ಮುಖ್ಯವಾಗಿ ಗುತ್ತಿ-ಸುಬ್ಬಣ್ಣ ಹೆಗ್ಗಡೆ-ಪೀಂಚಲು ಎಂಬ ಮೂರು ಜೀವಶಕ್ತಿಗಳ ತ್ರಿಕೋನದ ಮೇಲೆ ಕಟ್ಟಲ್ಪಟ್ಟಿರುವ ಈ ಕೃತಿ ಮುಟ್ಟಿದೆಡೆಯಲ್ಲೆಲ್ಲ ಜೀವಂತವಾಗಿರುವುದು ಸಹಜವೇ ಆಗಿದೆ. ಒಟ್ಟಿನಲ್ಲಿ ಕೃತಿಯ ಅಧ್ಯಯನ ಒಟ್ಟು ಕನ್ನಡ ಸಾಹಿತ್ಯ-ಸಂಸ್ಕೃತಿಗಳ ತಲಸ್ಪರ್ಶಿ ಅಧ್ಯಯನವೇ ಆಗಿರುತ್ತದೆ.

ನಾನು ಖಚಿತಪಡಿಸಿಕೊಂಡಿರುವಂತೆ ಈ ಕಾದಂಬರಿಯನ್ನು ಪದವಿ ತರಗತಿಗೆ ಕನ್ನಡ ಸಾಹಿತ್ಯ ಬೋಧಿಸುವ ಮೇಷ್ಟ್ರುಗಳಿರಲಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಾಹಿತ್ಯ ಬೋಧಿಸುವ ಮೇಷ್ಟ್ರುಗಳಲ್ಲೂ ಬಹಳ ಜನರೂ ಓದಿಲ್ಲ. ಈ ಕಾರ್ಯಕ್ರಮವಾದರೂ ಅಂತಹವರು ಈ ಕಾದಂಬರಿಯನ್ನು ಓದಲು ಪ್ರೇರೇಪಣೆಯಾಗಲಿ ಎಂದು ಹಾರೈಸುವೆ. ನಮಸ್ಕಾರ.

**(ಕಳೆದ ಅಕ್ಟೋಬರ್ ೧೪ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ಮತ್ತು ಬೆಂಗಳೂರಿನ ಕುವೆಂಪು ವಿಚಾರವೇದಿಕೆ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ 'ಮಲೆಗಳಲ್ಲಿ ಮದುಮಗಳು-೫೦' ಆಚರಣೆಯ ಅಂಗವಾಗಿ ಮೈಸೂರಿನಲ್ಲಿ ನಡೆಸಿದ ವಿಚಾರ ಸಂಕಿರಣದಲ್ಲಿ ಮಾಡಿದ ಆಶಯ ಭಾಷಣದ ಬರಹ ರೂಪ)**

# ಜಾಗತಿಕ ಕಾದಂಬರಿ ಪರಂಪರೆ ಮತ್ತು 'ಮಲೆಗಳಲ್ಲಿ ಮದುಮಗಳು' : ಕೆಲವು ಟಿಪ್ಪಣಿಗಳು

**–ಓ.ಎಲ್. ನಾಗಭೂಷಣ ಸ್ವಾಮಿ**



೧. ಜಾಗತಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಮಲೆಗಳಲ್ಲಿ ಮದುಮಗಳುನ್ನು ನೋಡುವುದು ಹೇಗೆ? ಕೆಲವು ಸುಪ್ರಸಿದ್ಧ ಕಾದಂಬರಿಕಾರರ ಕೃತಿಗಳಿಂದ ಕುವೆಂಪು ಹೇಗೆ ಪ್ರಭಾವಿತರಾದರು ಎಂದು ನೋಡುವುದು ಚಿರಪರಿಚಿತವಿಧಾನವಾದರೂ ಅದರಿಂದ ಹೆಚ್ಚು ಲಾಭವಿಲ್ಲ ಅನ್ನಿಸುತ್ತದೆ. ನಿಜ, ತಾವು ಟಾಲ್ಸ್‌ಟಾಯ್‌ನ ಕಾದಂಬರಿಗಳಿಂದ ಪ್ರೇರಿತರಾದ ಬಗ್ಗೆ ಕುವೆಂಪು ಹೇಳಿಕೊಂಡಿದ್ದಾರೆ; ಟಾಲ್ಸ್‌ಟಾಯ್ ಮತ್ತು ಥಾಮಸ್ ಹಾರ್ಡಿ ತಮ್ಮ ಕಾದಂಬರಿ ರಚನೆಯ ಮೇಲೆ ಪ್ರಭಾವಬೀರಿದ ಲೇಖಕರು ಎಂದೂ ಕುವೆಂಪು ಹೇಳಿಕೊಂಡಿದ್ದಾರೆ. ನಿಜ, ಟಾಲ್ಸ್‌ಟಾಯ್‌ನ ಅನ್ನಾ ಕರೆನಿನ ಕಾದಂಬರಿಯ ಸ್ವರೂಪಕ್ಕೂ ಕಾನೂರು ಹೆಗ್ಗಡಿತಿಯ ಸ್ವರೂಪಕ್ಕೂ ಎದ್ದು ಕಾಣುವಂಥ ಹೋಲಿಕೆಗಳಿವೆ. ನಿಜ, 'ಇಲ್ಲಿ ಯಾವುದೂ ಮುಖ್ಯವಲ್ಲ' ಎಂಬ ಸುಪ್ರಸಿದ್ಧ ಉಕ್ತಿ *ವಾರ್ ಅಂಡ್ ಪೀಸ್* ಕಾದಂಬರಿಯಲ್ಲಿ ಹೆಚ್ಚು ಕಡಿಮೆ ಅದೇ ಸ್ವರೂಪದಲ್ಲೇ ಪಿಯರೆ ಎಂಬ ಪಾತ್ರದ ಸ್ವಗತದಲ್ಲಿ ಕೇಳುತ್ತದೆ. ಅನ್ನ ಕರೆನಿನ ಕಾದಂಬರಿಯಂತೆಯೇ ಕಾನೂರು *ಹೆಗ್ಗಡಿತಿ* ಕಥೆಯೇ ಪ್ರಧಾನವಾದ ಕೃತಿಯಾದರೆ *ಮಲೆಗಳಲ್ಲಿ ಮದುಮಗಳು*, *ವಾರ್ ಅಂಡ್ ಪೀಸ್*‌ನ ರೀತಿಯಲ್ಲಿ ಕಥನ ಮಾತ್ರ ಮುಖ್ಯವಾಗಿರುವ, ಕಥೆ ಅಮುಖ್ಯವಾಗಿರುವ, ನಿಯತಿ ಕೃತ ಎಂಬಂತೆಯೂ ಕೇಂದ್ರವೇ ಇಲ್ಲದ ನಿಯಮ ರಹಿತ ರಚನೆ ಎಂಬಂತೆಯೂ ಏಕ ಕಾಲದಲ್ಲೇ ಕಾಣುತ್ತದೆ. ನಿಜ, ನಿಸರ್ಗದ ವರ್ಣನೆಯಲ್ಲಿ ಕುವೆಂಪು ಭಾಷೆಗೂ ಥಾಮಸ್ ಹಾರ್ಡಿಯ ಭಾಷೆಗೂ ಅನೇಕ ಸಾಮ್ಯಗಳು ಕಾಣುತ್ತವೆ. ಆದರೆ, ಇಂಥ ಸಮಾನ ಸಂಗತಿಗಳ ಹುಡುಕಾಟ ಮುಖ್ಯವಲ್ಲ. ಜಾಗತಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಕುವೆಂಪು ಕೃತಿಗಳನ್ನು ನೋಡುವ ಕೆಲಸವು ಆಧುನಿಕತೆಯನ್ನು ಕುವೆಂಪು ಗ್ರಹಿಸಿದ ರೀತಿ, ಪರಂಪರೆ ಮತ್ತು ಆಧುನಿಕತೆಗಳ ಸಂಬಂಧವನ್ನು ಕುವೆಂಪು ಗ್ರಹಿಸಿದ ರೀತಿ, ಮಹಾಕಾವ್ಯ ಮತ್ತು ಕಾದಂಬರಿ ಪ್ರಕಾರಗಳನ್ನು ಒಂದಾಗಿ ಬೆಸೆದ ರೀತಿ ಇವನ್ನು ಕಂಡುಕೊಳ್ಳುವುದು ಫಲಪ್ರದ ಎನಿಸುತ್ತದೆ.

೨. ಆಧುನಿಕ ಮನುಷ್ಯ ಗುಲಾಬಿ ಹೂವಿನ ಹಾಗೆ; ಇಂದು ನಾವು ನೋಡುತ್ತಿರುವ ಗುಲಾಬಿಯ ಹೂ ಲಕ್ಷಾಂತರ ವರ್ಷಗಳ ವಿಕಾಸದ ಫಲವಾಗಿರುವಂತೆಯೇ ಮುಂದಿನ ಕಾಲದಲ್ಲಿ ರೂಪತಳೆಯಲಿರುವ ಹೂವುಗಳ ಬೀಜ ರೂಪವೂ ಹೌದು; ಆಧುನಿಕ ಮನುಷ್ಯ ಎತ್ತರವಾದ ಶಿಖರದ ಮೇಲೆ ನಿಂತು ಒಂದು ಕೈಯನ್ನು ಕಣಿವೆಯ ತಳಾತಳಕ್ಕೂ[ಗತ] ಇನ್ನೊಂದು ಕೈಯನ್ನು ನಕ್ಷತ್ರಗಳಿಗೂ [ಭವಿಷ್ಯ] ಚಾಚಿಕೊಂಡಿರುತ್ತಾನೆ-ಈ ಹೋಲಿಕೆಯನ್ನು ಕುವೆಂಪು ಅವರು ಯುವಕವಿಗಳ ಸಮ್ಮೇಳನದಲ್ಲಿ ಆಡಿದ್ದಾರೆ. ಪರಂಪರೆ ಮತ್ತು ಆಧುನಿಕತೆಗಳನ್ನು ಕುರಿತ ರೂಪಕ ಇದು. ಆಧುನಿಕತೆಗೆ ಅಡಿಯಾಳಾಗದೆ, ಗತವನ್ನು ಆರಾಧಿಸದೆ ಸ್ವಸ್ಥವಾದ, ಆರೋಗ್ಯಕರವಾದ ನೋಟವನ್ನು ಬೆಳೆಸಿಕೊಳ್ಳುವುದು ಹೇಗೆ ಅನ್ನುವುದು ಕುವೆಂಪು ಅವರ ಮುಖ್ಯ ಹುಡುಕಾಟವೇ ಆಗಿತ್ತು.

೩. ಕಾವ್ಯಮೀಮಾಂಸೆಯನ್ನು ಕುರಿತ ಅವರ ಚಿಂತನೆಗಳು ಈ ಮಾತಿಗೆ ಪ್ರಬಲವಾದ ಸಾಕ್ಷ್ಯಗಳನ್ನು ಒದಗಿಸುತ್ತವೆ. ಕುವೆಂಪು ಕೃತಿಗಳೇ ಅವರ ಕಾವ್ಯಮೀಮಾಂಸೆಯ ಆನ್ವಯಿಕ ಪ್ರಯೋಗಶಾಲೆ. ಅವರ ಮುಖ್ಯ ಕೃತಿಗಳಾದ *ಶ್ರೀ ರಾಮಾಯಣ ದರ್ಶನಂ*, *ಕಾನೂರು ಹೆಗ್ಗಡಿತಿ*, ಮತ್ತು *ಮಲೆಗಳಲ್ಲಿ ಮದುಮಗಳು* ಇವು ಪ್ರಕಟವಾದ ಇಸವಿ ಬೇರೆಬೇರೆಯಾದರೂ ಅವರು ಈ ಮೂರೂ ಕೃತಿಗಳ ರಚನೆಯಲ್ಲಿ ಏಕಕಾದಲ್ಲಿ ತೊಡಗಿದ್ದರೆಂಬುದು ಗಮನಾರ್ಹವಾಗಿದೆ. ರಾಮಾಯಣ ದರ್ಶನಂ ರಚನೆಗೊಳ್ಳುತ್ತಿರುವಾಗಲೇ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಬಹುಭಾಗ ವಿಚಾರವಾಹಿನಿಯಲ್ಲಿ ಪ್ರಕಟವಾಯಿತು. ರಾಮಾಯಣವು ಕೇವಲ ಕಥೆಯಲ್ಲ, ಕಥನ ಮತ್ತು ಕವಿಯ ದರ್ಶನವೇ ಮುಖ್ಯ ಎಂಬ ಅವರ ನಿಲುವು ಈ ಮೂರೂ ಮುಖ್ಯ ಕೃತಿಗಳಲ್ಲಿ ಪ್ರಕಟಗೊಂಡಿದೆ. ಮದುಮಗಳು ಕೃತಿಯು ಮಂದ್ರಸ್ತರದ ರಾಮಾಯಣದರ್ಶ ಎಂದು ಶ್ರೀ ಸುಜನಾ ಅವರು ಪ್ರತಿಪಾದಿಸಿರುವುದು (ಶ್ರೀಕುವೆಂಪು, ಪ್ರಸಾರಾಂಗ ಬೆಂಗಳೂರು ವಿವಿ) ನೆನಪಾಗುತ್ತಿದೆ. ನವ್ಯ ವಿಮರ್ಶೆಯು ಕೃತಿಯ, ಕಾದಂಬರಿಯ ಕೇಂದ್ರದ ಅನ್ವೇಷಣೆಯಲ್ಲಿ ತೊಡಗಿದ್ದರೆ 'ಕಥೆಯ ಕೇಂದ್ರ'ದ ಅಗತ್ಯವಿರದ, ಆದ್ದರಿಂದಲೇ ನಿಯಮರಹಿತವಾಗಿಯೂ ಬದುಕನ್ನು ಕುರಿತದರ್ಶನವೇ ಮುಖ್ಯವಾದ್ದರಿಂದ ನಿಯತಿಕೃತವಾಗಿಯೂ ಕಾಣುತ್ತದೆ ಮಲೆಗಳಲ್ಲಿ ಮದುಮಗಳು. ಸುಬ್ಬಣ್ಣ ಹೆಗ್ಗಡೆ ಹಂದಿಯ ಒಡ್ಡಿನ ಬಳಿ ಸೂರ್ಯೋದಯವನ್ನು ನೋಡುವ ಪ್ರಸಂಗದ ಕಥನದಲ್ಲಿ ಮಂಥರೆ, ಕೈಕೆಯರ ಪಾತ್ರವನ್ನು ಕುರಿತು ಇರುವಂಥದೇ ಸಹಾನುಭೂತಿಯೂ ಕಾಣುತ್ತದೆ. ಒಂದು ಪಾತ್ರವಲ್ಲ, ಹಲವು ಪಾತ್ರಗಳ ಮೂಲಕ ಬದುಕಿನ ದರ್ಶನವನ್ನು ವ್ಯಕ್ತಪಡಿಸುವುದು ಕುವೆಂಪು ಕಾವ್ಯಮೀಮಾಂಸೆಯ ಮುಖ್ಯ ಸಂಗತಿ; ಅದು ಪ್ರಖರವಾಗಿ ವ್ಯಕ್ತವಾಗುವುದು ಮದುಮಗಳು ಕಾದಂಬರಿಯಲ್ಲಿ.

೪. ಟಾಲ್ಸ್‌ಟಾಯ್ *ವಾರ್ ಅಂಡ್ ಪೀಸ್* ನಲ್ಲಿ ಹೇಗೆ ಯೂರೋಪಿಯನ್ ಮಾದರಿಯ, ಅಚ್ಚುಕಟ್ಟಾದ ಕಾದಂಬರಿ ಬಂಧವನ್ನು ಮೀರಿ ಬದುಕಿನ ಲಯವನ್ನು ಚಿತ್ರಿಸುತ್ತಾನೋ ಅದೇ ರೀತಿಯಲ್ಲಿ ಕುವೆಂಪು ಕೂಡ ಮದುಮಗಳು ಕಾದಂಬರಿಯಲ್ಲಿ ಹಲವು ಪಾತ್ರಗಳ ಬದುಕಿನ ದರ್ಶನವನ್ನು ವೈವಿಧ್ಯಮಯವಾದ ಲಯದ ಮುಖಾಂತರ ಹಿಡಿದಿಟ್ಟಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಕನ್ನಡದ ಮಹಾಕಾವ್ಯಗಳ ಲಕ್ಷಣವನ್ನು ಅವರು ಕಾದಂಬರಿಯಲ್ಲೂ ಹೊಸ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡದ ಮಹಾಕಾವ್ಯಗಳು ಕಥೆಗಿಂತ ವರ್ಣನೆಗೆ ಪ್ರಾಧಾನ್ಯ ನೀಡುತ್ತವೆ, ಒಂದೊಂದು ಮಹಾಕಾವ್ಯವೂ ಒಂದೊಂದು ರೀತಿಯಲ್ಲಿ ಬದುಕನ್ನು ವರ್ಣಿಸುತ್ತದೆ. ಹಾಗೆಯೇ ಮದುಮಗಳು ವಿಭಿನ್ನ ಲಯಗಳ, ಪಾತ್ರೋಚಿತವಾದ ಭಾಷೆಯ ಬಳಕೆಯ ಷ ಮುಖಾಂತರ ಕಥೆಗಿಂತ ಕಥನವೇ, ಅಥವಾ ವರ್ಣನವೇ ಮುಖ್ಯ ಅನ್ನುವುದನ್ನು ಮನದಟ್ಟು ಮಾಡುತ್ತದೆ. ಹಾಗೆ ನೋಡಿದರೆ ಮದುಮಗಳು ಕಾದಂಬರಿ ಮಹಾಭಾರತದ ಸ್ವರೂಪಕ್ಕೆ, ಕಥನಕ್ಕೆ ಹತ್ತಿರವಾದದ್ದು. ಕನ್ನಡದ ಮಹಾಕಾವ್ಯಗಳ ಪರಂಪರೆಯನ್ನು ಮುಂದುವರೆಸುವಂಥದ್ದು, ಇಪ್ಪತ್ತನೆಯ ಶತಮಾನದ ಆರಂಭಕಾಲದ ಕನ್ನಡ ಕಾದಂಬರಿಗಳು ಕಥನದಲ್ಲಿ ನಡೆಸುತಿದ್ದ ವಿವಿಧ ಪ್ರಯೋಗಗಳ ಶಿಖರದಂತೆ ಇರುವಂಥದ್ದು. ನಿರೂಪಣೆಯನ್ನು ಕುರಿತ ಹಾಗೆ ಕನ್ನಡದ ಮಹಾಕಾವ್ಯಗಳಿಗೂ ಕನ್ನಡ ಕಾದಂಬರಿಯ ಆದಿ ಕಾಲದ ಕೃತಿಗಳ ಪ್ರಯೋಗಗಳಿಗೂ ಮದುಮಗಳು ಕಾದಂಬರಿಗೂ ಇರುವ ಸಂಬಂಧವನ್ನು ಕುರಿತು ಅಧ್ಯಯನ ಮಾಡುವ ಅಗತ್ಯವಿದೆ. ಅಂಥ ಅಧ್ಯಯನದ ಮೂಲಕ ಕುವೆಂಪು ಪಶ್ಚಿಮದಿಂದ ಪಡೆದದ್ದೆಷ್ಟು, ಕನ್ನಡ ಕೃತಿಗಳ ಯಾವ ಪರಂಪರೆಯನ್ನು ಎಷ್ಟು ಹೇಗೆ ಬಳಸಿಕೊಂಡಿದ್ದಾರೆ ಅನ್ನುವುದು ತಿಳಿಯುತ್ತದೆ, ಅವರ ಕಾದಂಬರಿ ಕೇವಲ ಪಶ್ಚಿಮದ ಅನುಕರಣೆಯಲ್ಲ ಅನ್ನುವುದು ತಿಳಿಯುತ್ತದೆ.

೫. ಮುಖ್ಯವಾದ ಸಂಗತಿ ಎಂದರೆ ಪಶ್ಚಿಮದ ಕಾದಂಬರಿ ಮನುಷ್ಯನ ಸಾಮಾಜಿಕ ಬದುಕಿಗೆ ಪ್ರಾಮುಖ್ಯ ನೀಡಿದ್ದಾದರೆ ಕುವೆಂಪು ಕೃತಿ ಕೇವಲ ವರ್ತಮಾನದ ಬದುಕಿನ ಗೋಜಲುಗಳಿಗೆ ಮಾತ್ರವಲ್ಲ, ಮನುಷ್ಯನ ಆಧ್ಯಾತ್ಮಿಕ ಅನ್ವೇಷಣೆಯನ್ನೂ ಗಹನವಾಗಿ ಮಂಡಿಸುವ ಕೃತಿ. ಆಧ್ಯಾತ್ಮ ಮತ್ತು ಸಾಮಾಜಿಕ ಬದುಕನ್ನು ಹೀಗೆ ಒಂದು ಚೌಕಟ್ಟಿನಲ್ಲಿ ಹಿಡಿಯುವ ಪ್ರಯತ್ನ ಪಶ್ಚಿಮದಲ್ಲಿ ಅಷ್ಟು ಯಶಸ್ವಿಯಾದಂತೆ ಕಾಣುವುದಿಲ್ಲ.

ಆಧುನಿಕ ಯುಗದಲ್ಲಿ ಮಹಾಕಾವ್ಯವು ಕಾದಂಬರಿಯ ರೂಪದಲ್ಲಿ ಮೈದಾಳುವ ಅಚ್ಚರಿಯನ್ನು ಮದುಮಗಳು ತೋರುತ್ತದೆ. ಇಂಥ ಒಂದು ಸಾಧ್ಯತೆಯನ್ನು ಟಾಲ್ಸ್‌ಟಾಯ್ ಮುಖಾಂತರ ಕುವೆಂಪು ಗ್ರಹಿಸಿರಬಹುದು. ನಿರೂಪಣೆಯ ಗದ್ಯ ಎಷ್ಟು ಗಹನವಾಗಿ ಇರಬಹುದು ಅನ್ನುವುದನ್ನು ಹಾರ್ಡಿಯ ಕೃತಿಗಳಲ್ಲಿ ಕಂಡಿರಬಹುದು. ಆದರೆ ಕುವೆಂಪು ಅವರ ದರ್ಶನ ಪಶ್ಚಿಮದ ಯಾವ ಸಿದ್ಧಾಂತದ ನಕಲೂ ಅಲ್ಲ. ಕನ್ನಡದ ಹಳೆಯ ಕೃತಿಗಳು, ಕುವೆಂಪು ಸಮಕಾಲೀನ ಗದ್ಯ ಕಥನ ಇವುಗಳೊಂದಿಗೆ ಮದುಮಗಳನ್ನು ಗಂಭೀರವಾಗಿ, ಗಹನವಾಗಿ ಪರಿಶೀಲಿಸಿದರೆ ಕನ್ನಡ ಸಾಹಿತ್ಯದ ಗತ ಮತ್ತು ಆಧುನಿಕ ಭಾರತದ ವಾಸ್ತವ ಇವುಗಳ ಪರಿಶೀಲನೆಯನ್ನು ಕುವೆಂಪು ಎಷ್ಟು ಗಂಭೀರವಾಗಿ ಮಾಡಿದ್ದಾರೆ ಅನ್ನುವುದು ತಿಳಿಯುತ್ತದೆ. ಅಂಥ ಅಧ್ಯಯನ ನಡೆಯುವುದು ತೀರ ಅಗತ್ಯ.



**(ಸದ್ಯ ಮೈಸೂರಿನಲ್ಲಿ ನೆಲೆಸಿರುವ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಓ. ಎಲ್ ನಾಗಭೂಷಣ ಸ್ವಾಮಿ ಕನ್ನಡದ ಪ್ರಮುಖ ಸಾಹಿತ್ಯ ಚಿಂತಕರು ಮತ್ತು ಅನುವಾದಕರು.)**

## ನವಿಲುಗರಿ



### ಮದುಮಗಳು

ಈ ದಿನದ ಬೆಳಗ
ಬೆಳ್ಳಕ್ಕಿ ರೆಕ್ಕೆ ಬಡಿತ ಇನ್ನೂ ಬೆಳಕು ಮಾಡಿ,
ಮರೆಯಾದ ಬಣ್ಣಗಳು ಮೇಲೆದ್ದು
ಮೈಮುರಿದು ದಿಬ್ಬಣಕೆ ಸಜ್ಜಾಗಿ
ನೇಸರಿನ ಕೋಡಿ ಕೈ ನಿನ್ನ ಬೈತಲೆಗೆ ಸಿಂಧೂರ ಇರಿಸಿ,
ಮರದಲ್ಲು ಗಿಡದಲ್ಲು ಹಣ್ಣು ಹಣ್ಣೋ ಹಣ್ಣು
ಏನೂ ತೀರುವುದಿಲ್ಲ,
ತೀರಿಹೋದದ್ದೂ ತೀರುವುದಿಲ್ಲ ಈವೊತ್ತು
ಕೂತು ಯಥೇಚ್ಚ ಉಣ್ಣು ಹಕ್ಕಿ:

ಆಹ! ಎಂಥ ದೈವವೊ ಕಾಣೆ
ಅದು ಮೈಯಲ್ಲ, ಮೊಗ್ಗೊಳಗಿಂದ ಮೈಮುರಿದೆದ್ದ ತಂಗಾ
ನನ್ನೊಡಲು ಅದರ ಸ್ಪರ್ಶಪಡೆದು
ಇರೋ ಮೈಯ ತೊರೆದು
ಹೊಸ ಮೈಯ ಪಡೆದು ಪಡೆದು,
ಏನೂ ತೀರುವುದಿಲ್ಲ
ತೀರಿಹೋದದ್ದೂ ತೀರುವುದಿಲ್ಲ ಈವೊತ್ತು
ಯಥೇಚ್ಚ ಮುಟ್ಟಿ ಮುಟ್ಟಿ
ನಿನ್ನ ಜನ್ಮಜನ್ಮದ ಪೊರೆ ಕಳಚು ಹಕ್ಕಿ:





ಚಿತ್ರಗಳು: ವಿಜಯಶ್ರೀ ಹಾಲಾಡಿ

ಯಾರೋ ಗೊತ್ತಿಲ್ಲ
ಬಂದದ್ದು ಹೇಗೋ
ಬೆಸುಗೆ ಎನಿಸದ ಹಾಗೆ ಬೆರೆತು ಹೋಗಿ
ಸಾಕಾರ ನಾಕಾರ ಎಲ್ಲ ಅಳಿದು,
ಆ ನನಸಿನ ಬಿರುಸಿಗೆ ಕಾಲ
ಹಿಂಗಾನಿ ಮುಂಗಾನಿ ಲಾಗ ಹೊಡೆದು
ಬಾಳಿಸಲು ಬೇರೆ ಯಾರುಂಟು ತೇನವಿನ ನನಗೆ!
ಏನು ತೀರುವುದಿಲ್ಲ
ತೀರಿಹೋದದ್ದೂ ತೀರುವುದಿಲ್ಲ ಈವೊತ್ತು
ಅಷ್ಟಗಳಕ್ಕು ರೆಕ್ಕೆ ಹರಡಿ
ತಿರೆಯೇ ತೀರುವ ಹಾಗೆ ಹಾರಾಡು ಹಕ್ಕಿ:
ಎದೆಯ ದನಿ ದಾರಿಗೆಡದಂತೆ ಮಂತರವ ತಡೆದು
ಅರಿಸಿನದ ಕೊನೆಯ ಮೊನೆಯಲ್ಲಿ ಬಾಳ ನಿಲಿಸಿ,
ಕರುಳ ಗೆಜ್ಜೆಯ ಕಿಂಕಿಣಿಗೆ ತೊಟ್ಟಿಲು ನಲಿದು,
ನಿನ್ನ ಜೀವದ ಕುಡಿ ಬೀಜವನೆ ಕಹಿ ಮಾಡಿ ನನ್ನೊಳಗಿರಿಸಿ
ನಿನ್ನ ಅಧರ ಚುಂಬನದಲ್ಲಿ ಒಸರೊ ಮಕರಂದವನು
ಆ ಬೀಜಕಂದನ ಸುತ್ತಲಿರಿಸಿ
ಕರುಳಬಳ್ಳಿಯ ದಾಟಿಸುತ್ತಿದ್ದೀಯೆ
ಜನ್ಮ ಜನ್ಮಗಳಲ್ಲು ಸಂಚು ಮಾಡಿ:

ಏನು ತೀರುವುದಿಲ್ಲ
ತೀರಿಹೋದದ್ದೂ ತೀರುವುದಿಲ್ಲ ಈವೊತ್ತು
ಯಥೇಚ್ಚ ಕೂತು ಕಾವು ಕೊಡು ಹಕ್ಕಿ:

ಈ ಹಾಡ ಈವೊತ್ತು ಹಕ್ಕಿ ಹಾಡಿದ್ದಕ್ಕೆ
ಎಲ್ಲ ಜಡ ಮೈಯೊಳಗು ಜೀವ ಜುಮ್ಮೆಂದು ಚಿಮ್ಮಿ
ಎಲ್ಲೆಲ್ಲು ನಾವೇನೆ: ಈ ಹಾಡೊಳಗು ಆ ನೀರ ತೆರೆಯೊಳಗು.
ಅದೋ, ಬಾನ ಬೆರಳಂತೆ ತೂಗಾಡಿ
ಥಟಗನೆ ನೀರಲ್ಲಿ ಕೊಕ್ಕನಿಕ್ಕಿದ ಮಿಂಚುಳ್ಳಿ
ಅದರ ಹಸಿವೊಳಗು ನಾವೇನೆ
ಅದರ ಕೊಕ್ಕಲ್ಲಿ ವಿಲವಿಲನಿಂತ ಆ ಮೀನಕಣ್ಣೊಳಗೂನೂ:



ಏನೂ ತೀರುವುದಿಲ್ಲ
ತೀರಿಹೋದದ್ದೂ ತೀರುವುದಿಲ್ಲ ಈವೊತ್ತು
ಕೂತು ಯಥೇಚ್ಚ ಉಣ್ಣು ಹಕ್ಕಿ.

**-ರಾಮು,** ಮೈಸೂರು
('ರಾಮು ಕವಿತೆಗಳು' ಸಂಗ್ರಹದಿಂದ)

### ಎರಡು ಕವನಗಳು

#### ೧. ಆತ್ಮದ ತೋಳುಗಳ ಚಾಚಿರುವೆ



ಕಾಡ ಸದ್ದಿಗೆ-ಘಮಲಿಗೆ
ಮಿದು ಪರಾಗ ನಿನ್ನ ಬೆರಳು

ಮಿಂಚು ಹುಳ ಸುಡುವುದಿಲ್ಲ
ದೀಪಕ್ಕೆ ಮತ್ತು ಇರುಳಿಗೆ
ಸುಟ್ಟ ಪತಂಗದ ಅರಿವಿಲ್ಲ

ತುಟಿಗಳಿಂದ ಕರೆದಿದ್ದರೆ
ನಿರಾಕರಿಸಿ ನಡೆಯುತ್ತಿದ್ದೆ
ಆತ್ಮದ ತೋಳುಗಳ ಚಾಚಿರುವೆ

ಕತ್ತಲಲ್ಲಿ ಕಲ್ಲು ಮುಳ್ಳುಗಳ
ಲೆಕ್ಕಿಸದೆ ಧಾವಿಸುತ್ತಿರುವೆ
ಬೆಸೆದುಕೋ ಮಿದು ಕೈಗಳ

ಹಸಿ ಎಲೆಗಳ ಕಿತ್ತು
ಮಾಗಿಸುವ ಸಂಚುಗಳಿರಲಿ
ಒಣ ತರಗೆಲೆಗಳೇ ಪ್ರಿಯ ನನಗೆ

ಬಾಯಾರಿದ್ದೇನೆ ಕುಡಿದುಬಿಡು
ನಿಂತೇಹೋಗಲಿ ಸಮಯ..

#### ೨. ಬದುಕಚೂರು

ಬೇಸಗೆಯ ಬಿಸಿಗೆ
ನಿಟ್ಟುಸಿರಿಟ್ಟ ಮರಗಳು
ಗವ್ವನೆ ಹಾರಿದ ಇರುಳ ಹಕ್ಕಿಗಳು
ಬಾನಾಚೆ ಕರೆವ ಟಿಟ್ಟಿಭಗಳು..

ಚಂದ್ರನಿಗೊಂದು ಸುತ್ತು ಬರುವಂತೆ
ಗುಡಿಸಿಟ್ಟ ಅಂಗಳವನ್ನೆಲ್ಲ
ಮೂಸಿ ಮಲಗಿದ ಬೀರಿಬೆಕ್ಕು
ಬಾಗಾಳ್ ಹೂವಿನ ಪರಿಮಳ
ಉಸಿರಾಡಿದ ನೀರು ಗಾಳಿ ಮಣ್ಣು..

ನಸುಕಿನ ಜಾವಕ್ಕೆದ್ದು ಸಂಡಿಗೆ
ಹಪ್ಪಳವನೆಲ್ಲ ಸೂರ್ಯನ ಕಾವಲಿಗೆ
ಸುರಿದು ಸೆರಗೊರೆಸಿಕೊಂಡ ಅಮ್ಮ
ಕಾಬಾಳೆ ಗಿಡಕ್ಕೆ ನೀರುಣಿಸುತ್ತ
ಮಳೆಗಾಲಕ್ಕೆ ದಿನಗಳೆಣಿಸುವ ಅವಳು
ಮಿಸುಕಾಡದೆ ಮೌನ ಹೊದ್ದು ಮಲಗಿದ
ಕರಿ ಬಿಳಿ ಸೆಕೆ ಮೋಡಗಳು..

ಅಂಗಾಲ ಕೆಂಪಿಗೆ ಬಿಳಿಗೆಜ್ಜೆ ಕುಣಿಸುತ್ತ
ತೊದಲು ಪಾದವಿಟ್ಟು ಬಳಿಬಂದ ಮಗು
ನೆಲದಿಂದ ಹೆಕ್ಕಿ ಕೈಗೆ ಹಾಕಿದ
ಕಲ್ಲುಹರಳು – ಬದುಕಚೂರು..!

**–ವಿಜಯಶ್ರೀ ಹಾಲಾಡಿ**

## ತಿಂಗಳ ಸಾಂಸ್ಕೃತಿಕ ಟಿಪ್ಪಣಿಗಳು

# ರಂಗಗ್ರಾಮ ಬನವಾಸಿಯ ಭಂಗ, ಗುರು ಗೌರವ ಇತ್ಯಾದಿ

### ಶೇಷಗಿರಿ ಎಂಬ ರಂಗಗ್ರಾಮ



**ನಾ**ನು ಇತ್ತೀಚೆಗೆ ಶೇಷಗಿರಿ ಎಂಬ ಹಳ್ಳಿಗೆ ಹೋಗಿದ್ದೆ. ಅದು ಶಿವಮೊಗ್ಗದ ಉತ್ತರ ಗಡಿಯಾಚೆ ಸ್ವಲ್ಪ ದೂರದಲ್ಲಿರುವ ಒಂದು ಕುಗ್ರಾಮ. ಆದರೆ ಅಲ್ಲಿನ ಕೆಲವಾದರೂ ಮನೆಗಳ ಲಕ್ಷಣಗಳನ್ನು ನೋಡಿದರೆ ಪುರಾತನವಾದದ್ದೆಂದು ತೋರುವ ಒಂದು ಸುಸಂಸ್ಕೃತ ಗ್ರಾಮ. ಅಲ್ಲಿಗೆ ನಾನು ಹೋದದ್ದು ಗಾಂಧಿಯವರ ನೂರೈವತ್ತನೇ ಜನ್ಮೋತ್ಸವದ ಅಂಗವಾಗಿ ಗಾಂಧಿ ಬದುಕು ಕುರಿತಂತೆ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ ಆಯೋಜಿಸಿರುವ ರಾಜ್ಯ ಮಟ್ಟದ ನಾಟಕ ಯಾತ್ರೆಗಾಗಿ ನಡೆದಿರುವ ನಾಟಕ ತರಬೇತಿ ಶಿಬಿರದಲ್ಲಿ ಗಾಂಧಿ ಬಗ್ಗೆ ಮಾತಾಡಲು ಆಹ್ವಾನಿತನಾಗಿ. ನಾನು ಹೆಸರು ಕೇಳದ ಆ ಕುಗ್ರಾಮವನ್ನೇಕೆ ಈ ಶಿಬಿರಕ್ಕೆ ಆಯ್ದುಕೊಂಡರು ಎಂಬ ಕುತೂಹಲದಿಂದಲೇ ಅಲ್ಲಿಗೆ ಹೋಗಿ ನೋಡಿದಾಗ ನನ್ನ ಕುತೂಹಲಕ್ಕೆ ಉತ್ತರವೆಂಬಂತೆ ನನ್ನ ಕಣ್ಣುಗಳನ್ನು ನಾನೇ ನಂಬಂದಂತೆ ಎದುರಾದದ್ದು ಅಲ್ಲಿನ ಒಂದು ಸುಸಜ್ಜಿತ ಭವ್ಯ ರಂಗಮಂದಿರ!



ಅದೊಂದು ಸಾವಿರದೈನೂರು ಜನಸಂಖ್ಯೆಯ ಮೂಲೆಯ ಗ್ರಾಮ. ಅಲ್ಲಿ ಇಂತಹ ರಂಗಮಂದಿರವೊಂದು ನಿರ್ಮಾಣವಾದ ಕಥೆ ನಿಜಕ್ಕೂ ನಮ್ಮ ಗ್ರಾಮಭಾರತದ ಸತ್ವ ಇನ್ನೂ ಆರಿಲ್ಲ ಎಂಬ ನಂಬಿಕೆಯನ್ನು ಪುಷ್ಟೀಕರಿಸುವಂತಿದೆ. ಅಲ್ಲಿನ ಅಂಚೆ ಮಾಸ್ತರು ಪ್ರಭು ಗುರಪ್ಪನವರ್ ಅವರ ನೇತೃತ್ವದಲ್ಲಿ ಗ್ರಾಮದ ರಂಗಾಸಕ್ತರೆಲ್ಲ ಸೇರಿ ಅದರ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ಮೊದಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಐ.ಎಂ. ವಿಠಲಮೂರ್ತಿಯವರು ಇಲ್ಲಿನ ರಂಗಾಸಕ್ತರ ಉತ್ಸಾಹ ಮತ್ತು ಪ್ರತಿಭೆಯನ್ನು ಮಾನ್ಯ ಮಾಡಿ ೨೫ ಸಾವಿರ ರೂ.ಗಳ ಅನುದಾನ ನೀಡಿದರಂತೆ. ನಂತರ ನಾಟಕ ಪ್ರಿಯರಾದ ಹಾವೇರಿ ಲೋಕಸಭಾ ಸದಸ್ಯ ಸಿ.ಎಂ. ಉದಾಸಿಯವರು ತಮ್ಮ ಸಂಸದರ ನಿಧಿಯಿಂದ ೭೫ ಲಕ್ಷ ರೂ. ಗಳನ್ನು ನೀಡಿದರಂತೆ. ಜನರ ಪಾಲಿನ ದೇಣಿಗೆ ಹಣವೂ ಸೇರಿ ಯಾವುದೇ ನಗರದ ಜನತೆಯೂ ಈರ್ಷ್ಯೆ ಪಡಬಹುದಾದಂತಹ ರಂಗಮಂದಿರವೊಂದು ಅಲ್ಲಿ ತಲೆ ಎತ್ತಿ ನಿಂತಿದೆ. ಉದಾಸಿಯವರು ಈಗಲೂ ಬಂದು ಅಲ್ಲಿ ನಡೆಯುವ ನಾಟಕಗಳನ್ನು ಎಲ್ಲೋ ಮೂಲೆಯಲ್ಲಿ ಕೂತು ನೋಡಿ ಹೋಗುವರಂತೆ. ನಿಜವಾದ ಜನಪ್ರತಿನಿಧಿಯೊಬ್ಬರ ಲಕ್ಷಣ ಇದು!



ಈಗ ಈ ಊರು ರಾಜ್ಯದ ಮೂಲೆ ಮೂಲೆಯ ರಂಗಾಸಕ್ತರ ಗಮನ ಸೆಳೆದಿದೆ. ಇಲ್ಲಿ ಇತ್ತೀಚೆಗೆ ರಾಜ್ಯಾದ್ಯಂತ ಹೆಸರು ಮಾಡಿದ ' 'ವಾಲಿ ವಧೆ' ಮತ್ತು 'ಉಷಾ ಹರಣ' ರಂಗ ಪ್ರಯೋಗಗಳೂ ಸೇರಿದಂತೆ ಹಲವು ರಂಗ ಸಾಹಸಗಳು ನಡೆದಿವೆ. ಗಾಂಧಿ ನಾಟಕದ ನಿರ್ದೇಶಕ ಶ್ರೀಪಾದ ಭಟ್ ಈ ಊರನ್ನು ತಮ್ಮ ರಂಗಪ್ರಯೋಗಗಳ ನೆಲೆಯನ್ನಾಗಿ ಮಾಡಿಕೊಂಡಿದ್ದಾರೆ. ಕಾರಣ ಇಲ್ಲಿ ರಂಗ ಪ್ರತಿಭೆ ಸಮೃದ್ಧವಾಗಿದೆ. ಅವರಿಗೆ ಒತ್ತಾಸೆಯಾಗಿ ನಿಂತವರು ಪ್ರಭು ಗುರಪ್ಪನವರ. ಗುರುಪ್ಪನವರು ತಮ್ಮ ನೌಕರಿಯ ಬಡ್ತಿ ಅವಕಾಶಗಳನ್ನೆಲ್ಲ ತ್ಯಾಗ ಮಾಡಿ ಈ ಊರಿನಲ್ಲೇ ಉಳಿದಿದ್ದಾರೆ.

ಅಂದು ನನಗೆ ಗಾಂಧಿ ಬಗ್ಗೆ ಮಾತಾಡಿದ್ದಕ್ಕಿಂತ ಹೆಚ್ಚಿನ ಸಾರ್ಥಕತೆ ಈ ರಂಗಮಂದಿರ ನೋಡಿದ್ದರಿಂದ ಉಂಟಾಯಿತೆಂದೇ ಹೇಳಬೇಕು. ಶ್ರೀಪಾದ ಭಟ್ ಮತ್ತು ಪ್ರಭು ಗುರಪ್ಪನವರ ಮೂಲಕ ನಾನು ಆ ಊರಿನ ಜನರನ್ನೆಲ್ಲ ಅಭಿನಂದಿಸಿದೆ ಎಂದು ಭಾವಿಸಿದ್ದೇನೆ. ಅಂದ ಹಾಗೆ ಬೊಳುವಾರರ 'ಪಾಪು ಗಾಂಧಿ ಬಾಪು ಗಾಂಧಿ ಆದ ಕಥೆ' ಕೃತಿಯನ್ನಾಧರಿಸಿದ 'ಪಾಪು ಬಾಪು' ಎಂಬ ಈ ನಾಟಕ ಈಗ ಪ್ರದರ್ಶನಕ್ಕಾಗಿ ಮೂರು ತಂಡಗಳಾಗಿ ರಾಜ್ಯಾದ್ಯಂತ ಯಾತ್ರೆ ಹೊರಟಿದೆ. ನಿಮ್ಮೂರಿಗೆ ಬರಬಹುದು. ಎದುರುಗೊಳ್ಳಲು ಸಿದ್ಧರಾಗಿ.

### ಬೆಂಗಾಡಾಗಿರುವ ಬನವಾಸಿ ನಾಡು



ನಾನು ಶೇಷಗಿರಿಗೆ ಹೋಗುವಾಗ ಸಾಗರ-ಸೊರಬ-ಆನವಟ್ಟಿ ಮಾರ್ಗವಾಗಿ ಹೋದೆ. ಒಂದು ಕಾಲದ ಬನವಾಸಿ ನಾಡದು. ಈಗಲೂ ವರದಾ ನದಿಯ ತಟದ ಆ ಪ್ರದೇಶ ಸಾಕಷ್ಟು ಹಸಿರು ಮತ್ತು ಜಲದ ತಂಪಿನಿಂದ ಆಹ್ಲಾದಕರವಾಗಿಯೇ ಉಳಿದಿದೆ. ಆದರೆ ನಾನು ಅಲ್ಲಿಂದ ಹಿಂತಿರುಗುವಾಗ ರಸ್ತೆ ಚೆನ್ನಾಗಿದೆ ಎಂಬ ಕಾರಣಕ್ಕೆ ಆನವಟ್ಟಿ-ತಾಳಗುಂದ-ಬಳ್ಳಿಗಾವೆ-ಶಿರಾಳಕೊಪ್ಪ-ಉಡುತಡಿ-ಶಿಕಾರಿಪುರ-ಸವಳಂಗ ಮಾರ್ಗದಲ್ಲಿ ಬಂದೆ. ಆದರೆ ಬನವಾಸಿ ನಾಡಿನ ಭಾಗವೇ ಆಗಿ ಇಪ್ಪತ್ತು ವರ್ಷಗಳ ಹಿಂದಷ್ಟೇ ನಾನು ಕಣ್ಣಾರೆ ನೋಡಿದ್ದ ವೈವಿಧ್ಯಮಯ ವೃಕ್ಷರಾಶಿಯ ಸುಂದರ ಕಾಡು ಮತ್ತು ತಿರುಗಿದಲ್ಲೆಲ್ಲ ಕಾಣುತ್ತಿದ್ದ ತಾವರೆ ಕೊಳಗಳಿಂದ ಕಂಗೊಳಿಸುತ್ತಿದ್ದ ಈ ಪ್ರದೇಶವೀಗ ಬೆಂಗಾಡಾಗಿ ಹೋಗಿದೆ. ಈ ಪ್ರದೇಶವನ್ನು ಸೀಳಿ ಹೋಗಿರುವ, ಕೂತವರ ಕುಂಡೆಗಳು ಮತ್ತು ಕುಡಿದ ನೀರು ಅಲ್ಲಾಡದಂತಹ ಸುಖ ಪ್ರಯಾಣಕ್ಕಾಗಿ ಸಿದ್ಧಪಡಿಸಲಾಗಿರುವ ರಸ್ತೆಯ ಅಭಿವೃದ್ಧಿಯೇ ಇದಕ್ಕೆ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ! ನೆರಳಿನ ನೆಪಕ್ಕಾಗಿಯೂ ರಸ್ತೆ ಪಕ್ಕ ಒಂದು ಮರವನ್ನೂ ಉಳಿಸದೆ ಕಡಿದು ಹಾಕಲಾಗಿದೆ. ಎಂತಹ ಕ್ರೌರ್ಯ!

ಈ ಪ್ರದೇಶವನ್ನು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಆಳುತ್ತಿರುವ ಯಡಿಯೂರಪ್ಪನವರ ಕುಟುಂಬಕ್ಕೆ ತಾನೆಂತಹ ಅದ್ಭುತ ಸಾಂಸ್ಕೃತಿಕ ಇತಿಹಾಸವುಳ್ಳ ಸೀಮೆಯೊಂದರ ರಾಜಕೀಯ ವಾರಸುದಾರನಾಗಿದ್ದೇನೆ ಎಂಬ ಎದರೇ ಇಲ್ಲವೆಂದು ಕಾಣುತ್ತದೆ. ಕಾಡನ್ನು ನಾಡಾಗಿ ಪರಿವರ್ತಿಸಿ ಹಣ ಉತ್ಪತ್ತಿ ಮಾಡುವುದೇ ಅಭಿವೃದ್ಧಿ ಎಂದೂ, ಅದೇ ರಾಜಕಾರಣವೆಂದೂ ಅದು ತಿಳಿದುಕೊಂಡಂತಿದೆ. ಇದು ಈ ಕುಟುಂಬದ ಮಾತ್ರವಲ್ಲ, ಎಲ್ಲ ರಾಜಕೀಯ ಕುಟುಂಬಗಳ ಕಥೆಯೂ ಆಗಿರುವುದೇ ಇಂದಿನ ದುರಂತ. ಹೇಗೂ ಎತ್ತ ನೋಡಿದರೂ ನಾವೀಗ ಆಳಲ್ಪಡುವ ಖಂಡನೆಗೆ ಒಳಗಾಗಿರುವುದು ಕುಟುಂಬಗಳಿಂದಲೇ ತಾನೇ?

### ಗುರುವಿಗೊಂದು ಗೌರವ ಗ್ರಂಥ



ಈ ಪುಸ್ತಕದ ಬಗ್ಗೆ ಆ ಹಿಂದೆಯೇ ಬರೆಯಬೇಕಿತ್ತು. ಆಗಲಿಲ್ಲ. ಇದು ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಈಗ ನಿವೃತ್ತರಾಗಿರುವ ಮಿತ್ರ ಎಂ.ಜಿ. ಚಂದ್ರಶೇಖರಯ್ಯನವರಿಗೆ ಅವರ ಅಭಿಮಾನಿ ವಿದ್ಯಾರ್ಥಿಗಳು ಅರ್ಪಿಸಿರುವ ಗೌರವ ಗ್ರಂಥ 'ಕನಸುಗಳಿಗೆ ರೆಕ್ಕೆ ಕಟ್ಟಿ'. ಅಧ್ಯಾಪನ ವೃತ್ತಿಯ ಎಲ್ಲ ಗೌರವವೂ ನಮ್ಮ ಶಿಕ್ಷಣ ವ್ಯವಸ್ಥೆಯ ಹಲವು ಅಧ್ವಾನಗಳಿಂದಲೂ ಮತ್ತು ಸ್ವತಃ ಅಧ್ಯಾಪಕರ ಗುಣಮಟ್ಟದ ಸರ್ವ ರೀತಿಯ ಅವನತಿಯಿಂದಲೂ ಚಿಂದಿ ಚಿಂದಿಯಾಗುತ್ತಿರುವ ಇವೊತ್ತಿನ ದುರಂತ ಸ್ಥಿತಿಯ ಮಧ್ಯೆ ಇಂತಹ ಪುಸ್ತಕಗಳು ಓಯಸಿಸ್‌ನಂತೆ ಮನಕ್ಕೆ ತಂಪು ನೀಡುತ್ತವೆ.



ಅಧ್ಯಾಪಕರೆಂದರೆ ಬರೀ ಅಧ್ಯಾಪನವಲ್ಲ; ಅವರು ವಿದ್ಯಾರ್ಥಿ ಸಮೂಹದ ಬದುಕಿನ ಎಲ್ಲ ಸಾಧ್ಯ ಬದಿಗಳನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತಾ, ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ ಅದನ್ನು ರೂಪಿಸುವ ಮಾರ್ಗದರ್ಶಕರೂ ಕೂಡ. ಹಲವು ಬಡ ಮತ್ತು ಹಾದಿ ತಪ್ಪಿದ ಎಳೆಯರಿಗೆ ನೆರವು-ಮಾರ್ಗದರ್ಶನ ನೀಡಿ, ಅವರಲ್ಲಿನ ಸುಪ್ತ ಪ್ರತಿಭೆಗಳನ್ನು ಹೊರ ಹೊಮ್ಮಿಸುವಂತಹ, ಒಂದು ಕಾಲದ ಶ್ರೇಷ್ಠ ಗುರು ಸಂಪ್ರದಾಯವನ್ನು ಮಿತ್ರ ಚಂದ್ರಶೇಖರಯ್ಯ ಪಾಲಿಸಿಕೊಂಡ ಬಂದ ಹಲವು ಘಟನೆ-ವಿವರಗಳನ್ನು ಅವರ ಶಿಷ್ಯರೇ ಇಲ್ಲಿ ಪ್ರಸ್ತುತ ಪಡಿಸಿದ್ದಾರೆ. ಈ ಪುಸ್ತಕ ತಮ್ಮ ವೃತ್ತಿಯ ಆದರ್ಶಪರತೆಯನ್ನು ಇನ್ನೂ ಪೂರ್ತಿ ಆರದಂತೆ ಕಾಪಾಡಿಕೊಂಡಿರುವ ಅಧ್ಯಾಪಕರಿಗೆ ಸ್ಫೂರ್ತಿ ನೀಡಬಹುದು. ಆದರೆ ಇಂತಹ ಗ್ರಂಥಗಳ ಉದಾತ್ತ ಉದ್ದೇಶವನ್ನೇ ವಿಚಲಿತಗೊಳಿಸುವಂತಹ ಶಿಕ್ಷಣ ಕುರಿತ ಪಂಡಿತ ಲೇಖನಗಳನ್ನೂ ಇದರಲ್ಲಿ ತುಂಬುವ ಚಪಲವಾದರೂ ಏಕೋ ತಿಳಿಯದಾಗಿದೆ!

**-ಡಿಎಸ್ಸೆನ್**

ಧರ್ಮ ವಿಚಾರ ಪುಟ

# ಕ್ರೈಸ್ತ ಧರ್ಮ ವಿಚಾರಗಳು



ಜನರ ಸೇವೆಯೇ ದೇವರನ್ನು ಮುಟ್ಟುವ ಶ್ರೇಷ್ಠ ಮಾರ್ಗವೆಂದು ಜಗತ್ತಿನಾದ್ಯಂತ ಬಡವರ, ದೀನದಲಿತರ; ರೋಗಿಗಳ ಸೇವೆಗೆ ತೊಡಗಿ ಎಲ್ಲ ಧರ್ಮಗಳ ಜನರ ಪ್ರೀತಿಗೆ ಪಾತ್ರವಾಗಿರುವ ಕ್ರೈಸ್ತ ಧರ್ಮದ ಮುಖ್ಯ ಉಪದೇಶವೇ ಪ್ರೀತಿ. ಅದು ದೇವರನ್ನು ಪ್ರೀತಿಯ ಪ್ರತೀಕ ಎಂದು ಸಾರುತ್ತದೆ ಮತ್ತು ಪ್ರತಿ ಮನುಷ್ಯನೂ ಪ್ರೀತಿಯ ಪ್ರತೀಕವಾಗಿ ಬಾಳಬೇಕೆಂದು ಸಾರುತ್ತದೆ. ಅದರ ಪ್ರಕಾರ ಮನುಷ್ಯನೊಳಗಿನ ಪ್ರೀತಿಯ ಶಕ್ತಿ ಭೂಮಿಯಲ್ಲಿನ ಉಪ್ಪಿದ್ದಂತೆ; ಅದರ ಸಾರಸರ್ವಸ್ವ.

ಇದನ್ನು ತನ್ನ ಬದುಕಿನ ಮೂಲಕವೇ ಸಾರಿದ ಇದರ ಸಂಸ್ಥಾಪಕ ಜೀಸಸ್(ಏಸು) ಒಂದು ಸಾವಿರ ವರ್ಷಗಳ ಹಿಂದೆ ಈಗಿನ ಇಸ್ರೇಲ್‌ನ ಬೆತ್ಲೆಹಾಂ ನಗರದದಲ್ಲಿ ಬಡಗಿ ಕುಟುಂಬದಲ್ಲಿ ಹುಟ್ಟಿದವನು. ಪಕ್ಕದ ನಜರೆತ್‌ನಲ್ಲಿ ಬೆಳೆದವನು. ಮುವ್ವತ್ತು ವರ್ಷಗಳ ಸಾಮಾನ್ಯ ಜೀವನದ ನಂತರ ದೇವರ ಸ್ವರೂಪದ ಬಗ್ಗೆ ಮಾತಾಡತೊಡಗಿ ತನ್ನನ್ನು ದೇವರ ಮಗ ಎಂದು ಕರೆದುಕೊಂಡು ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯ ವಿಷಮತೆಗಳ ಬಗ್ಗೆ ಮಾತಾಡತೊಡಗಿ ಯೆಹೂದ್ಯ ಪುರೋಹಿತಶಾಹಿ ಮತ್ತು ರೋಮನ್ ಸಾಮ್ರಾಜ್ಯದ ಅಧಿಪತಿಗಳ ಕೆಂಗಣ್ಣಿಗೆ ಗುರಿಯಾಗಿ ಜೆರುಸಲೇಂ ನಗರದಲ್ಲಿ ಶಿಲುಬೆಗೇರಿ ಕ್ರಿಸ್ತ(ಪ್ರವಾದಿಗಳ ಸಾಮ್ರಾಟ)ನಾದ ಮಹಾತ್ಮನೀತ. ಈ ಕ್ರಿಸ್ತ ತನ್ನ ಬಾಳುವೆಯಲ್ಲಿ ತನ್ನೂರಿನಿಂದ ೨೦೦-೩೦೦ ಮೈಲುಗಳಾಚೆ ಚಲಿಸದಿದ್ದರೂ ಆತನ ಧರ್ಮ ಬಲು ಶೀಘ್ರದಲ್ಲೇ ಜಗತ್ತಿನಾದ್ಯಂತ ಪಸರಿಸಿದ್ದರೆ ಅದಕ್ಕೆ ಕಾರಣ ಆತ ಬೋಧಿಸಿದ ಪರಸ್ಪರ ಪ್ರೀತಿಯ ತತ್ವ.. ಈ ತತ್ವವನ್ನು ವಿವರಿಸುವ ಕೆಲವು ಸೂಕ್ತಿಗಳು ಮತ್ತು ಒಂದು ಉಪಕಥೆ (ಸಾಮಿತಿ) ಇಲ್ಲಿದೆ-ಸಂ.

• ಈ ಭೂಮಿಗೆ ನೀವೇ ಉಪ್ಪು, ಉಪ್ಪೇ ಸಪ್ಪೆಯಾಗಿ ಬಿಟ್ಟರೆ ಅದಕ್ಕೆ ಇನ್ನಾವುದರಿಂದ ಪುನಃ ರುಚಿ ಬಂದಿತು? ಇನ್ನು ಅದು ಕೆಲಸಕ್ಕೆ ಬಾರದ ವಸ್ತು. ಜನರು ಅದನ್ನು ಆಚೆ ಬೀಸಾಡುತ್ತಾರೆ. ದಾರಿಗರು ಅದನ್ನು ತುಳಿದು ಬಿಡುತ್ತಾರಷ್ಟೆ.

• ಜಗತ್ತಿಗೆ ನೀವೇ ಬೆಳಕು. ಬೆಟ್ಟದ ಮೇಲಿನ ಪಟ್ಟಣವನ್ನು ಮುಚ್ಚಿಡಲಾಗದು. ಅಂತೆಯೇ ಯಾರೂ ದೀಪವನ್ನು ಹಚ್ಚಿ ಕೊಳಗದೊಳಗೆ ಬಚ್ಚಿಡುವುದಿಲ್ಲ. ಅದೇ ರೀತಿ ನಿಮ್ಮ ಬೆಳಕು ಜನರ ಮುಂದೆ ಬೆಳಗಲಿ; ಹೀಗೆ ಅವರು ನಿಮ್ಮ ಸತ್ಕಾರ್ಯಗಳನ್ನು ಕಂಡು ಸ್ವರ್ಗದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡಲಿ.

• ಬಲಿ ಪೀಠದ ಮುಂದೆ ದೇವರಿಗೆ ಕಾಣಿಕೆಯನ್ನು ಅರ್ಪಿಸಲಿರುವಾಗ, ನಿನ್ನ ಸೋದರನಿಗೆ ನಿನ್ನ ಮೇಲೆ ಏನೋ ಮನಸ್ತಾಪವಿದೆಯೆಂದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಬಲಿಪೀಠದ ಮುಂದೆಯೇ ಇಟ್ಟು ಬಿಡು. ಮೊದಲು ಹೋಗಿ ನಿನ್ನ ಸೋದರನೊಡನೆ ಸಮಾಧಾನ ಮಾಡಿಕೊ ಅನಂತರ ಬಂದು ನಿನ್ನ ಕಾಣಿಕೆಯನ್ನು ಒಪ್ಪಿಸು.

• ವ್ಯಭಿಚಾರ ಮಾಡಕೂಡದು ಎಂಬ ನಿಯಮವನ್ನು ನೀವು ಕೇಳಿದ್ದೀರಿ; ಆದರೆ ನಾನು ಹೇಳುತ್ತೇನೆ ಕೇಳಿ: ಪರಸ್ತ್ರೀಯನ್ನು ಕಾಮದೃಷ್ಟಿಯಿಂದ ನೋಡುವ ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ಆಕೆಯನ್ನು ಆಗಲೇ ವ್ಯಭಿಚಾರ ಮಾಡಿದವನೇ ಆಗುತ್ತಾನೆ. ನಿನ್ನ ಬಲಗಣ್ಣು ನಿನಗೆ ಪಾಪಕ್ಕೆ ಕಾರಣವಾದರೆ ಅದನ್ನು ಕಿತ್ತೆಸೆದು ಬಿಡು; ಇಡೀ ನಿನ್ನ ದೇಹ ನರಕಕ್ಕೆ ತುತ್ತಾಗುವುದಕ್ಕಿಂತ ನಿನ್ನ ಒಂದು ಅಂಗ ನಾಶವಾಗುವುದೇ ಲೇಸು. ನಿನ್ನ ಬಲಗೈ ನಿನಗೆ ಪಾಪಕ್ಕೆ ಕಾರಣವಾದರೆ ಅದನ್ನು ಕತ್ತರಿಸಿ ಹಾಕಿಬಿಡು; ನಿನ್ನ ಇಡಿ ದೇಹ ನರಕದ ಪಾಲಾಗುವುದಕ್ಕಿಂತ ಒಂದು ಅವಯವ ನಾಶವಾಗುವುದು ಮೇಲು.

• ನಿಮ್ಮ ವೈರಿಗಳನ್ನು ಪ್ರೀತಿಸಿರಿ: ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.

• ಧರ್ಮ ನೀಡುವಾಗ ನೀನು ಧರ್ಮ ಕೊಟ್ಟಿದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ.

• ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನೂ ಕ್ಷಮಿಸುವುದಿಲ್ಲ.

• ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು. ಹುಡುಕಿರಿ, ನಿಮಗೆ ಸಿಗುವುದು, ತಟ್ಟಿರಿ ನಿಮಗೆ ತೆರೆಯುವುದು.

• ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತಿರೋ ಅದನ್ನು ನೀವು ಅವರಿಗೆ ಮಾಡಿರಿ.

• ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು.

• ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ, ನಾಶಕ್ಕೆ ಹೋಗುವ ಬಾಗಿಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನರು. ನಿತ್ಯ ಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡು ಹಿಡಿಯುವವರು ಸ್ವಲ್ಪ ಜನ.

• ಈ ಪ್ರಾರ್ಥನೆ ಮಾಡುವಾಗ ಕಪಟಿಗಳಂತೆ ಮಾಡಬೇಡಿ; ಜನರು ನೋಡಲೆಂದು ಜನರು ಪ್ರಾರ್ಥನಾಮಂದಿರಗಳಲ್ಲೂ, ಬೀದಿಯ ಚೌಕಗಳಲ್ಲೂ ನಿಂತು ಪ್ರಾರ್ಥನೆ ಮಾಡಲು ಇಚ್ಛಿಸುತ್ತಾರೆ.ಅವರಿಗೆ ಬರಬೇಕಾದದ್ದು ಆಗಲೆ ಬಂದಾಯಿತ್ತೆಂದು ನಿಮಗೆ ಚೆನ್ನಾಗಿ ತಿಳಿದಿರಲಿ. ನೀನು ಪ್ರಾರ್ಥನೆ ಮಾಡುವಾಗ ನಿನ್ನ ಕೊಠಡಿಗೆ ಹೋಗು, ಬಾಗಿಲನ್ನು ಮುಚ್ಚು, ಅಂತರಂಗದಲ್ಲಿರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು. ಅಂತರಂಗದಲ್ಲಿ ನಡೆಯುವುದನ್ನು ನೋಡುವ ತಂದೆ ನಿನಗೆ ಪ್ರತಿಫಲವನ್ನು ಕೊಡುವನು.

*** ***

**ಕ್ರಿಸ್ತನ ಸಾಮತಿಗಳು:** ಜೀಸಸ್ ತನ್ನ ಉಪದೇಶಗಳನ್ನು ಕೆಲ ರೂಪಕಾರ್ಥದ ದೃಷ್ಟಾಂತ ಕಥೆಗಳ ಮೂಲಕ ಹೇಳುತ್ತಿದ್ದ. ಅಂತಹ ಒಂದು ಸಾಮಿತಿ ಇಲ್ಲಿದೆ: ಒಬ್ಬಶಾಸ್ತ್ರಜ್ಞನು ತನ್ನನ್ನು ತಾನು ಸಮರ್ಥಿಸಿಕೊಳ್ಳಲು "ನಿನ್ನ ನೆರೆಯವನು ಯಾರು?" ಎಂದು ಯೇಸುವನ್ನು ಪ್ರಶ್ನಿಸಿದನು. ಆಗ ಯೇಸು ಅವನಿಗೆ ಹೀಗೆಂದು ಹೇಳಿದನು.

"ಒಬ್ಬನು ಜೆರುಸಲೇಮಿನಿಂದ ಇಳಿದು ಜೆರಿಕೋವಿಗೆ ಪ್ರಯಾಣ ಮಾಡುತ್ತಿದ್ದಾಗ, ದರೋಡೆಕೋರರ ಕೈಗೆ ಸಿಕ್ಕಿಬಿದ್ದ. ದರೋಡೆಕಾರರು ಅವನನ್ನು ಸುಲಿಗೆ ಮಾಡಿ, ಹೊಡೆದು ಬಡಿದು, ಅರೇ ಜೀವ ಮಾಡಿ ಅಲ್ಲೇ ಬಿಟ್ಟು ಹೋದರು. ಅದೇ ಮಾರ್ಗವಾಗಿ ಒಬ್ಬ ಯಾಜಕನು ಹಾದು ಹೋಗಬೇಕಾಗಿ ಬಂದಿತು. ಈತನು ಆತನನ್ನು ಕಂಡದ್ದೆ ಆಚೆ ಬಳಸಿಕೊಂಡು ವಾರೆಯಾಗಿ ಹೋದ. ಹಾಗೆಯೇ ಲೇವಿಯೊಬ್ಬನು ಆ ಸ್ಥಳಕ್ಕೆ ಬಂದು ಅವನನ್ನು ನೋಡಿ ಹಾಗೆಯೆ ಬಳಸಿಕೊಂಡು ಹೋದನು. ಆದರೆ ಆ ಮಾರ್ಗವಾಗಿ ಒಬ್ಬ ಸಮಾರಿಯದವನು ಅಲ್ಲಿಗೆ ಬಂದಾಗ, ಅವನನ್ನು ನೋಡಿ ಕನಿಕರಪಟ್ಟು ಹತ್ತಿರ ಹೋಗಿ ಅವನ ಗಾಯಗಳಿಗೆ ಎಣ್ಣೆಯನ್ನು ದ್ರಾಕ್ಷಾರಸವನ್ನು ಹಚ್ಚಿ ಅವುಗಳಿಗೆ ಬಟ್ಟೆ ಕಟ್ಟಿದ. ಬಳಿಕ ಅವನನ್ನು ಪಶು ವಾಹನದ ಮೇಲೆ ಹತ್ತಿಸಿಕೊಂಡು ಒಂದು ಛತ್ರಕ್ಕೆ ಕರೆದುಕೊಂಡು ಹೋಗಿ ಆರೈಕೆ ಮಾಡಿದ. ಮಾರನೆ ದಿನ ಎರಡು ದಿನಾರಿ ನಾಣ್ಯಗಳನ್ನು ಛತ್ರದವನಿಗೆ ಕೊಟ್ಟು ಇವನನ್ನು ಚೆನ್ನಾಗಿ ನೋಡಿಕೊ, ಇದಕ್ಕಿಂತ ಹೆಚ್ಚು ವೆಚ್ಚ ಆದರೆ ನಾನು ಹಿಂದಿರುಗಿ ಬರುವಾಗ ಸಲ್ಲಿಸುತ್ತೇನೆ" ಎಂದ.

ದರೋಡೆಕಾರರ ಕೈಗೆ ಸಿಕ್ಕಿದವನಿಗೆ ಈ ಮೂವರಲ್ಲಿ ಯಾರು ನೆರೆಯವನೆಂದು ನಿನಗೆ ತೋರುತ್ತದೆ? ಅದಕ್ಕೆ ಅವನು "ದಯ ತೋರಿಸಿದವನೇ ನೆರೆಯವನು" ಎಂದನು. ಆಗ ಯೇಸು, "ಹೋಗು ನೀನು ಹಾಗೆಯೆ ಮಾಡು" ಅಂದನು ಎಂದು ಹೇಳಿದನು. *(ಲೂಕ ೧೦:೨೯:೩೭)*

(ಸೂಕ್ತಿ ಮತ್ತು ಸಾಮಿತಿ ನಿರೂಪಣೆ: **ವಿಲಿಯಂ, ಸಾಗರ**)

## ಪುಸ್ತಕಾವಲೋಕನ

ಪು : **ಅನುದಿನದ ದಂದುಗ** ಲೇ: **ವಿನಯಾ ಒಕ್ಕುಂದ** ಪ್ರ: **ಪ್ರಗತಿ ಪ್ರಕಾಶನ,** ಮೈಸೂರು ಪು: **೨೨೦** ಬೆಲೆ: **ರೂ. ೧೬೦/-**

### ಸುಣ್ಣಕ್ಕೆ ಬೆರೆಸಿದ ತಣ್ಣನೆಯ ನೀರು




ಇಂದಿನ ಬದುಕನ್ನು ಗಾಢವಾಗಿ ಕಲುಕುತ್ತಿರುವ ಅಂಶ ಯಾವುದು? ಬಹುಶಃ ಇದು ಯಾರಿಗೂ ಸ್ಪಷ್ಟವಿರದ ಕಾಲವಿದು. ಎಲ್ಲ ಕ್ಷೇಮವಾಗಿದ್ದಾರೆ, ನಾವು ಮಾತ್ರ ಕನಲುತ್ತಿದ್ದೇವೇನೋ ಎಂದು ನಮ್ಮ ಬಗ್ಗೆ ನಮಗೇ ಸಂಶಯ ಬರುವ ಕಾಲವೂ ಹೌದು. ಶ್ರೀಮಂತರ ಮನೆಯ ಮಕ್ಕಳ ಮದುವೆ ಕಾಗದಕ್ಕೇ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದನ್ನು ಸಂಭ್ರಮಿಸುವವರ ನಡುವೆ ಅದೆಲ್ಲ ಸರಿಯಲ್ಲ ಎಂದೇನಾದರೂ ನಾವುಗಳು ಹೇಳಿದರೆ ಇವರಿಗೆ ಎಲ್ಲದರಲ್ಲೂ ಹುಳುಕೇ ಕಾಣುವುದು ಎಂಬ ಗೊಣಗುವಿಕೆ ಕೇಳಿಸುತ್ತದೆ. ಯಾಕೆಂದರೆ, ಬಡವರೂ ಕೂಡ ಆ ಮದುವೆ ಕಾಗದ ನೋಡಿ 'ಸೂಪರ್' ಎಂದು ಸರ್ಟಿಫಿಕೇಟ್ ಕೊಡುತ್ತಾ ಕಣ್ಣುಗಳಲ್ಲಿ ಕನಸುಗಳನ್ನು ತುಳುಕಿ ಬಿಡುತ್ತಿರುತ್ತಾರೆ. ಅಂದರೆ, ನಮ್ಮ ಕನಸುಗಳನ್ನೇ ಹೈಜಾಕ್ ಮಾಡಲಾಗಿದೆ ಎಂದೇ ಅರ್ಥ. ತರಗತಿಯಲ್ಲೊಮ್ಮೆ ಸರಳ ವಿವಾಹದ ಕುರಿತ ಕವಿತೆಯೊಂದನ್ನು ಓದಿದಾಗ ಒಬ್ಬಳು ಹುಡುಗಿ ಮುಖ ಹುಳ್ಳಗೆ ಮಾಡಿಕೊಂಡಳು. ಯಾಕಮ್ಮಾ? ಎಂದು ಕೇಳಿದಾಗ, 'ಹೋಗಿ ಮೇಡಂ, ನಾನಂಥೂ ಗ್ರ್ಯಾಂಡ್ ಆಗಿ ಮದುವೆ ಆಗಬೇಕು' ಅಂದಳು. ಅವಳು ಕೆಳ ಮಧ್ಯಮ ವರ್ಗಕ್ಕೆ ಸೇರಿದ ಹೆಣ್ಣುಮಗಳು. ಈ ರೀತಿ ಕನಸುಗಳನ್ನು ಬದಲಿಸುವಲ್ಲಿ ದೃಶ್ಯ ಮಾಧ್ಯಮಗಳ ಪಾತ್ರ ಬಹಳ ಹಿರಿದು. ನಾವು ದಿನ ಬೆಳಗಾದರೆ ಮನಸ್ಥಿತಿಯ ಬದಲಾವಣೆಯ ಕುರಿತು ಮಾತನಾಡುತ್ತಿದ್ದರೆ, ಇತ್ತ ಇನ್ನೊಂದು ಕಡೆಯಿಂದ ಬಹಳ ವೇಗವಾಗಿ ಮನಸ್ಥಿತಿಗಳನ್ನು ರೂಪಿಸಲಾಗುತ್ತಿದೆ. ವೈಚಾರಿಕತೆಯೆಂಬುದು ನಮ್ಮೊಳಗೆ ಇಳಿದು ಕುಳಿತಾಗ ನಮಗೆ ಸುತ್ತಲಿನ ಈ ಮನಸ್ಥಿತಿಗಳನ್ನು ರೂಪಿಸುತ್ತಿರುವವರು ಯಾರು, ಯಾಕೆ ಎಂಬುದೂ ಎದ್ದು ಕಾಣುವುದರಿಂದಾಗಿ, ಅರಿವು ನಮ್ಮ ಗುರುವಾಗುವ ಬದಲಿಗೆ ನಮ್ಮ ವೇದನೆಯಾಗುತ್ತಿರುವುದು ಈ ಕಾಲದ ದುರಂತವಾಗಿದೆ. ಇಂತಹ ಸ್ಥಿತಿಗಳಿಗೆ ಕನ್ನಡಿ ಹಿಡಿದಂತೆ ವಿನಯಾ ಒಕ್ಕುಂದರ 'ಅನುದಿನದ ದಂದುಗ' ಕೃತಿ ಇದೆ.

ಇದು ಐವತ್ತೊಂದು ಅಂಕಣ ಬರಹಗಳ ಸಂಕಲನ. ದಿನ ಪತ್ರಿಕೆಗೆ ವಾರಕ್ಕೊಮ್ಮೆ ಬರೆಯುತ್ತಿದ್ದ ಅಂಕಣವು ತನ್ನ ಸುತ್ತಲಿನ ಘಟನೆಗಳನ್ನು, ಸಂಗತಿಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ. ಆಧುನಿಕತೆ ಎಂಬ ಅಲೆಯು ಹೊಸ ಹೊಸ ಜೀವನೋಪಾಯಗಳನ್ನೂ, ತಂತ್ರಜ್ಞಾನಗಳನ್ನೂ ತಂದು ದಡಕ್ಕೆ ಎಸೆಯುತ್ತಿರುವಂತೆಯೇ ಹೊಸ ಹೊಸ ಶೋಷಣೆಯ ಅಸ್ತ್ರಗಳನ್ನೂ ಶೋಧಿಸಿಕೊಡುತ್ತಿರುತ್ತದೆ. ಗುಜ್ಜರ್ ಮದುವೆ ಎಂಬುದನ್ನೇ ನೋಡಬಹುದು. ಈ ದೇಶದಲ್ಲಿ ಹೆಣ್ಣಿನ ಮದುವೆ ಎಂಬುದು ಅವಳ ಹುಟ್ಟಿನೊಂದಿಗೇ ತಳುಕು ಹಾಕಿಕೊಂಡು ಅವಳ ಭವಿಷ್ಯವನ್ನು ನಿರ್ಧರಿಸುವ ಖಳನಂತೆ ವ್ಯವಹರಿಸುತ್ತದೆ. ಹೀಗಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅವಳ ಹುಟ್ಟನ್ನು ಹೊಸಕಿ ಹಾಕಿದವರಿಗೆ ಅವಳಿಲ್ಲದೇ ಬಾಳುವುದು ಸಾಧ್ಯವಿಲ್ಲ ಎಂಬ ತಿಳುವಳಿಕೆಯೇ ಇರುವುದಿಲ್ಲ. ಹೆಣ್ಣುಮಕ್ಕಳ ತೀವ್ರ ಕೊರತೆ ಅನುಭವಿಸಿದವರು ತಮಗೆ ಬೇಕಾದಂತೆ ಎಲ್ಲ ಸಂಪ್ರದಾಯಗಳನ್ನೂ ತಿರುಚಬಲ್ಲರು. ಉತ್ತರ ಕರ್ನಾಟಕದ ಕಡುಬಡ ಹೆಣ್ಣುಮಕ್ಕಳನ್ನು ಗುಜ್ಜರ್ ಮದುವೆಯ ಹೆಸರಿನಲ್ಲಿ ಅಪಹರಿಸಲಾಗುತ್ತಿದೆ. ಅಲ್ಲಿ ಅವಳನ್ನು ಇಡೀ ಮನೆಗೇ ವಧು ಮಾಡಲಾಗುತ್ತಿದೆ. ವಧು ಎಂಬ ಸುಂದರ ಹೆಸರಿನಲ್ಲಿ ಅವಳನ್ನು ಬಲವಂತದಿಂದ ವೇಶ್ಯೆಯಾಗಿಸಲಾಗುತ್ತಿದೆ. ಇದನ್ನೆಲ್ಲಾ ಕಾನೂನಿನ ಕುಣಿಕೆಗೆ ಸಿಗದಂತೆ ನಿರ್ವಹಿಸಲಾಗುತ್ತಿದೆ. ಇದಕ್ಕಿಂತ ಕುಡುಕನೋ, ಸಿಡುಕನೋ ಯಾವನೋ ಒಬ್ಬ ಇಲ್ಲಿನವನೇ ಸಿಕ್ಕಿ ಬಿಟ್ಟರೆ ಅದೊಂದು ಪುಣ್ಯಪ್ರಾಪ್ತಿ ಎನಿಸುವ ಈ ವಿದ್ಯಮಾನವನ್ನು ಹೇಗೆಂದು ವಿವರಿಸುವುದು? ಇಂತಹ ಸಂಕಟಗಳಿಗೆ ಕನಿಷ್ಠ ತನ್ನೊಂದು ನಿಟ್ಟುಸಿರನ್ನಾದರೂ ಸೇರಿಸುವ ಪ್ರಯತ್ನದಂತೆ ವಿನಯಾ ಬರೆಯುತ್ತಾರೆ.

ಆಧುನಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗೆ ಕಣ್ಣು, ಕಿವಿಗಳು ಇಲ್ಲ. ಹೃದಯವಂತೂ ಇಲ್ಲವೇ ಇಲ್ಲ. ಅದಕ್ಕಿರುವುದು ಬಕಾಸುರನ ಹೊಟ್ಟೆ ಮಾತ್ರ. ಆ ಹೊಟ್ಟೆ ತಾನು ಏನು ಮಾಡಿದರೂ ಸಮರ್ಥಿಸಿಕೊಳ್ಳಬಲ್ಲ ಹೊಸ ಪುರಾಣಗಳನ್ನು ಸೃಷ್ಟಿಸುತ್ತದೆ. ಈ ಹೊಸ ಪುರಾಣಗಳೊಂದಿಗೆ ಸೆಣಸಾಡಲು ಸಾಧ್ಯವಾಗದಂತೆ ಆ ಹಸಿವನ್ನೂ ನಮ್ಮೊಳಗೆ ವರ್ಗಾಯಿಸುವ ಹಲವು ಹತಾರುಗಳನ್ನು ಅದು ಸೃಷ್ಟಿಸಿದೆ. ಸದಾ ಅಭದ್ರತೆಯಲ್ಲೇ ಇರಬೇಕಾದ ಉದ್ಯೋಗ ವ್ಯವಸ್ಥೆಯೊಳಗೆ ಇದು ಸಲೀಸು. ಮಾಧ್ಯಮಗಳೇಕೆ ತನ್ನ ನೈತಿಕತೆಗಳನ್ನು ಮಾರಿಕೊಳ್ಳುತ್ತಿವೆ? ಮತ್ತು ಅದನ್ನು ನೋಡುಗರಿಗೂ, ಓದುಗರಿಗೂ ದಾಟಿಸುತ್ತಿದೆಯೆಂದರೆ ಅದು ಬಕಾಸುರ ಹಸಿವೆಯ ರೋಗವನ್ನು ತಗುಲು ಹಾಕಿಕೊಂಡಿದೆ. ಈ ಕಾರಣದಿಂದಾಗಿ ಇಂದು ಸತ್ಯವು ಸುಳ್ಳಾಗಿಯೂ ಸುಳ್ಳುಗಳು ನಿಜವಾಗಿಯೂ ಗೋಚರವಾಗುವ ಮಾಯಾ ವಿದ್ಯೆಯನ್ನು ಪ್ರಚುರ ಪಡಿಸಲಾಗುತ್ತಿದೆ. ಅದಕ್ಕೆ ಧರ್ಮ, ಸಂಪ್ರದಾಯ, ಭಕ್ತಿ, ದೇಶಭಕ್ತಿ, ಬಹುಸಂಖ್ಯಾತತೆ ಇನ್ನೂ ಏನೇನೋ ಹೆಸರುಗಳನ್ನು ನೀಡಲಾಗುತ್ತಿದೆ. ಇವು ಹೆಸರುಗಳು ಮಾತ್ರ. ವಿಷಯಗಳಲ್ಲ. ಈ ಸಂಕಲನದಲ್ಲಿರುವ ಹಲವು ಲೇಖನಗಳು ಈ ಹಿನ್ನೆಲೆಯಲ್ಲಿವೆ. ಮಿಲ್ಕಿ ಎಂಬ ಉದ್ಯೋಗವೂ..., ಮನೆಯ ಅಂಗಳವೀಗ ಮಾಯಾಬಜಾರು, ಸೌಲಭ್ಯವೆಂಬ ಸಂಕೋಲೆಯಲ್ಲಿ, ಮೌಢ್ಯವೆಂಬ ನಿರಂತರ ಉತ್ಪಾತ, ಏನಾಗಿದೆ ನನ್ನ ಧಾರವಾಡಕ್ಕೆ?, ಕೂಡು ಬದುಕು ಮತ್ತು ಕಲ್ಪಿತ ವೈರ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?, ಹಣಕ್ಕೆ ಹೀರಿಕೊಳ್ಳುವ ಗುಣವಿದೆ, ಹುಷಾರು, ಊರೂರುಗಳೀಗ ವೃದ್ಧಾಶ್ರಮಗಳು, ಆಳುತ್ತಿವೆ ಜಾಹೀರಾತುಗಳು. . . ಹೀಗೆ.

ಸಂಕಲನದಲ್ಲಿ ಅತಿ ಹೆಚ್ಚು ಚರ್ಚೆಯಾಗಿರುವುದು ಹೆಣ್ಣೊಡಲ ಅಳಲುಗಳು. ಮಾತಾಡಿದಷ್ಟೂ ಮುಗಿಯದ, ಮುಳುಗಿದಷ್ಟೂ ಆಳವಾಗಿರುವ ಈ ವಿಚಾರಗಳು ಬಹುಶಃ ಹೇಳುವವರಲ್ಲೇ ಬಳಲಿಕೆ ಉಂಟು ಮಾಡುತ್ತವೆಯೇ ಹೊರತು, ಸಾಮಾಜಿಕ ಬದಲಾವಣೆಗಳನ್ನು ಸುಮಧುರಗೊಳಿಸುವೆಡೆಗೆ ಹೆಜ್ಜೆ ಹಾಕುತ್ತದೆ ಎಂದು ನಿರೀಕ್ಷಿಸುವುದು ದುಸ್ತರ ಎಂಬಂತಾಗಿದೆ. ಮನೆಯ ಅಂಗಳಕ್ಕೆ ಕಾಲಿಡುವುದೂ ಲಜ್ಜೆಗೇಡಿತನವೆನಿಸಿಕೊಂಡ ಕಾಲದಿಂದ ಸ್ವಲ್ಪ ಮುಂದಕ್ಕೆ ಬಂದಿದ್ದೇವಾದರೂ ಹೆಣ್ಣು ಗದರಿಕೆಗೆ, ಬೆದರಿಕೆಗೆ ಈಡಾಗುವುದು ನಿಂತಿಲ್ಲ. ಬದಲಿಗೆ ಈ ಬೆದರಿಕೆಗಳು ಹೊಸ ರೂಪ ಧರಿಸಿವೆ. ಈ ನಡುವೆ ಹೆಣ್ಣನ್ನು ಬಂಡವಾಳಶಾಹಿ ಮೌಲ್ಯಗಳಿಗೆ ಸಲೀಸಾಗಿ ಬಗ್ಗಿಸಲಾಗುತ್ತಿದೆ. ಈ ಕುರಿತು ವಿನಯಾ ಆತಂಕ ವ್ಯಕ್ತಪಡಿಸುತ್ತಾರೆ. ಕೊಂಡ ಹಾದೂ ಕನಸು ಕಾಣುತ್ತಿದ್ದ ಹೆಣ್ಣಿನ ಪ್ರಜ್ಞೆಯ ಮೇಲೆ ನಾಗರಿಕ ಸವಲತ್ತುಗಳು ದಾಳಿ ಮಾಡಿ ಗಂಡು ಮಾದರಿಗಳತ್ತ ಅವಳು ಜೋಲುವ ಅಪಾಯಗಳ ಬಗೆಗೆ ಎಚ್ಚರಿಸುತ್ತಾರೆ. ಸೌಲಭ್ಯದ ಸಂಕೋಲೆಗಳಿಂದ ಅವಳನ್ನು ಬಂಧಿಸುವುದರೆಡೆಗಿನ ಅವಳ ಅವಜ್ಞೆಯೆಡೆಗೆ ಬೆರಳು ತೋರುತ್ತಾರೆ. ಅದೇ ಹೊತ್ತಿಗೆ ಹೆಣ್ಣಿಗೆ ಸೀಮಿತಗೊಳಿಸಿದ ತಾಯಿಪ್ರಜ್ಞೆ ಗಂಡಿಗೂ ವಿಸ್ತರಿಸಿ ಲೋಕಪ್ರಜ್ಞೆಯಾಗಬೇಕೆಂದು ಒತ್ತಾಯಿಸುತ್ತಾರೆ.

ನಿಜ, ಒಂದು ಆಯಾಸ ಇಲ್ಲಿನ ಲೇಖನಗಳನ್ನು ಒಟ್ಟಿಗೇ ಓದಿದಾಗ ಆಗುತ್ತದೆ. ಅದು ಓದಿನದ್ದಲ್ಲ. ಲೋಕದ ದಂದುಗದೆಡೆಗಿನ ಆಯಾಸ. ಬದುಕಿನ ಒಂದು ಮಗ್ಗುಲಿನೆಡೆಗಿನ ಒಳಗುದಿಯ ದರ್ಶನ ಇಲ್ಲಿದೆ. ಇದು ದಿಟವಾದರೂ ಅಲ್ಲಲ್ಲಿ ಇನ್ನೊಂದು ಮಗ್ಗುಲೂ ಮುಖ ತೋರಿದ್ದರೆ ನಮ್ಮೊಳಗೊಂದು ಆಶಾವಾದವನ್ನು ಹುಟ್ಟುಹಾಕಲು ದೀಪವಾಗಿ ಸಹಕರಿಸೀತೇನೋ. ಇಲ್ಲಿ 'ಮಾಡುವೆನೆಂಬುದು ಮನದಲಿ ಬಂದಡೆ' ಎಂಬ ಬರಹ ನನಗೆ ಆ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಈ ಲೇಖನದ ಕೊನೆಯ ಪ್ಯಾರಾಗ್ರಾಫ್‌ನ್ನು ಬಿಟ್ಟುಬಿಟ್ಟರೆ ಅದರ ಶಕ್ತಿ ಇನ್ನಷ್ಟು ಹೆಚ್ಚುತ್ತದೆ. ಲೋಕದ ದಾರಿ ತಾನಾಗಿ ಕಾಣುತ್ತದೆ ಅನ್ನಿಸುತ್ತದೆ.

**-ಡಾ. ಸಬಿತಾ ಬನ್ನಾಡಿ**

ಹಿರಿಯ ಲೇಖಕ ಜ. ಹೊ. ನಾರಾಯಣಸ್ವಾಮಿಯವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.-ಸಂ..

ಪು : ಬಹುಮುಖ ಲೇ. ಡಿ.ಎಸ್. ನಾಗಭೂಷಣ ಪ್ರ: ರೂಪ ಪ್ರಕಾಶನ, ಮೈಸೂರು ಪು: ೩೫೬ ಬೆಲೆ : ರೂ. ರೂ. ೩೦೦/-

## ಲೋಕ ಸಂಗತಿಗಳ ಕಟು-ಮಧುರ ನೋಟ




ಲಾಭ-ನಷ್ಟದ ಲೆಕ್ಕಾಚಾರಗಳಿಂದ ದೂರವಿದ್ದು ಇದೇ ಕಾರಣಕ್ಕೆ ಖಡಕ್ ನುಡಿ ಮತ್ತು ನಿಲುವುಗಳಿಗೆ ಹೆಸರಾಗಿರುವ ಡಿ.ಎಸ್. ನಾಗಭೂಷಣ ಅವರ ಇತ್ತೀಚಿನ ಕೃತಿ 'ಬಹುಮುಖ'. ೩೫೬ ಪುಟಗಳ ಈ ಕೃತಿಯಲ್ಲಿ ಸಮಕಾಲೀನ ರಾಜಕೀಯ ವಿದ್ಯಮಾನಗಳು, ಸಾಹಿತ್ಯ ಸಂಸ್ಕೃತಿ, ಪ್ರವಾಸ, ನುಡಿಚಿತ್ರಗಳು, ಪತ್ರಸಂವಾದ ಮತ್ತು ಪ್ರತಿಕ್ರಿಯೆಗಳ ಗೊಂಚಲುಗಳಿವೆ. ಇಲ್ಲಿ ಹಬ್ಬಿಕೊಂಡಿರುವ ಅಲೋಚನೆ ಪ್ರಕ್ರಿಯೆಗಳ ಬೀಸು ಕೂಡ ದೊಡ್ಡದಿದೆ. ಈ ಕಾರಣಕ್ಕೆ ಇದು 'ಬಹುಮುಖ'

ಮೇಲ್ನೋಟಕ್ಕೆ ಡಿಎಸ್‌ಎನ್ ಬರಹ ಮತ್ತು ವಾಗ್ವಾದ ಬಗೆ 'ಎಲ್ಲವನ್ನೆತ್ತಿ ಕುತ್ತಿ ತೀರದ ತುರಿಕೆ, ಅರಬ್ಬಿ ಠಾಕಣದ ಪೊಗರಿ'ನಂತೆ ಕಂಡರೂ ಇಲ್ಲಿ ಸತ್ಯನಿಷ್ಠತೆ, ಪ್ರಾಮಾಣಿಕತೆ ಮತ್ತು ಎಲ್ಲವನ್ನೂ ಜನಪರ ದೃಷ್ಟಿಯಿಂದಲೇ ಕಾಣಬೇಕು, ಬೌದ್ಧಿಕ ವಿಲಾಸಕ್ಕಿಂತ ಸಾಮಾನ್ಯ ಜನರ ನುಡಿಗಟ್ಟುಗಳಲ್ಲೇ ನಾವು ಮಾತಾಡಬೇಕು, ಸವಕಲು ಹತ್ಯಾರಗಳನ್ನು ಬಿಸಾಡಿ ಹೊಸದನ್ನು ಸೃಜಿಸಿಕೊಳ್ಳಬೇಕು. ಈ ರೂಪಾಂತರ, ನವೀಕರಣ ಮತ್ತು ಹೊಸ ಭಾಷೆಗಳಿಂದ ಮಾತ್ರ ಲೋಕ-ಸಂಗತಿಗಳನ್ನು ಸರಿಯಾಗಿ ಗ್ರಹಿಸಲು ಸಾಧ್ಯ ಎಂಬ ಅಚಲ ವಿಶ್ವಾಸ ಮಿಡಿಯುವುದು ಅನುಭವಕ್ಕೆ ಬರುತ್ತದೆ.

ಸೋಗಲಾಡಿತನ, ಪೊಲಿಟಿಕಲ್ ಕರೆಕ್ಟ್‌ನೆಸ್, ಒಪ್ಪಿತಗಳಿಗೆ ತುಡಿಯುವ ಧೋರಣೆ ಮತ್ತು ಡಬಲ್‌ಸ್ಟೆಕ್‌ಗಳಿಗೆ ಡಿಚ್ಚಿ ಹೊಡೆಯುವ ಆವೇಗ ಇಲ್ಲಿ ನಿಗಿ ನಿಗಿ ಎನ್ನುತ್ತದೆ. ಇದು ಲಂಕೇಶ್‌ರನ್ನು ಮತ್ತೆ ಮತ್ತೆ ನೆನಪಿಸುತ್ತದೆ. ಕಾಳಜಿಗಳು ಉಡಾಪೆಯಾಗದಂತೆ, ನೀತಿನಿಷ್ಠತೆ ಅಹಂಭಾವಗಾದಂತೆ, ಸಿದ್ಧಾಂತಗಳು-ಮಠಗಳು, ಕೋಟೆಗಳೂ ಆಗದಂತೆ ಇಲ್ಲಿನ ನಿರೂಪಣೆಗಳಲ್ಲಿ ವಹಿಸಿರುವ ಎಚ್ಚರ ಕೂಡ ಗಮನ ಸೆಳೆಯುತ್ತದೆ.

'ಬಹುಮುಖ'ದ ಮೊದಲ ಭಾಗದ ೧೩ ಬರಹಗಳು ರಾಜಕೀಯ ಆಗುಹೋಗುಗಳ ಕುರಿತದ್ದಾಗಿದೆ. ಬಿಜೆಪಿಯ ಪ್ರವರ್ಧಮಾನ, ಮೋದಿ ಆಡಳಿತ, ಉಪಚುನಾವಣೆ, ಮತ್ತು ಕೆಲ ರಾಜ್ಯಗಳಲ್ಲಿ ಮೋದಿ ದಿಗ್ವಿಜಯ, ಕೋಮುವಾದಿ ವಿರೋಧಿ ರಾಜಕಾರಣದ ಕಿಲುಬಿಡಿದ ನಡೆಗಳ ಬಗ್ಗೆ ಡಿಎಸ್‌ಎನ್ ಜನಪ್ರಿಯ ಹಾದಿಯನ್ನು ಬಿಟ್ಟು ಕಾಲು ಹಾದಿಯತ್ತ ಹೆಜ್ಜೆ ಹಾಕುತ್ತಾರೆ. ತೆಳು ಗ್ರಹಿಕೆಗಳನ್ನು ತಳ್ಳಿ ಹಾಕುತ್ತಾರೆ.

ಕುಟುಂಬ ರಾಜಕಾರಣ, ಭ್ರಷ್ಟಾಚಾರ ಮತ್ತು ಐತಿಹಾಸಿಕ ಪ್ರಮಾದಗಳಿಗಾಗಿ ಕಾಂಗ್ರೆಸ್‌ಅನ್ನು ಟೀಕಿಸುವ ಡಿಎಸ್‌ಎನ್ ಕೋಮುವಾದ ಬಲಿಯುವುದಕ್ಕೆ ಮತ್ತು ಬಿಜೆಪಿ ಅಧಿಕಾರಕ್ಕೆ ಬರುವುದಕ್ಕೆ ಕಾಂಗ್ರೆಸ್ ಹೇಗೆ ಸುಲಭದ ದಾರಿ ಮಾಡಿಕೊಟ್ಟಿತು ಎಂಬುದನ್ನು ಸಾಧಾರಪೂರ್ವಕವಾಗಿ ನಿರೂಪಿಸುತ್ತಾರೆ. "ಶಾಬಾನು ಪ್ರಕರಣ, ಬಾಬ್ರಿ ಮಸೀದಿ ಬೀಗ ತೆರವು, ರಾಮಲಲ್ಲಾ ಪೂಜೆಗೆ ಅವಕಾಶ –ಇದೆಲ್ಲವೂ ರಾಜೀವ್ ಗಾಂಧಿಯ ಪೆದ್ದುತನದ ಚಾರಿತ್ರಿಕ ತಪ್ಪುಗಳು. ಹಿಂದು ಅಸ್ಮಿತೆಯ ಮರುಸ್ಥಾಪನೆಗೆ ದಿಡ್ಡಿ ಬಾಗಿಲು ತೆರೆದಿಟ್ಟಿತು. ಇಷ್ಟಾದರೂ ಭಾರತದ ಜನ ಮಾನಸ ಎರಡು ಬಾರಿ ಸೋನಿಯಾ ಗಾಂಧಿ ಅವರನ್ನೇ ಬೆಂಬಲಸಿತು. ಕಾಂಗ್ರೆಸ್‌ನ ಹತ್ತು ವರ್ಷಗಳ ಆಡಳಿತದ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಬಿಜೆಪಿ ಅಧಿಕಾರಕ್ಕೆ ಬರುವಂತಾಯಿತು. ಬಿಜೆಪಿ ಒಂದು ಪರ್ಯಾಯ ರಾಜಕೀಯ ಶಕ್ತಿಯಾಗಿದ್ದೇ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಜಡತೆ ಮತ್ತು ಭ್ರಷ್ಟತೆಯಿಂದ. ಮೋದಿಯನ್ನು ವಿರೋಧಿಸುವವರು ಅವರು ಜನರಿಂದ ಆಯ್ಕೆಯಾದ ಪ್ರಧಾನಿ ಎನ್ನುವ ಅರಿವಿಟ್ಟುಕೊಂಡೇ ಮಾತನಾಡಬೇಕು," ಎನ್ನುತ್ತಾರೆ. "ಎಲ್ಲ ದುಷ್ಟ ಶಕ್ತಿಗಳನ್ನೂ ಕ್ಷಮಿಸಿ ಹಿಂದು ಕೋಮುವಾದದ ವಿರುದ್ಧ ಮಾತ್ರ ಹೋರಾಟ ಬೇಕೆನ್ನುವುದು ಯಾವ ರೀತಿಯಲ್ಲೂ ಪ್ರಗತಿಪರ ರಾಜಕಾರಣ ಎಂದೆನಿಸುವುದಿಲ್ಲ," ಎಂದು ಡಿಎಸ್‌ಎನ್ ಪ್ರತಿಪಾದಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸೆಕ್ಯುಲರಿಸ್ಟ್‌ಗಳ ಮಿತಿಗಳನ್ನು ದೊಡ್ಡ ಗಂಟಲಿನಲ್ಲಿ ಟೀಕಿಸುವಾಗ ಅದರ ಅರ್ಥ ಮೋದಿ ಆಡಳಿತದ ಗುಣಗಾನವೇನೂ ಅಲ್ಲ. ಮೋದಿ ಅವರದ್ದು ಮಾತಿನ ಮಾಯಜಾಲ ಎನ್ನುವ ಅರಿವು ಇಲ್ಲಿನ ವಾಗ್ವಾದಗಳ ಭೂಮಿಕೆಗೆ ಇದ್ದೇ ಇದೆ.

ಬಿಜೆಪಿ ವಿರುದ್ಧ ಎಲ್ಲ ಪಕ್ಷಗಳನ್ನು ಒಗ್ಗೂಡಿಸಲು ಅಂಧ್ರ ಸಿಎಂ ಚಂದ್ರಬಾಬು ನಾಯ್ಡು ಒಗ್ಗೂಡಿಸುತ್ತಿರುವ ಈ ಸಂದರ್ಭದಲ್ಲಿ ಕೋಮುವಾದಿ ವಿರೋಧಿ ರಾಜಕಾರಣದ ಗೊತ್ತುಗುರಿಗಳನ್ನು ಸರಿಯಾಗಿ ವಿವರಿಸಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇಲ್ಲಿನ ಆಲೋಚನೆಗಳ ಪ್ರಸ್ತುತತೆ, ಅರ್ಥವಂತಿಕೆ, ಔಚಿತ್ಯ ಬೆಳೆಯುತ್ತ ಹೋಗುತ್ತದೆ.

ಭಾಗ 3ರಲ್ಲಿ ಅಡಕವಾಗಿರುವ ಕೆಲವು ಶ್ರದ್ಧಾಂಜಲಿ ಬರಹಗಳಲ್ಲಿ ಡಿಎಸ್‌ಎನ್ ಅವರ ಆರ್ದ್ರ ಸಂವೇದನೆ ಕಾಣಿಸುತ್ತದೆ. ಕಾಲವಾದವರ ಕುರಿತು ಪೊಳ್ಳು ಭಾವುಕತೆ ಮತ್ತು ನಿರರ್ಥಕ ಸದ್ಭಾವದ ಮಿತಿಗಳನ್ನು ದಾಟಿ ವ್ಯಕ್ತಿತ್ವದ ಜಲದ ಕಣ್ಣುಗಳನ್ನು ತೆರೆಯುವ ಕಾರಣಕ್ಕೆ ಇವು ಮನಸ್ಸಿಗೆ ಮುಟ್ಟುತ್ತವೆ. ಇಲ್ಲಿ ಬರುವ ಹೊ. ಶ್ರೀನಿವಾಸಯ್ಯ, ರಾಜಶೇಖರ ಕೋಟಿ, ಪ್ರೊ. ಕೃಷ್ಣಪ್ಪ ಮತ್ತು ತಂಗಿ ರಾಜಮ್ಮನ ಕುರಿತ ಬರಹಗಳು ನೆನಪುಗಳ ನಿರ್ಮಿತಿ. ಅನ್ಯ ಚರಿತ್ರೆಯನ್ನು ಹೇಳುವಾಗ ಅದು ಡಿಎಸ್‌ಎನ್ ಚರಿತ್ರೆಯೂ ಆಗುತ್ತದೆ; ಸಾಮಾಜಿಕ ವ್ಯಕ್ತಿತ್ವದ ಗತಿ ಮತ್ತು ರೂಪಾಂತರಗಳ ಕತೆಯೂ ಆಗುತ್ತದೆ. ಆಂದೋಲನಗಳ ಮೂಲಕ ಗಟ್ಟಿ ನೆಲೆಯನ್ನು ರೂಪಿಸಿಕೊಳ್ಳುವ ರಾಜಶೇಖರ ಕೋಟಿ ಅವರ ವರ್ಧಮಾನ ವಿಕಾಸವನ್ನು ಮಂಡಿಸುವ ಬರಹ, ಸ್ವವಿಮರ್ಶೆಯೂ ಆಗುತ್ತದೆ. ಒಂದು ಹಂತದಲ್ಲಿ 'ಆಂದೋಲನ'ದ ಉಸ್ತುವಾರಿಯನ್ನು ಡಿಎಸ್‌ಎನ್‌ಗೆ ಒಪ್ಪಿಸುವ ಸಲಹೆಯೊಂದು ಕೆಲ ಸಮಾಜವಾದಿ ಗೆಳೆಯರಲ್ಲಿ ಪ್ರಸ್ತಾಪಿತವಾಗುತ್ತದೆ. ಆದರೆ ಅದು ಸಾಧ್ಯವಾಗುವುದಿಲ್ಲ. ಹತ್ತಾರು ವರ್ಷಗಳ ನಂತರ 'ಆಂದೋಲನ' ದೈತ್ಯಕಾರವಾಗಿ ಬೆಳೆದು ನಿಂತಿರುತ್ತದೆ. ಅದನ್ನು ಕಂಡು "ಒಂದು ವೇಳೆ ಕೋಟಿಯವರು ಪತ್ರಿಕೆ ಹೊಣೆಯನ್ನು ನಮಗೆ ಬಿಟ್ಟುಕೊಟ್ಟಿದ್ದರೆ ಆಂದೋಲನದ ಯಶಸ್ಸಿನ ಒಂದಂಶವನ್ನಾದರೂ ಸಾಧಿಸಲಾಗುತ್ತಿತ್ತೇ?" ಎನ್ನುವ ಪ್ರಶ್ನೆ ಡಿಎಸ್‌ಎನ್ ಅವರನ್ನು ಕಾಡುತ್ತದೆ. ಆಪ್ತತೆಯಲ್ಲೂ ಅಂತರ ಕಾಯ್ದುಕೊಂಡು ವ್ಯಕ್ತಿತ್ವದ ತಳಗಳನ್ನು ಹುಡುಕುವ ತನ್ನನ್ನು ತಾನು ಪರೀಕ್ಷಿಸುವ ಗುಣ ಈ ಗೊಂಚಲಿನ ಇತರ ಬರಹಗಳಲ್ಲೂ ಕಾಣಿಸುತ್ತದೆ.

ಸಾಹಿತ್ಯ-ಸಂಸ್ಕೃತಿ-ಪ್ರವಾಸ ವಿಭಾಗದ ಬರಹಗಳಲ್ಲಿ ತಮ್ಮೂರು ತ್ಯಾಮಗೊಂಡ್ಲುವಿನಲ್ಲಿ ನಡೆದ ನೆಲಮಂಗಲ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಡಿಎಸ್‌ಎನ್ ಅವರು ಊರೊಂದರ ಪ್ರಾಕೃತಿಕ ಪರಿಸರ ಮತ್ತು ಸಂಸ್ಕೃತಿಯ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಣ ಮಾಧ್ಯಮದ ಪಲ್ಲಟ್ಲ ವಹಿಸುವ ಪಾತ್ರವನ್ನು ಗುರುತಿಸಲು ಮಾಡಿರುವ ಪ್ರಯತ್ನ ಕುತೂಹಲ ಹುಟ್ಟಿಸುವಂತಿದೆ.

**ಒಂದು ತೀವ್ರ ಸ್ಪಂದನ:** ಇಡೀ ಪುಸ್ತಕ ಚರ್ಚೆ ಮತ್ತು ಸಂವಾದದ ಬಗೆಯನ್ನು ಹೊಂದಿದೆ. ಈಗ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲಿ ವಿಚಾರವೊಂದಕ್ಕೆ ತೀವ್ರವಾಗಿ ಪ್ರತಿಸ್ಪಂದಿಸುವ ನಮ್ಮ ನಂಬಿಕೆ, ನಿಲುವುಗಳನ್ನು ಆಳವಾಗಿ ಪರೀಕ್ಷಿಸಿಕೊಳ್ಳುವ ಬಗೆಯೊಂದು ಕಾಣುತ್ತಿಲ್ಲ. ಇಂಥ ಸನ್ನಿವೇಶದಲ್ಲಿ ಚರ್ಚೆ, ಸಂವಾದದ ಮಾದರಿ ಮತ್ತು ಅದರ ಫಲಿತಕ್ಕೆ ಮಾದರಿಯಾಗಿ 'ಗಾಂಧಿ ಮತ್ತು ಸಮಾಜವಾದಿಗಳು: ರಾಮಚಂದ್ರ ಗುಹಾ ಅವರೊಂದಿಗೆ ಒಂದು ಸಂವಾದ'ವಿದೆ. 30 ಪುಟಗಳ ವ್ಯಾಪ್ತಿಯಲ್ಲಿ ಹಬ್ಬಿಕೊಂಡಿರುವ ಈ ಸಂವಾದದಲ್ಲಿ ಪಾಲ್ಗೊಂಡು ಇಬ್ಬರು ಚಿಂತಕರು ವಿಚಾರಗಳನ್ನು ಬೆಳೆಸುತ್ತ ಸಾಗುತ್ತಾರೆ. ಗಾಂಧಿ ಮತ್ತು ಸಮಾಜವಾದಿಗಳ ಗಾಢ ನಂಟನ್ನು ಅಲ್ಲಗಳೆಯುವ ಗುಹಾ ಆನಂತರ ಡಿಎಸ್‌ಎನ್ ಒದಗಿಸುವ ಆಧಾರ ಕೃತಿಗಳನ್ನು ಗಮನಿಸಿ ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆ. ನಮ್ಮ ಬೌದ್ಧಿಕ ಸಂವಾದಗಳು ಕೂಗು ಮಾರಿಯಾಗುತ್ತಿರುವ ಈ ದಿನಗಳಲ್ಲಿ ಇಲ್ಲಿರುವ ಸಂವಾದ ಮನಸ್ಸಿಗೆ ಮುಟ್ಟುತ್ತದೆ.

ಸಂವಾದ ಸಂಸ್ಕೃತಿಯನ್ನು ಬೆಳೆಸುವ ಹೊಣೆಗಾರಿಕೆಯಿಂದ ಪತ್ರಿಕೆಗಳು ನಿಧಾನಕ್ಕೆ ಕಳಚಿಕೊಳ್ಳುತ್ತಿರುವ ವಿಪರ್ಯಾಸಗಳನ್ನು ಭಾಗ-೫ರಲ್ಲಿರುವ ಪ್ರತಿಕ್ರಿಯೆಗಳಿಂದ ಗೊತ್ತಾಗುತ್ತದೆ. ಸಾಮಾಜಿಕ ಜಾಲತಾಣಗಳಿಂದ ಈಗ ಪತ್ರಿಕೆಗಳೇ ಅಪ್ರಸ್ತುತವಾಗುವ ಸನ್ನಿವೇಶ ಉಂಟಾಗಿದೆ. ಆದರೆ ಈ ತಾಣಗಳು ಜಾತಿ, ಮತ, ಪಂಥ, ಸ್ವರತಿ ಮತ್ತು ವ್ಯಕ್ತಿಗಳ ಆರಾಧನೆಯ ತಾಣಗಳಾಗಿವೆ. ಈ ಮಿತಿಗಳನ್ನು ನಿವಾರಿಸಿಕೊಳ್ಳುವುದರ ಮೂಲಕ ವಿಚಾರವಂತಿಕೆಯನ್ನು ಬೆಳೆಸಬೇಕಾಗಿದೆ. ಇದಕ್ಕೆ ಡಿಎಸ್‌ಎನ್ ಫೇಸ್ಬುಕ್ ಬರಹಗಳು ಒತ್ತಾಸೆಯಾಗಿವೆ.

**–ಕೆ. ವೆಂಕಟೇಶ**


ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಡಾ. ಜಿ. ಪರಮೇಶ್ವರ
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ಪ್ರತಿನಿತ್ಯ ಆಹಾರದಲ್ಲಿ
ಅಯೋಡಿನ್‌ಯುಕ್ತ ಉಪ್ಪನ್ನೇ ಬಳಸಿ
ಅಯೋಡಿನ್ ಕೊರತೆಯಿಂದ ರಕ್ಷಣೆ ಪಡೆಯಿರಿ
ಅಯೋಡಿನ್
ಒಂದು ಸೂಕ್ಷ್ಮ ಪೋಷಕಾಂಶ
ದೈಹಿಕ, ಮಾನಸಿಕ
ಬೆಳವಣಿಗೆಗೆ ಅತ್ಯಗತ್ಯ
ಅಯೋಡಿನ್ ಕೊರತೆಯಿಂದ ಉಂಟಾಗುವ ನ್ಯೂನತೆಗಳು
ಮಕ್ಕಳಲ್ಲಿ : ಬುದ್ಧಿಮಾಂದ್ಯತೆ, ಕುಂಠಿತ ಬೆಳವಣಿಗೆ,
ಕಿವುಡು ಮತ್ತು ಮೂಕತನ
ಗರ್ಭಿಣಿಯಲ್ಲಿ : ಪದೇ ಪದೇ ಗರ್ಭಪಾತ
ನಿರ್ಜೀವ ಶಿಶುವಿನ ಜನನ
ವಯಸ್ಕರಲ್ಲಿ : ನಿಶ್ಶಕ್ತಿ, ಗಳಗಂಡ
ರೋಗವುಂಟಾಗುತ್ತದೆ
ಪ್ರಕಟಣೆ : ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಕರ್ನಾಟಕ ವಾರ್ತೆ
KarnatakaVarthe
KarnatakaVarthe.Official
karnatakainformation.gov.in


ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಡಾ॥ ಜಿ. ಪರಮೇಶ್ವರ
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ರಕ್ತದಾನ ಮಾಡಿ ಜೀವ ಉಳಿಸಿ
ಯಾರು ರಕ್ತದಾನ ಮಾಡಬಹುದು
ಹೆಣ್ಣು ಗಂಡೆಂಬ ಭೇದವಿಲ್ಲದೇ 18 ರಿಂದ 60 ವರ್ಷದ ಒಳಗಿರುವ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದು
ಗಂಡಸರು 3 ತಿಂಗಳಿಗೆ ಒಮ್ಮೆ ಮತ್ತು ಹೆಂಗಸರು 4 ತಿಂಗಳಿಗೆ ಒಮ್ಮೆ ರಕ್ತದಾನ ಮಾಡಬಹುದು
ದಾನಿಯ ದೇಹದ ತೂಕ 45 ಕೆಜಿಗಿಂತ ಹೆಚ್ಚಿರಬೇಕು
ಪ್ರಕಟಣೆ : ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಕರ್ನಾಟಕ ವಾರ್ತೆ
KarnatakaVartha
KarnatakaVartha.Official
karnatakainformation.gov.in

**'ಹೊಸ ಮನುಷ್ಯ' ಓದುಗರೆಲ್ಲರಿಗೆ**

**ಹಾರ್ದಿಕ ಕ್ರಿಸ್‌ಮಸ್ ಶುಭಾಶಯಗಳು**



**ಎಸ್.ಎನ್. ತಿಮ್ಮನಗೌಡ್ರ**

**ಮತ್ತು ಗೆಳೆಯರು, ಕೊಪ್ಪಳ**

## ತಿಂಗಳ ಸಾಲುಗಳು...



ಜ್ಞಾನವೆಂದರೆ ಎಲ್ಲ ಕರ್ಮಗಳು, ಎಲ್ಲ ಯೋಚನೆಗಳಿಂದ ನಿವೃತ್ತರಾಗುವುದು ಎಂದರ್ಥವಲ್ಲ. ಹಾಗಿದ್ದಿದ್ದರೆ ಈ (ಜ್ಞಾನದ) ಸ್ಥಿತಿಗೂ ಮತ್ತು ನಿದ್ರೆಗೂ ಏನು ವ್ಯತ್ಯಾಸವುಳಿಯಿತು? ಮಹಾತ್ಮರೆಲ್ಲರೂ ಬಹಳ ಕ್ರಿಯಾಶೀಲರೆಂದು ಹೇಳಲ್ಪಟ್ಟಿದೆ ಮತ್ತು ವಾಸ್ತವವಾಗಿ ಅವರು ಕ್ರಿಯಾಶೀಲರೇ.

–ರಮಣ ಮಹರ್ಷಿ

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**

**ಲೆಕ್ಕ ಪರಿಶೋಧಕರು, ಮೈಸೂರು**

ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568

Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga-577204( Karnataka)